# ಡೋಹರ ನಿಂಬನಿ ಕಕ್ಕಯ್ಯ



ರಾ.ಕ. ನಾಯಕ

# ಡೋಹರನೆಂಬೆನೆ ಕಕ್ಕಯ್ಯ

ರಾ. ಕಾ. ನಾಯಕ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - 560 002.

DOHARANEMBENE KAKKAIAH : A Drama by Sri Ra. Ka Nayaka Kakathi, Belgaum District.

| | | |
|---|---|---|
| Published by | : | B. T. Munirajaiah<br>Registrar<br>Karnataka Nataka Academy<br>Ravindra Kalakshetra, J. C. Road<br>Bangalore - 560 002. |
| Chief Editor | : | C. G. Krishnaswamy |
| Editors | : | Dr. Siddhaling Pattanashetti<br>K. V. Nagaraj Murthy<br>Hooli Shekhar<br>T. Raghu |
| First Edition | : | 2001 |
| © | : | Ra. Ka. Nayaka |
| Pages | : | 90 |
| Typeset and Printed by | : | Sri Muneshwara Printers<br># 185, Cubbonpet Main Road<br>Bangalore - 560 002. ✆ : 2217456 |
| Cover Design | : | Lakshminarayana, T. Raghu |
| Price | : | Rs. 40/- |

---

| | | |
|---|---|---|
| ಡೋಹರನೆಂಬೆನೆ ಕಕ್ಕಯ್ಯ | : | ನಾಟಕ |
| ಲೇಖಕರು | : | ಶ್ರೀ ರಾ. ಕ. ನಾಯಕ |
| ಪ್ರಕಾಶಕರು | : | ಬಿ. ಟಿ. ಮುನಿರಾಜಯ್ಯ<br>ರಿಜಿಸ್ಟ್ರಾರ್<br>ಕರ್ನಾಟಕ ನಾಟಕ ಅಕಾಡೆಮಿ<br>ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ<br>ಬೆಂಗಳೂರು - 560 002. |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ॥ ಸಿದ್ಧಲಿಂಗ ಪಟ್ಟಣಶೆಟ್ಟಿ<br>ಕೆ. ವಿ. ನಾಗರಾಜಮೂರ್ತಿ<br>ಹೂಲಿ ಶೇಖರ<br>ಟಿ. ರಘು |
| ಪ್ರಥಮ ಮುದ್ರಣ | : | 2001 |
| ಪುಟಗಳು | : | 90 |
| ಮುದ್ರಣ | : | ಶ್ರೀ ಮುನೇಶ್ವರ ಪ್ರಿಂಟರ್ಸ್, ಬೆಂಗಳೂರು-560 002 |
| ಮುಖಪುಟ ವಿನ್ಯಾಸ | : | ಲಕ್ಷ್ಮೀನಾರಾಯಣ ಮತ್ತು ಟಿ. ರಘು |
| ಬೆಲೆ | : | ರೂ. 40-00 |
| ಸೂಚನೆ | : | ನಾಟಕ ಪ್ರಯೋಗಿಸಲು ಇಚ್ಛಿಸುವವರು ರೂ. 100-00 ಗಳ ಗೌರವ ಧನ ಕಳುಹಿಸಿ ಲೇಖಕರಿಂದ ಲಿಖಿತ ಒಪ್ಪಿಗೆ ಪಡೆಯತಕ್ಕದ್ದು. |

# ಮುನ್ನುಡಿ

ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಸಾಕಷ್ಟು ಕೃತಿಗಳು ಬರೆಯಲ್ಪಟ್ಟು ಪ್ರಕಟವಾಗುತ್ತಿದ್ದರೂ ವಿಶೇಷವಾಗಿ ನಾಟಕ ಪ್ರಕಾರದಲ್ಲಿ ಮಾತ್ರ ನಿರಾಶೆಯೆ ಆಗಿದೆ ಎಂದು ಹೇಳಬೇಕು. ಇದು ಕೇವಲ ಕನ್ನಡದಲ್ಲಿ ಅಷ್ಟೇ ಅಲ್ಲ, ಭಾರತದಲ್ಲಿ ಇತರ ಭಾಷೆಗಳಲ್ಲಿಯೂ ಇರುವಂತಹ ಪರಿಸ್ಥಿತಿ. ಕರ್ನಾಟಕ ನಾಟಕ ಅಕಾಡೆಮಿಯು ಈ ದಿಕ್ಕಿನಲ್ಲಿ ಆಗಾಗ ವಿವಿಧ ರೀತಿಯಲ್ಲಿ ಪ್ರಯತ್ನಿಸಿ ಹೆಚ್ಚು ಹೆಚ್ಚು ನಾಟಕಗಳು ಬರುವಂತೆ ಪ್ರಯತ್ನಿಸುತ್ತಿದೆ.

ಪ್ರಕಟಿತ ನಾಟಕಗಳಿಗೆ ಪ್ರೋತ್ಸಾಹ ಕೊಡುವುದು, ಹೊಸ ನಾಟಕಗಳ ಪ್ರಯೋಗಕ್ಕೆ ಆರ್ಥಿಕ ನೆರವು ಕೊಡುವುದು, ಮುಂತಾದ ಯೋಜನೆಗಳು ಸಾಕಷ್ಟು ಫಲ ನೀಡಿವೆ. ಇದೇ ನಿಟ್ಟಿನಲ್ಲಿ ಒಂದು ಹೊಸ ಯೋಜನೆಯನ್ನು ರೂಪಿಸಿಕೊಂಡು ಅಕಾಡೆಮಿ ಪ್ರಯತ್ನ ಮಾಡಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಕನಿಷ್ಠ ಐದು ನಾಟಕಗಳನ್ನಾದರೂ ಬರೆಸಿ ಹೊರತರಬೇಕೆಂಬ ಉದ್ದೇಶದಿಂದ ಬೇರೆ ಬೇರೆ ನಾಟಕ ಬರೆಯಬಲ್ಲ ಲೇಖಕರು ಹಾಗೂ ಅವರಿಗೆ ನೆರವಾಗುವ ನಿರ್ದೇಶಕರುಗಳನ್ನು ಸಂಪರ್ಕಿಸಿದೆವು.

ಇದರ ಅಂಗವಾಗಿ ಕೆಳವರ್ಗದಿಂದ ಬಂದ ವಚನಕಾರರ ಕುರಿತು ನಾಟಕ ರಚನಾ ಶಿಬಿರವೊಂದನ್ನು ಮೈಸೂರಿನ ಶ್ರೀ ಜಗದ್ಗುರು ಡಾ॥ ಶ್ರೀ ಶಿವರಾತ್ರಿದೇಶೀ ಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಸಂಸ್ಥಾನ ಮಠ, ಮೈಸೂರು, ಇವರ ಸಹಕಾರೊಂದಿಗೆ ಏರ್ಪಡಿಸಲಾಗಿತ್ತು. ಇದರಲ್ಲಿ ಸುಮಾರು 12 ನಾಟಕಗಳು ಹೊರಬಂದವು. ಈ ಎಲ್ಲಾ ನಾಟಕಗಳ ಪ್ರಕಟಣೆಗೆ ಆಯವ್ಯಯದ ಕೊರತೆಯಿಂದಾಗಿ ಸಾಧ್ಯವಾಗಲಿಲ್ಲ. 'ಡೋಹರನೆಂಬೆನೆ ಕಕ್ಕಯ್ಯ' ಎಂಬ ನಾಟಕ ಕೆಳವರ್ಗಕ್ಕೆ ಸೇರಿದ ವಚನಕಾರನ ಕುರಿತು ಶ್ರೀ ರಾ. ಕ. ನಾಯಕ ಅವರು ರಚಿಸಿದ ನಾಟಕವನ್ನು ಮಾತ್ರ ಹೊರತರಲು ಉದ್ದೇಶಿಸಲಾಗಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಹೊರ ಬಂದ ನಾಲ್ಕು ನಾಟಕಗಳಾದ 'ಗಂಗ ಭಾರತ', 'ಕೂಡಲ ಸಂಗಮ', 'ಗೊರು ಗೊರುಕ ಗೊರುಕನ', 'ಪುಟ್ಟ ಮಾದ' ನಾಟಕಗಳನ್ನು ಅಕಾಡೆಮಿ ಈಗಾಗಲೇ ಹೊರತಂದಿದೆ. ಕೆಳವರ್ಗದಿಂದ ಬಂದ ವಚನಕಾರರ ಕುರಿತು ಬಂದ ನಾಟಕಗಳಲ್ಲಿ 'ಡೋಹರನೆಂಬೆನೆ ಕಕ್ಕಯ್ಯ' ನಾಟಕವನ್ನು ಅಕಾಡೆಮಿ ಇದೀಗ ಪ್ರಕಟ ಮಾಡುತ್ತಿದೆ.

ಈ ನಾಟಕ ರಂಗಾಸಕ್ತರ ಗಮನವನ್ನು ಸೆಳೆದು ಹೆಚ್ಚಿನ ಪ್ರಯೋಗಗಳನ್ನು ಕಂಡರೆ ನಮ್ಮ ಪ್ರಯತ್ನ ಸಾರ್ಥಕವೆಂದು ಭಾವಿಸುತ್ತೇವೆ. ಈ ನಾಟಕವನ್ನು ಸಕಾಲದಲ್ಲಿ ಬರೆದುಕೊಟ್ಟ ಶ್ರೀ ರಾ.ಕ. ನಾಯಕ ಅವರನ್ನು ಹಾಗೂ ಅಕಾಡೆಮಿ ಮೂಲಕ ಈ ನಾಟಕವನ್ನು ಪ್ರಕಟಿಸುವಲ್ಲಿ ಎಲ್ಲಾ ರೀತಿಯಲ್ಲೂ ನೆರವಾದ ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ, ಶ್ರೀ ಕೆ. ವಿ. ನಾಗರಾಜಮೂರ್ತಿ, ಶ್ರೀ ಹೂಲಿಶೇಖರ, ಶ್ರೀ ಟಿ. ರಘು ಹಾಗೂ ಎಲ್ಲಾ ಸದಸ್ಯರು ಮತ್ತು ನಾಟಕ ಅಕಾಡೆಮಿಯ ರಿಜಿಸ್ಟ್ರಾರ್‌ರವರಾದ ಶ್ರೀ ಬಿ. ಟಿ. ಮುನಿರಾಜಯ್ಯ ಮುದ್ರಕರಾದ ಶ್ರೀ ಲಕ್ಷ್ಮೀನಾರಾಯಣ್, ಶ್ರೀ ಮುನೇಶ್ವರ ಪ್ರಿಂಟರ್ಸ್, ರಕ್ಷಾ ಪುಟದ ವಿನ್ಯಾಸ ಮಾಡಿಕೊಟ್ಟ ಶ್ರೀ ಟಿ. ರಘು, ಲಕ್ಷ್ಮೀನಾರಾಯಣ ಅವರುಗಳನ್ನು ಪ್ರೀತಿಯಿಂದ ನೆನೆಯುತ್ತೇನೆ.

(ಸಿ. ಜಿ. ಕೃಷ್ಣಸ್ವಾಮಿ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು

# ಡೋಹರನೆಂಬೆನೆ ಕಕ್ಕಯ್ಯ

## ನಾಟಕದ ಕುರಿತು ವಾಸ್ತವಿಕ ವಿಚಾರಗಳು

ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಭಕ್ತಿ ಆಂದೋಲನದ ಕಾಲ ಒಂದು ಮಹತ್ವದ ಘಟ್ಟ. ಈ ಭಕ್ತಿ ಆಂದೋಲನವು ಇಡಿಯಾಗಿ ಭಾರತದಲ್ಲೆಲ್ಲ ಒಂದೇ ಕಾಲಕ್ಕೆ ಒಂದೇ ಬಗೆಯಾಗಿ ವ್ಯಾಪಿಸಲಿಲ್ಲ, ಒಂದೊಂದು ಕಡೆ ಒಂದೊಂದು ರೀತಯಲ್ಲಿ ಮೈದೋರಿತು. ಈ ಭಕ್ತಿ ಆಂದೋಲನದ ವೈಶಿಷ್ಟ್ಯವೆಂದರೆ ಇದು ಜಡವಾಗುತ್ತಿದ್ದ ಸಮಾಜ ವ್ಯವಸ್ಥೆಯನ್ನು ಸಚೇತನ ಗೊಳಿಸಿತು. ವ್ಯಕ್ತಿಗೆ ತನ್ನಿಷ್ಟದಂತೆ ವಿಕಾಸಗೊಳ್ಳುವ, ಉದ್ಯೋಗ ಹಮ್ಮಿಕೊಳ್ಳುವ ಸ್ವಾತಂತ್ರ್ಯವಿಲ್ಲದಂತಾಗುವುದೇ ಸಮಾಜದ ಜಾಡ್ಯ. ಈ ಜಾಡ್ಯವು ನಮ್ಮ ದೇಶದಲ್ಲಿ ಜಾತಿಗಳ ರೂಪದಲ್ಲಿ ವ್ಯಕ್ತವಾದಷ್ಟು ಬೇರೆ ರೀತಿಯಲ್ಲಿ ಆಗಿಲ್ಲ.

ವಂಶಪರಂಪರೆಯಿಂದ ಉದ್ಯೋಗ ಮುಂದುವರಿಯುವುದು ಈ ಜಾತಿಗಳ ಒಂದು ಮಹತ್ವದ ಅಂಗವಾದರೆ ಊಟ-ವಿವಾಹ ಕ್ರಿಯೆಗಳು ಆಯಾಯ ವಂಶಪರಂಪರೆಯ ಗುಂಪಿನವರಲ್ಲೇ ನಡೆಯಬೇಕೆಂಬುದು ನಿಷ್ಠುರ ನಿಯಮವಾಗುವುದು (Endogamy) ಜಾತಿಗಳನ್ನು ಜಾಡ್ಯಮಯವಾಗಿಸುವ ಮಹತ್ವದ ತಂತ್ರ. ಸಗೋತ್ರವಿವಾಹ ನಿಷಿದ್ಧವೆಂದ ಧರ್ಮ ಶಾಸ್ತ್ರದಲ್ಲೇ ಸಜಾತೀಯ ವಿವಾಹವೇ ಯೋಗ್ಯವೆಂಬ ನಿಯಮ ರೂಪುಗೊಂಡುದು ಒಂದು ಕೌತುಕ. ವಂಶಪರಂಪರೆಯಿಂದ ಉದ್ಯೋಗ ಮುಂದುವರಿಯುವುದರಿಂದ ಆಯಾ ಉದ್ಯೋಗದ ಕೌಶಲವು ವೃದ್ಧಿಯಾಗುವುದೆಂಬ ಆತಂಕವೂ ಅನುಭವವೇದ್ಯವಾಗಿದೆ. ಇದು ಇತ್ತೀಚಿನ ವ್ಯಕ್ತಿ ಸ್ವಾತಂತ್ರ್ಯ, ಸಮಾಜ ವ್ಯವಸ್ಥೆ ಮುಂತಾದ ಪದಗಳ ಬಳಕೆ, ಚರ್ಚೆ ರೂಢವಾಗುವ ಮೊದಲಿನಿಂದಲೂ ವೇದ್ಯವಾಗಿದೆ.

ಅಂತೆಯೆ ಒಂದೆಡೆ ಜಾತಿ ಬಂಧನವು ಬಿಗಿಯಾಗುತ್ತ ಸಮಾಜ ಮನ್ನಣೆ ಪಡೆಯುತ್ತ ಸಾಗುವ ಪ್ರವೃತ್ತಿ ಮುಂದುವರಿದಂತೆ ಇನ್ನೊಂದು ಕಡೆ ಈ ಜಾತಿ ಬಂಧನವನ್ನು ಮೀರಿ ವ್ಯಕ್ತಿ ಚೇತನಗಳು ತಮ್ಮ ಅಭಿಜಾತ ಸ್ವಾತಂತ್ರ್ಯವನ್ನು ಪಡೆಯುತ್ತ ಸಾಗುವ ಉದಾಹರಣೆಗಳೂ ಬಲು ಪ್ರಾಚೀನ ಕಾಲದಿಂದ ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಲ್ಲಲ್ಲಿ ಸಿಗುತ್ತವೆ. ಇಂತಿಂಥ ಜಾತಿಗಳ ಸ್ತ್ರೀ-ಪುರುಷ ಸಂಬಂಧದಿಂದ ಹುಟ್ಟಿದ ಶಿಶುವಿಗೆ ಇಂತಿಂಥ

ಜಾತಿ ಎಂದು ಮನು ಜಾತಿಗಳನ್ನು ವ್ಯವಸ್ಥೆಗೊಳಿಸುವ ಪ್ರಯತ್ನವನ್ನು ತನ್ನದೇ ಆದ ರೀತಿಯಲ್ಲಿ ಮಾಡಿದವನಾದರೂ ಅವನ ಹುಟ್ಟಿಗಿಂತ ಎಷ್ಟೋ ಶತಮಾನ ಮೊದಲಿನಿಂದೇ ಜಾತಿಗಳ ಲಂಘನೆಯೂ ಕಾಲಕಾಲಕ್ಕೆ ನಡೆದುದುಂಟು. ಸಮಾಜ ಹೇರುವ ಹೆದರಿಸುವ ಬಂಧನಗಳನ್ನು ಮೀರಿ ವ್ಯಕ್ತಿ ಪ್ರಬಲವಾಗಿ ತನ್ನ ಪ್ರಭಾವ ಬೀರುವಂತಾದಾಗ ಸಮಾಜವು ಅವನೊಬ್ಬನಿಗೆ ದೇವಾಂಶ ಸಂಭೂತನೆಂದು ಉಳಿಸಿಕೊಳ್ಳುತ್ತ ಬಂದಿದೆ. ಋಷಿಗಳ ಮೂಲ ಇದಕ್ಕೊಂದು ಉದಾಹರಣೆ. ಅದನ್ನು ವಿಜಯವೆನ್ನಬೇಕೊ ಅಥವಾ ಮತ್ತೂ ಜಾತಿಗಳು ಉಳಿದುಕೊಂಡೇ ಬಂದುದರಿಂದ ಜಾತಿಗಳು ವ್ಯಕ್ತಿಯನ್ನು ಮನ್ನಣೆಯ ವಂಚನೆಯ ಅಡಿ ಸೋಲಿಸಿವೆ ಎನ್ನಬೇಕೊ ತಿಳಿಯದು.

ಈ ಪ್ರಕ್ರಿಯೆಯ ಪ್ರಾರಂಭದ ಪ್ರತಿನಿಧಿ ಎಂಬಂತೆ ನಾವು ಸತ್ಯಕಾಮ ಜಾಬಾಲನ ಕಥೆಯತ್ತ ನೋಡಬಹುದು. ಅವನಿಗೆ ಬ್ರಾಹ್ಮಣ್ಯವನ್ನು ಕೊಟ್ಟ ವ್ಯವಸ್ಥೆಯು ಆತ ಬ್ರಾಹ್ಮಣ ಸಂತಾನವೆಂದು ನಿರ್ಧರಿಸಿ ತನ್ನ ಜಾತಿ ಪ್ರಣಾಲಿಯನ್ನು ಉಳಿಸಿಕೊಂಡಿತು. ಈ ಕಥೆಯಲ್ಲಿ ಪಿತೃಪ್ರಧಾನ ಸಂಸ್ಕೃತಿಯ ಬೀಜ, ಗುಣಕರ್ಮ ವಿಭಾಗಶಃ ಜಾತಿಗಳೆಂಬ ಕಲ್ಪನೆಯ ಕುರುಹು, ಅದಕ್ಕೆ ತಕ್ಕಂತೆ ಉದ್ಯೋಗಾವಕಾಶ ನೀಡುವ ವಿಚಾರ-ಇವೆಲ್ಲ ಸಮ್ಮಿಳಿತವಾಗಿವೆ. ಈ ರೀತಿ ಜಾತಿ ಕಲ್ಪನೆಯು ಅಡ್ಡಗೋಡೆಯ ಮೇಲಿನ ದೀಪದಂತೆ ಆ ಕಡೆಗೂ ಈ ಕಡೆಗೂ ಬೆಳಕು ಚೆಲ್ಲುತ್ತ ತನ್ನ ಅಸ್ತಿತ್ವವನ್ನು ಸ್ಥಿರಪಡಿಸಿಕೊಂಡಿರುವುದು ಕಂಡು ಬರುತ್ತದೆ.

ಜಾತಿ ವ್ಯವಸ್ಥೆ ಹುಟ್ಟಿದ-ಬೆಳೆದ ಕುರಿತು ಮಾಕ್ಸ್‌ಮುಲರ್, ತಿಲಕ, ರಾಧಾಕೃಷ್ಣನ್ ಮೊದಲಾದ ಅನೇಕ ಜನ ವಿದ್ವಾಂಸರಿಂದ ಒಂದೊಂದು ವಿಧದಲ್ಲಿ ಚರ್ಚಿಸಲಾಗಿದೆ. ಮೊದಲು ಬ್ರಾಹ್ಮಣ-ಕ್ಷತ್ರಿಯ ಎಂಬೆರಡೇ ವರ್ಗಗಳಿದ್ದು ಮುಂದೆ ಚಾತುರ್ವರ್ಣ್ಯ ಬೆಳೆಯಿತೆಂದು ಮ್ಯಾಕ್ಸ್‌ಮುಲರ್, ತಿಲಕ ಹೇಳಿದರೆ ವರ್ಣವ್ಯವಸ್ಥೆ ಒಂದು ಆದರ್ಶವಾಗಿತ್ತೇ ವಿನಃ ಪ್ರತ್ಯಕ್ಷದಲ್ಲಿ ಆಚರಣೆಯಲ್ಲಿ ಯಾವಾಗಲೂ ಇರಲಿಲ್ಲ ಎಂದು ಪಣಿಕ್ಕರ್ ಹೇಳುವರು. ಬುಡಕಟ್ಟಿನ ಸಂಸ್ಕೃತಿಯಲ್ಲಿ ರಾಜನೂ-ಪುರೋಹಿತನೂ ಒಬ್ಬನೇ ಆಗಿರುವುದನ್ನೂ ಗಮನಿಸಲಾಗಿದೆ. ಮುಂದೆ ಬಂದ ಮನುವಿನ ವಿಭಜನೆಯಂತೂ ಒಂದು ಸೂಚನೆ (prescription) ಆಗಿತ್ತೇ ವಿನಃ ಸ್ಥಿತಿ ವಿಶ್ಲೇಷಣೆ ಆಗಿರಲಿಲ್ಲವೆಂಬುದೂ ಒಂದು ಅಭಿಪ್ರಾಯ. ಏನೇ ಆದರೂ ಜಾತಿಗಳ ಹುಟ್ಟಿನ ಬೆಳವಣಿಗೆಯ ಯಾವುದೇ ವಿಚಾರ ಇನ್ನೂ ಸರ್ವಮಾನ್ಯತೆಯನ್ನು ಪಡೆದಿಲ್ಲ. ನಿಖರವಾದ ಐತಿಹಾಸಿಕ ಅಂಶಗಳ ಅಭಾವದಿಂದ ಎಲ್ಲ ಚರ್ಚೆಗಳು ತಾರ್ಕಿಕ ನೆಲೆಯಲ್ಲಿ hypothetical ರೀತಿಯಲ್ಲಿ ಉಳಿದಿವೆ.

ಆದರೂ ಈ ಜಾತಿಜಾಡ್ಯವನ್ನು ಮೀರುವ ಸಾಮೂಹಿಕ ಯತ್ನಗಳು ಭಕ್ತಿ ಆಂದೋಲನದ ಕಾಲಕ್ಕೆ ನಡೆದಂತೆ ಆ ಹಿಂದೆ ನಡೆದಿಲ್ಲ. ಭಕ್ತಿ ಆಂದೋಲನವು ಈ ದಿಕ್ಕಿನಲ್ಲಿ ಒಂದು ಮಹತ್ವದ ಚಳವಳಿ ಎಂದು ಒಪ್ಪಬಹುದಾದರೂ ಅದರ ಅಂತಿಮ ಗುರಿ ಪಾರಮಾರ್ಥಿಕವಾಗಿದ್ದುದರಿಂದ ಅದು ಮಾಡಿದ, ಮಾಡಯಿಸಿದ, ಮಾಡಲು ಯತ್ನಿಸಿದ ಸಾಮಾಜಿಕ ಪರಿವರ್ತನೆ ಎಲ್ಲವೂ ಮೇಲುತ್ಪನ್ನ (by-product) ಆಗಿಯೇ ಉಳಿಯಿತು.

ತೀರ ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ವೈಚಾರಿಕತೆಯ ಪರಿಚಯವಾದ ಮೇಲಷ್ಟೆ ಇದನ್ನು ತೊಲಗಿಸಲು ವೈಜ್ಞಾನಿಕವಾಗಿ ಪ್ರಯತ್ನಗಳು ನಡೆದಿವೆ. ಇಂದು ಸಂವಿಧಾನಾತ್ಮಕವಾಗಿಯೂ ಜಾತಿ ನಿರ್ಮೂಲನೆಗೆ ಬೆಂಬಲ ದೊರೆತಿದೆ. ಆದರೂ ಸಾಮಾಜಿಕ ಮನಃ ಪರಿವರ್ತನೆ ಇಲ್ಲದೆ ಸಂವೈಧಾನಿಕ ಉಪಾಯವೂ ವಿಶೇಷವೇನನ್ನೂ ಸಾಧಿಸದೇ ಹೋಗಿದೆ. ಒಂದು ರೀತಿಯಲ್ಲಿ ಆಧುನಿಕ ರಾಜಕೀಯ ವ್ಯವಸ್ಥೆಯಡಿ ಮತಜೇಬು (vote-pocket) ಪರಿಕಲ್ಪನೆಯಿಂದ ಈ ಜಾತಿಗಳು ಪರೋಕ್ಷವಾಗಿ ಹೆಚ್ಚಿನ ಭದ್ರತೆ, ಭರವಸೆ, ರಕ್ಷಣೆ, ಪೋಷಣೆಗಳಿಸಿವೆ ಎಂಬುದು ಉಪಹಾಸಾತ್ಮಕ ವಿಷಯ !

ಇದಕ್ಕೆ ಮೂಲ ಮಾನವನ ಪ್ರಮುಖ ಇತಿಮಿತಿಗಳಲ್ಲೇ ಎಲ್ಲಿಯೊ ಅಡಕವಾಗಿರಬೇಕು. ಮನುಷ್ಯನಲ್ಲಿ ನೇತೃತ್ವದ ಗುಣಾಂಶಗಳಿದ್ದಂತೇ ಅನುಯಾಯಿತ್ವದ ಗುಣಾಂಶಗಳೂ ಇರುತ್ತವೆ. ಈ ಎರಡರ ಬೆಸುಗೆಯಲ್ಲಿ ಅನುಯಾಯಿಗಳ ಸಂಖ್ಯಾಬಲದಲ್ಲಿ ಜಾತಿಜಾಡ್ಯವು ಗುಪ್ತಗಾಮಿನಿಯಾಗಿ ವೃದ್ಧಿಯಾಗುತ್ತ ನಡೆದಿದೆ.

ಈ ಹಿನ್ನೆಲೆಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಮ್ಮ ನಾಡಿನಲ್ಲಿ ನಡೆದ ಭಕ್ತಿ ಆಂದೋಲನದ ಅಧ್ಯಾಯವನ್ನು ಅವಲೋಕಿಸಿದಾಗ ಹಲವಾರು ಅಂಶಗಳು ಚಿಂತನೆಗೆ ಗ್ರಾಸ ಒದಗಿಸುತ್ತವೆ.

ಅವುಗಳತ್ತ ಹೊರಳುವ ಮುನ್ನ ಈ ಅಂಶಗಳನ್ನೊಳಗೊಂಡ ಒಂದು ನಾಟಕ ರಚಿಸುವ ಹಂಬಲ ಬಹುಕಾಲ ನನ್ನಲ್ಲಿ ಸುಪ್ತವಾಗಿ ಇತ್ತು. ಆದರೂ ಪ್ರದರ್ಶನ-ಪ್ರಕಾಶನಗಳ ಭರವಸೆ ಇರಲಿಲ್ಲ. ಮೇಲಾಗಿ ವೃತ್ತಿ-ಹವ್ಯಾಸಿ, ಎರಡನ್ನೂ ಹಮ್ಮಿಕೊಂಡು ಹೋಗಬೇಕೆನ್ನುವವ ನಾನು. ಅದರಿಂದ ಎರಡೂ ಕಡೆ outsider ಬಹಿಷ್ಕೃತನಾದವ. ಹೀಗಾಗಿ ಚಾಲನೆ ಸಿಗುತ್ತಿದ್ದಿಲ್ಲ. ಅಂಥ ಚಾಲನೆ ಒಂದು ದಿನ ಆಕಾಶಭಾಷಿತದಂತೆ ಅಕಾಡೆಮಿಯ ಅಧ್ಯಕ್ಷರ ಪತ್ರ ಮತ್ತು ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಒಟ್ಟು ನೀವು ಬರೀಬೇಕು' ಎಂಬ ಆದೇಶ ಅಥವಾ ಸಂದೇಶ ರೂಪದಲ್ಲಿ ಬಂತು. ಅಲ್ಲಿಗೆ ವಿಚಾರವಾಹನದ ಗಾಲಿಗಳು ತಿರುಗಲಾರಂಭಿಸಿದವು.

ಶರಣರು ಮಾಡಿದ ಕ್ರಾಂತಿ, ಅಥವಾ ಉತ್ಕ್ರಾಂತಿ ಎನ್ನೋಣ, ಕುರಿತು ಹಲವಾರು ನಾಟಕಗಳು ಬಂದಿವೆ. ಆದರೂ ಅವುಗಳಲ್ಲಿ ಬಸವಣ್ಣನೇ protagonist ಮುಖ್ಯಪಾತ್ರವಾಗಿದ್ದಾನೆ. ಗವಾಯಿಗಳ ಕಂಪನಿಯ 'ಮಾದಾರ ಚನ್ನಯ್ಯ', ಡಾ. ಲಕ್ಕೆಯವರ ಕೆಲವು ಏಕಾಂಕಗಳು ಬಂದಿದ್ದರೂ. ಅವಾವೂ ಕನ್ನಡಿಗರ ಮನೆಮಾತಾಗಿಲ್ಲ ಬಹುಚರ್ಚಿತವಾಗಿಲ್ಲ. ಸಾಮಾನ್ಯರಿಗೆ ಪರಿಚಿತವಾಗಿಲ್ಲ. ಬಸವಣ್ಣನ ಕುರಿತು ಬಂದಿರುವ ನಾಟಕಗಳಲ್ಲೂ ಆತ ಮಂತ್ರಿಯಾಗುವುದು, ಮಂತ್ರಿ ಪದವಿಯನ್ನು ಬಿಟ್ಟುಕೊಡುವುದು ಇದನ್ನೇ ಕಥಾವಸ್ತು (plot) ವಾಗಿ ಚರ್ವಣ ಮಾಡಲಾಗಿದೆ. ಇಂಥ ಸ್ಥಿತಿಯಲ್ಲಿ minor ಶರಣರ ಕುರಿತೇ ನಾಟಕಗಳನ್ನು ರಚಿಸಿಕೊಳ್ಳಲು ಅಕಾಡೆಮಿ ಮುಂದೆ ಬಂದುದು ಒಂದು

ಯೋಗಾಯೋಗವೆಂದೇ ಹೇಳಬೇಕು. ಮರಾಠಿಯಲ್ಲಿ ಕೆಲವರ್ಗದಿಂದ ಬಂದ ಭಕ್ತಾದಿಗಳ ಕುರಿತು ಸಂಗೀತ ನಾಟಕಗಳ ಕಾಲದಿಂದಲೇ ನಾಟಕಗಳು ಬಂದಿವೆ. ಅವೆಲ್ಲ ಪ್ರಖ್ಯಾತವಾಗಿವೆ. ಸಿನೆಮಾ ಬಂದಮೇಲೆ ಸಿನೆಮಾಗಳೂ ಆಗಿವೆ. ಅವೂ ಜನಪ್ರಿಯತೆ ಗಳಿಸಿವೆ. ಆ ರೀತಿ ನಮ್ಮಲ್ಲಿ ಯಾಕಾಗಲಿಲ್ಲ ? ಉಳಿದ ಏನೇನನ್ನೋ ಎರವಲಾಗಿ ಕೊಡುಕೊಳ್ಳುವ ವ್ಯವಹಾರ ಮಾಡಿರುವ ನಾವು ಇದನ್ನೇಕೆ ಮಾಡಲಿಲ್ಲ ? ಅಂತೂ ಅವರು ಕಳೆದ ನೂರು ವರ್ಷಗಳಲ್ಲಿ ಮಾಡಿದ್ದನ್ನು ನಮ್ಮ ಅಕಾಡೆಮಿ ಒಂದು ಕಮ್ಮಟದಲ್ಲಿಯಾದರೂ ವಿಚಾರ ಮಾಡಲು ಮುಂದಾಗಿದೆ. ಮ್ಯಾಗ್ನಾಕಾರ್ಟಾದಿಮದ ಇಪ್ಪತ್ತನೆಯ ಶತಮಾನದವರೆಗೆ ಪ್ರಜಾಪ್ರಭುತ್ವವನ್ನು ಬೆಳೆಸಿ ಸಂಸತ್ತಿನ ತಾಯಿ ಎನಿಸಿಕೊಂಡ ಇಂಗ್ಲಂಡು ಹಲವು ಶತಮಾನಗಳಲ್ಲಿ ಸಾಧಿಸಿದ್ದನ್ನು ನಾವು ಸಂವಿಧಾನವನ್ನು ರಚಿಸಿ, ಸ್ವೀಕರಿಸಿ ಕ್ಷಣಾರ್ಧದಲ್ಲಿ ಸಾಧಿಸಿದ್ದೇವೆ. ಚಮತ್ಕಾರಗಳ ನಮ್ಮ ನಾಡಿನ ಈ myth ಪರಂಪರೆ ಪ್ರಸ್ತುತ ವಿಷಯದಲ್ಲೂ ಮುಂದಾಗಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಈ ಮಾತನ್ನು ಇಲ್ಲಿ ಮೋಜಿಗಾಗಿ ಹೇಳಿದೆ ಹೊರತು ಬೇರಾವ ದುರುದ್ದೇಶದಿಂದಲ್ಲ. ಅಂತೂ ಕಡೆಗೆ ಅಕಾಡೆಮಿ ಈ ವಿಚಾರ ಮಾಡಿ ಎಂದೋ ಆಗಬೇಕಿದ್ದ ಕೆಲಸಕ್ಕೆ ಇಂದಾದರೂ ಕೈಹಾಕಿ ಧೈರ್ಯದ ಹೆಜ್ಜೆ ಇಟ್ಟದ್ದೂ ಸತ್ಯ ಎಂಬುದು ನಿರ್ವಿವಾದ.

ನಮ್ಮ ನಮ್ಮ ನಾಟಕಗಳಿಗೆ ಶರಣರ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಅಕಾಡೆಮಿ ನಮನಮಗೇ ಬಿಟ್ಟು ಕೊಟ್ಟಿದ್ದರಿಂದ ಯಾವ ವಚನಕಾರನ ಆಯ್ಕೆ ಮಾಡಿಕೊಳ್ಳಬೇಕೆಂಬುದು ನನ್ನ ಮುಂದಿನ ಮೊದಲನೆಯ ಪ್ರಶ್ನೆಯಾಗಿತ್ತು. ಡೋಹರ ಕಕ್ಕಯ್ಯನ ಆಯ್ಕೆ ಮಾಡಿದೆ. ಇದಕ್ಕೆ ಕಾರಣ ಆತನು ಕಾದಿದ ಹಳ್ಳಿ 'ಕಾದರೋಳಿ' ಬೆಳಗಾವಿ ಜಿಲ್ಲೆಯಲ್ಲಿದೆ. ಆತನ ಸಮಾಧಿ ಇರುವುದು ಕಕ್ಕೇರಿಯಲ್ಲಿ. ಅದೂ ಬೆಳಗಾವಿ ಜಿಲ್ಲೆಯಲ್ಲಿದೆ. ನಾನೂ ಬೆಳಗಾವಿ ಜಿಲ್ಲೆಯವನು. ಆ ಅಭಿಮಾನ ಎಷ್ಟೇ ಮಹತ್ವದ ಕಾರಣವಾದರೂ ಆತ ಮಾಳವಾದಿಂದ ಬಂದವ ಮತ್ತು ಈ ಡೋಹರ ಸಮಾಜದ 'ಕಕ್ಕಯ್ಯ ಸಮಾಜ' ಎಂದು ಹೇಳಿಕೊಳ್ಳುವ ಜನರ ಮಾತೃಭಾಷೆ ಮರಾಠಿಯಾಗಿದೆ. ಇದೇ ಡೋಹರರದಲ್ಲಿ ಇನ್ನೊಂದು ಗುಂಪಿದೆ. ಅದರ ಮಾತೃಭಾಷೆ ಹಿಂದಿಗೆ ಹತ್ತಿರವಾಗುವ ಬುಡಕಟ್ಟಿನವರ ತರಹದ ಭಾಷೆ ಇದೆ. ಇವರು ತಾವು ರಜಪೂತರೆಂದು ಹೇಳಿಕೊಳ್ಳುತ್ತಾರೆ. ಮತ್ತು ಈ ಎರಡೂ ಬಗೆಯ ಡೋಹರರು ನಾನಿರುವ ಊರ ಸಮೀಪದಲ್ಲಿ ವಾಸಿಸುತ್ತಾರೆ. ಇವರಿಬ್ಬರ ಉದ್ಯೋಗ ಒಂದೇ ಇದ್ದರೂ ಒಂದೇ ಜಾತಿಯವರೆಂದು ಭಾವಿಸುವುದಿಲ್ಲ. ಈ ಅಂಶಗಳು ಕಕ್ಕಯ್ಯನ ಕುರಿತೇ ಬರೆಯಲು ಹೆಚ್ಚಿನ ಆಸಕ್ತಿ ಹುಟ್ಟಿಸಿದವು. ಈ ಡೋಹರರೊಳಗಿನ ಕಕ್ಕಯ್ಯ ಸಮಾಜದ ಈ ಶ್ರೇಯಕರ ಎಂಬ ಉದ್ಯೋಗ ಪತಿಗಳೊಬ್ಬರು ಬೆಳಗಾವಿಯಲ್ಲೇ ಇದ್ದಾರೆ, ಪ್ರತಿ ವರ್ಷ ಕಕ್ಕೇರಿಯಲ್ಲಿ ತಾವೇ ಮುಂದಾಗಿ ಉತ್ಸವವನ್ನು ನಡೆಸುತ್ತಾರೆ. ಅವರು ತಮ್ಮ ಮನೆಯ ಹತ್ತಿರ ಮಾತ್ರ ಪಂಡರಪುರದ ವಿಠಲನ ಗುಡಿಯನ್ನು ಕಟ್ಟಿಸಿದ್ದಾರೆ. ಅವರಿಗೆ ಕನ್ನಡ ಬಾರದು, 'ಆದರೂ ಕಕ್ಕಯ್ಯನವರದೂ ಜ್ಞಾನೇಶ್ವರರಂತೇ ಜೀವಂತ ಸಮಾಧಿ' ಎಂದು ಅಭಿಮಾನದಿಂದ, ಭಕ್ತಿಯಿಂದ ಹೇಳುತ್ತಾರೆ. ಅವರನ್ನು ಭೇಟಿಯಾದೆ. ಆಮೇಲೆ ಗ್ರಂಥಗಳತ್ತ ಹೊರಳಿದೆ.

ನಿಘಂಟುವಿನಲ್ಲಿ ಡೋಹರನನ್ನು ಡೋಮ ಎಂದು ಕರೆಯಲಾಗಿದೆ. ಈ ಡೋಹರ ಕುರಿತು ಸಮಾಜ ವಿಜ್ಞಾನಿಗಳು ಕೊಡುವ ವಿವರಗಲು ಇನ್ನೂ ವೈವಿಧ್ಯಮಯವಾಗಿವೆ. ಸ್ವತಃ ಕಕ್ಕಯ್ಯನ ಪ್ರಸಾದ ಮಹಿಮೆಯ ಕುರಿತ legend ವಿದ್ವಾಂಸರ ಚರ್ಚೆಯ ಆಹಾರವಾಗಿದೆ. ಇವೆಲ್ಲ ಕಾರಣಗಳಿಂದ ಆಸಕ್ತಿ ಇಮ್ಮಡಿಸಿತು.

ಶಿವಶರಣರೆಲ್ಲ ಶರಣ ಪದವಿಗೇರಿದ್ದು ಬಸವಣ್ಣನ ಮಹಾಮನೆಯಲ್ಲಿ. ಆ ಮಹಾಮನೆ ಕಾರ್ಯಪ್ರವೃತ್ತವಾಗಿದ್ದುದು 15-16 ವರ್ಷಗಳು ಮಾತ್ರ. ಇಷ್ಟರಲ್ಲೇ ಮೂಡಿ ಮಾಯವಾದ ಶರಣಕ್ರಾಂತಿ ಇವತ್ತಿಗೂ ಕರೇಕಲ್ಲಿನ ಮೇಲೆ ಕೊರೆದ ಗೆರೆಯಂತೆ ಅಚ್ಚಳಿಯದೆ ತನ್ನ ಪ್ರಭಾವ ಇರಿಸಿಕೊಂಡಿರುವುದು. ಆಗ ನಿರ್ಮಾಣವಾದ (ಅಥವಾ ನಿರ್ಮಾಣವಾದವುಗಳಲ್ಲಿ ಅಳಿದುಳಿದ) ವಚನರಾಶಿ ಇಂದಿಗೂ ವಿಚಾರವಂತರ ಅಮೂಲ್ಯ ನಿಧಿಯಾಗಿದೆ. ವಚನ, ಅನುಭಾವ ಮಂಟಪ, ವೀರಶೈವ ಸಿದ್ಧಾಂತ, ಷಟಸ್ಥಲ, ಅಷ್ಟಾವರಣ, ಇಷ್ಟಲಿಂಗ ಇತ್ಯಾದಿ ಪರಿಕಲ್ಪನೆಗಳು ಮತ್ತು ಶೂನ್ಯ ಸಂಪಾದನೆಗಳು, ವೀರಶೈವ ಸಿದ್ಧಾಂತ ಧರ್ಮವಾದದ್ದೂ, ಮುಂದೆ ಜಾತಿಯಾದದ್ದೂ ಮುಂತಾದ ಅಂಶಗಳು ಒಂದೊಂದೂ ಕುತೂಹಲ ಕೆರಳಿಸುವಂಥವುಗಳು. ಪ್ರತಿಯೊಂದು ವಿಷಯದಲ್ಲೂ ವಾದ-ವಿವಾದಗಳಿರುವವು. ದ್ರಷ್ಟಾರವಾಗಿ ಬಸವಣ್ಣ ಕಂಡ ಕನಸು, ಆತನನ್ನು ಬುದ್ಧ ಅಂಬೇಡ್ಕರರೊಂದಿಗೆ ಹೋಲಿಕೆ ಮಾಡಲು ಪ್ರೇರೇಪಿಸುವುದು. ಮಾರ್ಕ್ಸವಾದದೊಂದಿಗೆ ಹೋಲಿಕೆ ಮಾಡಲು ಪ್ರೇರಣೆ ನೀಡುವುದು. ಇದೆಲ್ಲ ಅದ್ಭುತ, ರಮ್ಯ ಅಷ್ಟೇ ಆಶ್ಚರ್ಯಕರ. ಬಸವನ ವಿಚಾರದ ಬಳ್ಳಿ ಈ ರೀತಿ ಬೆಳೆದುದೇ ಒಂದು ಪರಮಾಶ್ಚರ್ಯ. ಒಂದು ಮಿಥ್ (myth) ಪೌರಾಣಿಕ myth ಗಳ ಅಸಂಭಾವ್ಯತೆಯಿಂದವು ಮಿಥ್ಯವೆನ್ನಿಸಿದರೂ ಈ ವಾಸ್ತವ ಅದ್ಭುತವನ್ನು myth ಎಂದು ಕಡೆಗಣಿಸಲಾಗದು. ಈ ಹಿನ್ನೆಲೆಯಿಂದ ಡೋಹರ ಕಕ್ಕಯ್ಯನನ್ನು, ಅವನ ಕಾಲವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಬೇಕಾಗುವುದು.

ಈ ಶರಣರೆಲ್ಲ ಬಸವನಿಂದ ಆಕರ್ಷಿತರಾಗಿಯೆ ಶರಣತ್ವ ಪಡೆದುದರಿಂದ ಯಾವುದೇ ಶರಣರ ಬಗ್ಗೆ ಬರೆಯಬೇಕೆಂದರೂ ಬಸವನನ್ನು ಬಿಟ್ಟು ಬರೆಯಲಿಕ್ಕಾಗದು. ಮತ್ತು ಅವರೆಲ್ಲರ ಕಥೆಗಳು ಕಲ್ಯಾಣದಲ್ಲಿ ಬಸವನ ಉದಯದೊಂದಿಗೆ ಪ್ರಾರಂಭವಾಗಿ ಅಸ್ತದೊಂದಿಗೆ ಕೊನೆಗೊಳ್ಳುವುದರಿಂದ ಅವರ ಚರಿತ್ರೆಗಳಿಗೆ ಬಸವನ ಕಲ್ಯಾಣ ಕ್ರಾಂತಿಯ ಹಿಂಬರದೆ (backdrop) ಕಟ್ಟಿಕೊಂಡ ಹೊರತು ಗತ್ಯಂತರವಿಲ್ಲ ಎಂದು ಭಾವನೆಯಾಗುವುದು. ಸಹಜ. ಹಾಗಾದರೆ ಈ ಶರಣರೆಲ್ಲ ಕೇವಲ ರಬರ್ ಸ್ಟಾಂಪ್ (rubber stamp) ಗಳೇ ? ಅವರಿಗೆ ಅವರದೇ ಆದ ವ್ಯಕ್ತಿತ್ವ ಇರಲಿಲ್ಲವೆ ? ಇದ್ದರೆ ಮಾತ್ರ ಅವರ ಕುರಿತು ಬರೆಯಬೇಕೇ ವಿನಃ ಆದಿಲ್ಲದಿದ್ದರೆ ಬಸವನ ಕಥೆಯನ್ನೇ ಅವರ ಹೆಸರಿನಲ್ಲಿ ಹೇಳುವಂತಾಗುತ್ತಿದ್ದರೆ ಯಾಕೆ ಬರೆದು ಈಗಾಗಲೇ ಬಂದಿರುವ ಕೀರ್ತನೆಗಳ ಸಾಲಿನಲ್ಲಿ ಮತ್ತೊಂದು ರಬರ್ ಸ್ಟಾಂಪ್, xerox, copy, ಸ್ಕ್ಯಾನ್ ಮಾಡುವುದು ? ಎಂಬ ವಿಚಾರ ಬಂದು ಉತ್ಸಾಹಕ್ಕೆ ತುಸು ಹಿಂದೇಟು ಬಿತ್ತು. ಆದರೂ ಆ ನೆಪದಲ್ಲಿ ಬಸವನನ್ನಾದರೂ ತಿಳಿಕೊಳ್ಳಲು ಪ್ರಯತ್ನಿಸಿದರೆ ನಷ್ಟವೇನಿಲ್ಲವಲ್ಲ ಎಂಬ ಧೈರ್ಯದಿಂದ ಮುಂದುವರಿದೆ.

'ಬಸವಣ್ಣನ ಸಮಕಾಲೀನರು' ಎಂಬ ಗ್ರಂಥವನ್ನು ಬೆಂಗಳೂರಿನ ಬಸವ ಸಮಿತಿಯವರು ಪ್ರಕಟಿಸಿದ್ದಾರೆ. ಅದರಲ್ಲಿ ಕಕ್ಕಯ್ಯನ ಕುರಿತು ಶ್ರೀ ಹೀ. ಟಿ. ಶಾಂತವೀರಪ್ಪನವರು ಮಾಡಿದ ಚರಿತ್ರಾಂಕನವಿದೆ. ಅವರು ಕನ್ನಡ ನಿಘಂಟಿನ ರಚನೆಯಲ್ಲಿ ಉಪ ಸಂಪಾದಕರಾಗಿ ಶ್ರಮಿಸಿದರು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಎಂಬ ಲೇಖನ ಮಾಲೆ ಬರೆದವರು. 'ಶರಣ ಚರಿತಾಮೃತ' ಎಂಬುದು ಡಾ. ಸಿದ್ಧಯ್ಯ ಪುರಾಣಿಕರು ಬರೆದ ಗ್ರಂಥ. ಅದರಲ್ಲೂ ಕಕ್ಕಯ್ಯನ ಚರಿತ್ರೆ ಬಂದಿದೆ. ಅಲ್ಲಿ ಅವನದೆಂದು ಒಂದು ಚಿತ್ರ ಪ್ರಕಟಿಸಲಾಗಿದೆ. ಅದು ಒಬ್ಬ ಮೋಚಿಯದಾಗಿದೆ. ಡಾ. ಮ. ನ. ಜವರಯ್ಯನವರು ಡೋಹರರೆಂದರೆ 'ಚರ್ಮ ಹದ ಮಾಡುವ ಹೊಲೆಯರು' ಎಂದಿದ್ದಾರೆ. ನಿಘಂಟುವಿನಲ್ಲಿ ಡೋಹರ ಶಬ್ದಕ್ಕೆ ಚಾಂಡಾಲ, ಹೊಲೆಯ, ಮ್ಲೇಚ್ಛ ಎಂಬ ಪರ್ಯಾಯ ಪದಗಳನ್ನು ಕೊಡಲಾಗಿದೆ. ಮಂಗರಾಜ ನಿಘಂಟುವಿನಲ್ಲಿ (ಅಭಿನವಾಭಿಧಾನದಲ್ಲಿ) 'ಹೊಲೆಯ ನಾ ಚಾಂಡಾಲನೆಂದೆನಲು ಡೋಹರಂಗೆ ನಾಮಮಕ್ಕುಂ' ಎಂದಿದೆ. ಈ ಡೋಹರ ಡೋಮ ಪದದ ತದ್ಭವವೆಂದೂ ಹೇಳಲಾಗುತ್ತದೆ. ಡೋಮ ಎಂಬುದಕ್ಕೆ ಪ್ರಾಕೃತ ರೂಪ ಡೊಂಬ ಎಂದಿದೆ. ಆದರೆ ಪ್ರತ್ಯಕ್ಷದಲ್ಲಿ ಹೊಲೆಯ, ಡೋಹರ, ಮೋಚಿ ಇವರೆಲ್ಲ ಬೇರೆ ಬೇರೆ ಜಾತಿಗಳಾಗಿವೆ. ಮರಾಠಿಯಲ್ಲಿ ಡೋಹರ ಎಂಬುದಕ್ಕೆ ಢೋರ ಎಂಬ ಪರ್ಯಾಯ ಶಬ್ದವಿದೆ. ನಾರಾಯಣಕರ ಗುರುಗಳು, ಢೋರ ಎಂದರೆ ಮರಾಠಿಯಲ್ಲಿ ದನ ಎಂದರ್ಥ, ದನಗಳ ಚರ್ಮದ ಕೆಲಸ ಮಾಡುವುದರಿಂದ ಇವರನ್ನು ಢೋರ ಎಂದಿರಬೇಕು. ಎನ್ನುತ್ತಾರೆ. 'ಚಿತ್ರಲೇಖಾ' ಎಂಬ ಮರಾಠಿ ಪತ್ರಿಕೆಯೊಂದು ಇತ್ತೀಚೆಗೆ (ಜೂನ್ ೧೯೯೯) ಡೋಹರ ಸಮಾಜದ ಕುರಿತು ಲೇಖನವನ್ನು ಪ್ರಕಟಿಸಿದ್ದು ಅದರಲ್ಲಿ ಡೋಹ ಎಂದರೆ ನೀರಿನ ಹೊಂಡ ಎಂದರ್ಥ. ಚರ್ಮ ನೆನೆಯಲು ಇಡುವ ಕಟ್ಟೆಯನ್ನು ಡೋಹ ಎನ್ನುವರು. ಅದರಿಂದ ಡೋಹರರೆಂಬ ಶಬ್ದ ಬಂದುದೆಂದು ವಿವರಿಸಲಾಗಿದೆ. ಅಲ್ಲದೆ ಅಸ್ಪೃಶ್ಯರ ಏಳು ಉಪಜಾತಿಗಳ ಕುರಿತು ಮಾಹಿತಿ ಕೊಡಲಾಗಿದೆ. ಕಕ್ಕಯ್ಯ ಇದೇ ಸಮಾಜದವನೆಂದೂ ಅದರಲ್ಲಿ ಸ್ಪಷ್ಟಪಡಿಸಲಾಗಿದೆ. ಇಂದು ಡೋಹರ ಕಕ್ಕಯ್ಯ ಇದೇ ಸಮಾಜದವರೆಂದೂ ಹೇಳಿಕೊಳ್ಳುವವರ ಮಾತೃಭಾಷೆ ಮರಾಠೀ ಎಂಬುದೂ ವಿಚಾರಾರ್ಹವಾದ ಅಂಶ.

ತಳಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಲ್ಲಿ ಪ್ರಕಟವಾದ ಡಾ. ತ. ಸು. ಶಾಮರಾಯರು ಸಂಪಾದಿಸಿರುವ 'ಶಿವಶರಣರ ಕಥಾರತ್ನಕೋಶ'ದಲ್ಲೂ ಕಕ್ಕಯ್ಯನ ಚರಿತ್ರೆ ನಮೂದಾಗಿದೆ. ಅಲ್ಲಿ ಅವನ ಮೂರು ವಚನಗಳನ್ನು ಪ್ರಕಟಿಸಲಾಗಿದೆ. ಡಾ. ಕಲಬುರ್ಗಿಯವರು ಸಂಪಾದಿಸಿದ ಸಮಗ್ರ ವಚನ ಸಂಪುಟ ಏಳನೇ ಭಾಗ (ಸಂಕೀರ್ಣ ವಚನ ಸಂಪುಟ ಎರಡು) ದಲ್ಲಿ ಕಕ್ಕಯ್ಯನ ಆರು ವಚನಗಳು ಇವೆ.

'ಹಿಂದೀ ಭಾಷಾ ಕಾ ಇತಿಹಾಸ' ಎಂಬ ಡಾ. ಧೀರೇಂದ್ರ ವರ್ಮಾ ಅವರ ಗ್ರಂಥದಲ್ಲಿ ಮಾಳವಾದಲ್ಲಿ 'ಮಾಲವಿ' ಎಂಬುದು ಆಡುಭಾಷೆಯ ಪ್ರಭೇದ ಇತ್ತೆಂದು ಹೇಳುತ್ತಾರೆ. ಆದರೆ ಅದು ಗ್ರಾಂಥಿಕ ರೂಪ ತಾಳಲಿಲ್ಲ, ಅದನ್ನೇ ದಕ್ಷಿಣೀ ರಾಜಸ್ಥಾನಿ

ಎಂದೂ ಕರೆಯಲಾಗಿದೆ. ರಜಪೂತರೆಂದು ಹೇಳುವ ಡೋಹರರ ಭಾಷೆ ಬಹುಶಃ ಇದಾಗಿರಬಹುದು.

ಇನ್ನು ಡೋಮ ಜನರ ಕುರಿತು ಸರ್ ಜಾರ್ಜ್ ಗ್ರಿಯರ್‌ಸನ್ ಕೊಡುವ ವಿವರಣೆ ಹೀಗಿದೆ : They are the ancestors of the European gypsies, and Rom or Romany is a variant of Dom ಎನ್ನುತ್ತಾರೆ. ಅದೇ ಕಾಲಕ್ಕೆ ironically Dom is a god of death ಎಂದು ಹೇಳುತ್ತಾರೆ.

ಸರ್ ಹರ್ಬರ್ಟ್ ರಿಸ್ಲೆ ಅವರು ಡೋಮರ ಬಗ್ಗೆ ಕೊಡುವ ವಿವರಣೆ ಹೀಗಿದೆ. Among whom we find scavengers, varmin-eaters, executioners, basket makers, musicians, berglars. ಬುಟ್ಟಿ ಹೆಣೆಯುವ ಕೆಲಸ, ಸನಾದಿ ಊದುವ ಕೆಲಸ ಕೊರವರು ಮಾಡುತ್ತಾರೆ. executioners ಅಂದರೆ ಚಾಂಡಾಲರು, ಇವರು ಮರಣ ದಂಡನೆಗೊಳಪಟ್ಟವರನ್ನು ಕೊಲ್ಲುತ್ತಾರೆ. Scavengers ಅಂದರೆ ಭಂಗಿಗಳು Vermin-eaters ಯಾರು ಗೊತ್ತಿಲ್ಲ. ಆದರೆ ಇವರಲ್ಲಿ ಚರ್ಮ ಹದ ಮಾಡುವವರು tanners ಇಲ್ಲ ! ಮೇಲಾಗಿ ಇವೆಲ್ಲ ಇಂದು ಬೇರೆ ಬೇರೆ endogamous ಜಾತಿಗಳು. ಮತ್ತೂ ಮುಂದುವರಿದು ರಿಸ್ಲೆ ಕೊಡುವ ವಿವರಣೆ ಇಂತಿದೆ: ಡೋಮರೆಂದರೆ ಹೆಣ ಸುಡಲು ಕಟ್ಟಿಗೆ ಪೂರೈಸುವವರೆಂದೂ ಗೊತ್ತು. ಇದರ ಪ್ರಾಕೃತ ರೂಪ 'ಡೊಂಬ' ಎಂದರೆ ಡೊಂಬರು, ವಾಸ್ತವದಲ್ಲಿ acrobatic feast ಮಾಡುವ ಸಂಚಾರಿ ಜನಾಂಗ.

ಈ ಎಲ್ಲ ಮಾಹಿತಿಯನ್ನು ಸಮನ್ವಯ ಮಾಡಿಕೊಂಡ ಹೊರತು ಡೋಹರ ಕಕ್ಕಯ್ಯನನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ.

ಇನ್ನು ಕಕ್ಕಯ್ಯನ ಕುರಿತ ಚರಿತ್ರಾಂಶಗಳು ಇಂತಿವೆ. ಈತ ಮಾಳವಾದಿಂದ ಬಂದವ. ಇವನದು ಡೋಹರ ಜಾತಿ. ಈತನ ಪುಣ್ಯಸ್ತ್ರೀ ಒಮ್ಮೆ ಬಸವಣ್ಣನನ್ನು ಪ್ರಸಾದಕ್ಕೆ ಕರೆದಳು. ಬಸವಣ್ಣ ಏನೋ ಆಲೋಚನೆಯಲ್ಲಿ ಇದ್ದುದರಿಂದ ಗಮನಿಸದೇ ಹೋದ. ಇದರಿಂದ ಕಕ್ಕಯ್ಯ ನೊಂದುಕೊಂಡು ಬಾಗಿಲು ಮುಚ್ಚಿಕೊಂಡು ಕೂಡುವನು. ಈ ವಿಷಯ ಬಸವಣ್ಣನಿಗೆ ಧ್ಯಾನದಲ್ಲಿ ತಿಳಿಯುವುದು. ಬಸವಣ್ಣ ಕಕ್ಕಯ್ಯನ ಭೆಟ್ಟಿಗೆ ಬರುವನು. ಕಕ್ಕಯ್ಯ ಬಾಗಿಲು ತೆಗೆಯುವುದಿಲ್ಲ. ಹನ್ನೆರಡು ವರ್ಷ ಬಸವಣ್ಣ ಕಕ್ಕಯ್ಯನ ಭೆಟ್ಟಿಗೆ ಬರುವನು. ಕಕ್ಕಯ್ಯ ಬಾಗಿಲು ತೆಗೆಯುವುದಿಲ್ಲ. ಹನ್ನೆರಡು ವರ್ಷ ಬಸವಣ್ಣ ಕಕ್ಕಯ್ಯನ ಬಾಗಿಲು ಕಕ್ಕಯ್ಯನ ಬಾಗಿಲು ಕಾಯುವನು. ಒಮ್ಮೆ ಒಂದು ಇರುವೆ ಕಕ್ಕಯ್ಯನ ಮನೆಯೊಳಗಿಂದ ಒಂದು ಅಗುಳು ಅನ್ನವನ್ನು ಹಿಡಿದುಕೊಂಡು ಬರುವುದು. ಬಸವಣ್ಣ ಅದಕ್ಕೆ ಸಕ್ಕರೆ ಹಾಕಿ ಅನ್ನದ ಅಗುಳನ್ನು ಹಿಡಿದುಕೊಂಡು ಬರುವುದು. ಬಸವಣ್ಣ ಅದಕ್ಕೆ ಸಕ್ಕರೆ ಹಾಕಿ ಅನ್ನದ ಅಗುಳನ್ನು ಬಿಡಿಸಿಕೊಳ್ಳುವನು. ಮನೆಗೊಯ್ದು ಆ ಪ್ರಸಾದವನ್ನು ಸ್ನಾನ-ಪೂಜೆ ಆದ ಮೇಲೆ

ಸೇವಿಸಬೇಕೆಂದಿರುವನು. ಆದರೆ ಅಷ್ಟರಲ್ಲಿ ಅಕ್ಕ ನಾಗಮ್ಮ ಆ ಪ್ರಸಾದವನ್ನು ಸೇವಿಸುವಳು. ಆದರಿಂದ ಮುಂದೆ ಅವಳಿಗೆ ಚೆನ್ನಬಸವಣ್ಣ ಹುಟ್ಟುವನು. ಕಕ್ಕಯ್ಯ ಶಿವನಿಂದೆ ಕೇಳದ ನೇಮದಿಂದಿದ್ದ. ಒಮ್ಮೆ ಒಬ್ಬ ಹರಿಭಕ್ತ ಬ್ರಾಹ್ಮಣನನ್ನು ಕಕ್ಕಯ್ಯ ಕೆಡವಿ ಹುಳದ ರಾಶಿ ಮಾಡುವನು. ಮುಂದೆ ಶರಣರು ಕಲ್ಯಾಣವನ್ನು ತೊರೆದು ದಿಕ್ಕುದಿಕ್ಕಿಗೆ ಹೊರಟಾಗ ಕಕ್ಕಯ್ಯನು ಅಕ್ಕನಾಗಮ್ಮ ಮತ್ತು ಚೆನ್ನಬಸವಣ್ಣರನ್ನು ಪಾರು ಮಾಡುವನು. ಇವನು ಕಕ್ಕೇರಿಯಲ್ಲಿ ಬೆನ್ನಟ್ಟಿ ಬಂದ ಬಿಜ್ಜಳನ ರಾಜ್ಯದ ಸೈನ್ಯದೊಂದಿಗೆ ಕಾದಿ ಮಡಿದನು. ಇವನ ಸಮಾಧಿ ಕಕ್ಕೇರಿಯಲ್ಲಿದೆ.

ಈ ಕಥೆಯನ್ನು ಐತಿಹಾಸಿಕವಾಗಿ ನಂಬಲಾಗದು. ಇದನ್ನು ಇತಿಹಾಸಗೊಳಿಸಿ ಗ್ರಹಿಸಬೇಕಾಗುವುದು. ಪ್ರಸಾದ ಮಹಿಮೆ, ಹನ್ನೆರಡು ವರ್ಷ ಬಸವಣ್ಣ ಬಾಗಿಲು ಕಾಯುವುದು, ಹರಿಭಕ್ತನನ್ನು ಹುಳದ ರಾಶಿ ಮಾಡಿದ್ದು ಇವನ್ನು ನಂಬಲಿಕ್ಕಾಗುವುದಿಲ್ಲ.

ಇವನ ವಚನಗಳನ್ನು ಮತ್ತು ವೀರಶೈವ ಸಿದ್ಧಾಂತವನ್ನು ಅರ್ಥ ಮಾಡಿಕೊಂಡು ಕಕ್ಕಯ್ಯನ ಚರಿತ್ರೆಯನ್ನು ಸುಸಂಗತವಾಗಿ ಜೋಡಿಸುವ ಪ್ರಯತ್ನಕ್ಕೆ ತೊಡಗಿದೆ. 'ಶೂನ್ಯ ಸಂಪಾದನೆ'ಯ ಕುರಿತು ವಿಸ್ತಾರವಾಗಿ ಮತ್ತು ಸಂಕ್ಷೇಪವಾಗಿ ಬರೆದು ಹೊರ ತಂದ ಪ್ರೊ. ಸಂ. ಶಿ. ಸನೂರಮಠರ ಗ್ರಂಥಗಳನ್ನು ಅವಲೋಕಿಸಿದೆ. ಡಾ. ಶಿವ್ಪೇರುದ್ರಸ್ವಾಮಿ ಅವರ 'ಶೂನ್ಯ ಸಂಪಾದನೆಯ ಪರಿಚಯ', 'ಶರಣರ ಅನುಭಾವ ಸಾಹಿತ್ಯ' ಈ ಗ್ರಂಥಗಳನ್ನು ಅವಲೋಕನ ಮಾಡಿದೆ. ಡಾ. ಆರ್. ಸಿ. ಹಿರೇಮಠರ 'ಷಟ್‌ಸ್ಥಲ ಪ್ರಭೆಯನ್ನು ನೋಡಿದೆ.

ಶ್ರೀ ಎಚ್. ಎಂ. ಶಿವರುದ್ರೇಗೌಡರ 'ಬಸವ ಧರ್ಮ ದರ್ಶನ' ನೋಡಿದೆ. ವೀರಶೈವ ಧರ್ಮದ ಸ್ಥೂಲ ಸ್ವರೂಪವನ್ನು ತಿಳಿಯಲು ಅದು ಒಂದು ಕೈಪಿಡಿ ಇದ್ದಂತಿದೆ.

ಶ್ರೀ ಟಿ. ಎನ್. ಮಲ್ಲಪ್ಪನವರ 'ವೀರಶೈವದ ಉಗಮ ಮತ್ತು ಪ್ರಗತಿ' ಗ್ರಂಥ ನೋಡಿದೆ. ಶೈವಪರಂಪರೆಯ ಅವಿಚ್ಛಿನ್ನ ಎಳೆಯನ್ನು ಅರಿಯಲು ನೆರವಾಯಿತು. ಶ್ರೀ ರುದ್ರಮುನಿ ಎಂಬುವರು ಬರೆದ 'ಬಸವೇಶ್ವರ ಪುರಾಣ' ನೋಡಿದೆ. ಆಧುನಿಕರೊಬ್ಬರು ಪ್ರಾಚೀನರ ಚರಿತ್ರೆಯನ್ನು ಹಳೇ ರೀತಿಯಲ್ಲಿ ಬರೆಯಲು ಹೊರಟರೆ ಆಗುವ ಶೈಲಿಯ ಮಾರ್ಪಾಟನ್ನು ಗಮನಿಸಿದೆ. ಕಾರ್ನಾಡ, ಶಿವಪ್ರಕಾಶ, ಲಂಕೇಶ, ಡಾ. ಕಲಬುರ್ಗಿ, ಬಣಕಾರ ಇವರ ನಾಟಕಗಳನ್ನು ಓದಿದೆ. ಆಮೇಲೆ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆಯ ಡಾ. ವೀರಣ್ಣ ರಾಜೂರ ಅವರನ್ನು ಕಂಡೆ. ನಾನು ಮಾಡಿಕೊಂಡ ಸಿದ್ಧತೆಯ ಬಗ್ಗೆ ತಿಳಿಸಿದೆ. ಆ ಬಗ್ಗೆ ಮೆಚ್ಚಿಗೆ ಸೂಚಿಸಿ ತಾವೇ ಸಂಪಾದಿಸಿದ 'ಎಳಮಲೆಯ ಗುರು ಶಾಂತದೇವರ ವಚನ ಸಂಕಲನ'ದ ಒಂದು ಪ್ರತಿ ಕೊಟ್ಟರು. ಅದರಲ್ಲಿ cross-reference ದ ವಚನಗಳ ಮಾಹಿತಿಯನ್ನು ಅವರು ಸಂಗ್ರಹಿಸಿ ಟಿಪ್ಪಣಿ ಮಾಡಿರುವುದರಿಂದ ತುಂಬ ಉಪಯುಕ್ತವಾಯಿತು.

ಆಮೇಲೆ ಕಕ್ಕಯ್ಯನ ಸಮಾಜದವರ ಜೀವನ ವಿಧಾನ, ಉದ್ಯೋಗ, ಸ್ವರೂಪ ತಿಳಿದುಕೊಳ್ಳಲು ಹೆಬ್ಬಾಳ (ಜಿ. ಬೆಳಗಾವಿ)ಕ್ಕೆ ಹೋದೆ. ಶ್ರೀ ಕೆ. ಕೆ. ನಾರಾಯಣಕರ ಗುರುಗಳು ತುಂಬ ಆಸ್ಥೆಯಿಂದ ಅಗತ್ಯ ವಿವರಗಳನ್ನು ಒದಗಿಸಿದರು. ಶ್ರೀ ಶ್ರೇಯಕರರನ್ನು ಕಂಡು ಕಕ್ಕೇರಿಗೂ ಹೋಗಿ ಬಂದೆ.

ಇದಿಷ್ಟಾದ ಮೇಲೆ ನಾಟಕದ form ಕುರಿತು ಯೋಚನೆಗೆ ತೊಡಗಿದೆ. ಆಗ ಬರ್ಟಾಲ್ಟ್ ಬ್ರೆಶ್ಟನ ಗೆಲಿಲಿಯೊ ನಾಟಕ ತನ್ನ ಪ್ರಭಾವ ಬೀರಿತು. ಅಲ್ಲಿ ಪ್ರತಿ ದೃಶ್ಯದ ಪ್ರಾರಂಭಕ್ಕೆ ಆತ ಒಂದೊಂದು ಸೂಚನಾ ಪದ್ಯವನ್ನು ಕೊಟ್ಟಿದ್ದಾನೆ. ನಮ್ಮಲ್ಲಿ ಕಾವ್ಯಗಳಲ್ಲಿ ಮಾಡುತ್ತಿದ್ದಂತೆ ! ಆ ಪ್ರಭಾವದಲ್ಲಿ ನಾನು ಕಕ್ಕಯ್ಯನನ್ನು ಚಿತ್ರಿಸಲು ಯತ್ನಿಸಿದೆ. ಕಕ್ಕಯ್ಯ ಮಾಳವಾದಿಂದ ಬಂದ. ಅಲ್ಲಿಂದ ಇಲ್ಲಿ ಬರಬೇಕಾದರೆ ಬಸವಣ್ಣನ ಕೀರ್ತಿಯನ್ನು ಕೇಳಿ ಆತ ಪ್ರಭಾವಿತನಾಗಿದ್ದ ಎಂಬ ಭೂಮಿಕೆಯಿಂದ ಇಡೀ ವಿಷಯವನ್ನು ನೋಡತೊಡಗಿದಾಗ ಪುರಾಣದಿಂದ ಇತಿಯಾಸವನ್ನು ಹಿಂಜಿ ತೆಗೆಯಲು, ಐತಿಹ್ಯದಿಂದ ಇತಿಹಾಸವನ್ನು ವಿಂಗಡಿಸಲು ಸಾಧ್ಯವಾಯಿತು. ಅದರ ಫಲ ಈ ನಾಟಕ. ಒಂದನೆಯ ದೃಶ್ಯದಲ್ಲಿ ಕಕ್ಕಯ್ಯ ಮಾಳವಾದಿಂದ ಕಲ್ಯಾಣಕ್ಕೆ ಬರುವನು. ಕೊನೆಯ ಅಂದರೆ ಆರನೆಯ ದೃಶ್ಯದಲ್ಲಿ ಕಕ್ಕಯ್ಯನ ವ್ಯಕ್ತಿತ್ವ ಸ್ಫುಟವಾಗುತ್ತಾ, ವಿಕಾಸಗೊಳ್ಳುತ್ತಾ ಹೋಗುವುದು. ಐದನೇ ದೃಶ್ಯದಲ್ಲಿ ಅನುಭವ ಮಂಟಪದಲ್ಲಿ ಕಕ್ಕಯ್ಯ ಸಿದ್ಧಿಸಿದ ಸ್ಥಾನವನ್ನು ತೋರಿಸಿದೆ. ಒಂದನೆಯ ದೃಶ್ಯದಲ್ಲಿ 'ದೇಶಾಂತರ' ಎಂಬ ಒಂದೇ ಶಬ್ದವನ್ನು ಸಂಭಾಷಣೆಯಾಗಿ ಬಳಸಲಾಗಿದೆ. ಅದೊಂದು ಪ್ರಯೋಗ ! ನಾಟಕ ಪೂರ್ಣವಾದಾಗ ರಚನೆಯು ತೃಪ್ತಿ ತಂದಿತು.

ಆಮೇಲೆ ಮತ್ತೆ ಡಾ. ರಾಜೂರ ಅವರನ್ನು ಕಂಡು ಅವರೆದುರು ವಾಚನ ಮಾಡಿದೆ. ಮೆಚ್ಚಿದರು. ಧೈರ್ಯದಿಂದ ಅಕಾಡೆಮಿಗೆ ಪ್ರತಿಯನ್ನು ಕಳಿಸಿದೆ. ಮುಂದೆ ಸುತ್ತೂರಿನಲ್ಲಿ ನಡೆದ ಕಮ್ಮಟದಲ್ಲೂ ಪಾಲ್ಗೊಂಡು ಅಧ್ಯಕ್ಷ ಶ್ರೀ ಸಿ.ಜಿ.ಕೆ., ಡಾ. ಲಿಂಗದೇವರು ಹಳೆಮನೆ, ಡಾ. ಮ.ನ.ಜ., ಶ್ರೀ ಬಸವಲಿಂಗಯ್ಯ (ರಂಗಾಯಣ ನಿರ್ದೇಶಕರು) ಮೊದಲಾದವರೊಂದಿಗೆ ಚರ್ಚಿಸುವ ಅವಕಾಶ ಸಿಕ್ಕಿತು. ಬಿಜ್ಜಳನು ಅರಸೊತ್ತಿಗೆ ಗಳಿಸಿದ ರೀತಿಯನ್ನು ವಿವರಿಸುವ ದೃಶ್ಯ ಮೊಟಕಾಗಬೇಕೆಂದು ಸಹ ಶಿಬಿರಾರ್ಥಿಗಳು ಅಭಿಪ್ರಾಯ ಪಟ್ಟರು. ಅದನ್ನು ನಿರ್ದೇಶಕ ತನ್ನ ತಿಳಿವಿನಂತೆ ಮಾಡಬಹುದೆಂದು ಕೃತಿಯನ್ನು ಇದ್ದುದಿದ್ದಂತೆ ಪ್ರತಿ ಮಾಡಿ ಕಳಿಸಿದೆ.

ಓದುಗರ, ಸಹೃದಯ ರಸಿಕರ, ನಟ-ನಿರ್ದೇಶಕರ ಅನುಭವ, ಅಭಿಪ್ರಾಯಗಳಿಗೆ ಬಿಚ್ಚು ಮನಸ್ಸಿನ ಸ್ವಾಗತ ಸಾರಿ ಈ ಪ್ರಾಸ್ತಾವಿಕ ಪ್ರಸ್ತಾಪವನ್ನು ಮುಗಿಸುವೆ.

– ರಾ. ಕ. ನಾಯಕ.

# ಒಪ್ಪೋಲೆ

ಪುಟ 11ರ ಕೊನೆಯ 'ಮಾತು' 'ಮಠಾಧೀಶ' ಬದಲು 'ಓಲಗದವ' ಎಂದಾಗಬೇಕು.

ಪುಟ 12ರಲ್ಲಿ 3, 4, 8, 9, 13, 14ನೇ ಕ್ರಮಾಂಕದ ಮಾತುಗಳನ್ನು ಬಿಟ್ಟು ಉಳಿದವು 'ಮಠಾಧೀಶ' ಬದಲು 'ಓಲಗದವ' ಆಗಬೇಕು.

ಪುಟ 13ರಲ್ಲಿ 10, 11, 14, 17, 19, 20ನೇ ಕ್ರಮಾಂಕದ ಮಾತುಗಳನ್ನು ಬಿಟ್ಟು ಉಳಿದ ಮಾತುಗಳನ್ನು 'ಮಠಾಧೀಶ' ಬದಲು 'ಓಲಗದವ' ಎಂದಾಗಬೇಕು.

ಪುಟ 15ರಲ್ಲಿ ಮಾತ್ರ 3, 4, 5, 7, 8, 9 ಈ ಕ್ರಮಾಂಕದ ಮಾತುಗಳು ಮಾತ್ರ 'ಮಠಾಧೀಶ' ಬದಲು 'ಓಲಗದವ' ಎಂದಾಗಬೇಕು.

ಪುಟ 37 ರಿಂದ 43 ಕೊನೆಯವರೆಗೆ 'ಮಠಾಧೀಶ' ರ ಮಾತು ಬಂದಲ್ಲೆಲ್ಲಾ ಅದು 'ಓಲಗದವ' ರ ಮಾತಾಗಬೇಕು. ಮುಂದಿನ ಅಂಕೆ ಆಯಾ ಕ್ರಮಾಂಕದ 'ಓಲಗದವ' ಅಥವಾ 'ಮಠಾಧೀಶ' ಎಂಬುದನ್ನು ಸೂಚಿಸುವುದರಿಂದ ಅಂಕೆ ಹಾಗೇ ಉಳಿಯಬೇಕು. ಓದುಗರು ದಯವಿಟ್ಟು ಈ ರೀತಿ ತಿದ್ದಿಕೊಳ್ಳಬೇಕೆಂದು ವಿನಂತಿ

–ಸಂಪಾದಕರು

# ಅಂಕ - ೧

(ದೂರದಿಂದ ಸಮೂಹ ಧ್ವನಿಯಲ್ಲಿ ಮುಂದಿನ ನುಡಿ ಕೇಳಬರುವುದು. ಆಗ ರಂಗಸ್ಥಳದಲ್ಲಿ ಕತ್ತಲೆ ಇರುವುದು. ಆಲಾಪದೊಂದಿಗೆ ನುಡಿ ಪ್ರಾರಂಭವಾಗುವುದು. ಕ್ರಮೇಣ ಧ್ವನಿ ಹತ್ತಿರವಾಗುತ್ತಿರುವಂತೆ ಘನಸ್ವನವಾಗಿ ಪರಿಣಮಿಸುವುದು. ನುಡಿ ಒಂದು ಮಟ್ಟವನ್ನು ಸಾಧಿಸಿದಂತೆ ಸಾವಕಾಶವಾಗಿ ರಂಗಸ್ಥಳದಲ್ಲಿ ಬೆಳಕು ಹರಡುವುದು. ಆ ಬೆಳಕಿನಲ್ಲಿ ಕಾಣುವ ದೃಶ್ಯ ; ಕಲ್ಲಿನ ಎರಡು ಕಂಬಗಳ ಮೇಲೆ ಆಡೆ (ಅಡ್ಡಲಾಗಿ ಕೂಡಿಸಿದ ಕಟ್ಟಿಗೆಯ ತೊಲೆ), ಅದಕ್ಕೆ ಕಟ್ಟಿದ ಎರಡು ಪೇಟಿಬಂದಗಳು. (ದನಗಲ ಇಡೀ ಮೈಯ ಚರ್ಮದ ಹೊಲಿದ ಚೀಲ), 'ಮುಂಡಾಲು' (ತಲೆಯ ಭಾಗ) ಮೇಲಾಗಿ ಬಾಲದ ಭಾಗ ಕೆಳಗಿರುವಂತೆ, ಆರಳಿಕಾಯಿ, ಜಾಲಿ ತೊಗಟೆ ತುಂಬಿ ಕಟ್ಟಲಾಗಿದೆ. ಕೆಳಗೆ ನೀರಿನ ದೊಡ್ಡ ಕುಂಡವಿದ್ದು ಅದನ್ನು ಕಲ್ಲಿನ ಕಟ್ಟೆಯಿಂದ ಆವರಿಸಲಾಗಿದೆ.)

ಆsss......

ಎಂಟನೂರ ವರಸ ಹಿಂದೆ ।
ಎಂಟು ದಿಕ್ಕಿನಿಂದ ಬಂದ ॥
ಬಂಟರೆಲ್ಲ ಕೂಡಿಕೊಂಡು ।
ಸಂತರಾಗಿ ಸೇರಿಕೊಂಡು ॥
ಸಂತೆಯೊಂದ ಕಟ್ಟೇದಾರ ।
ಅನುಭವ ಮಂಟಪ, ಅನುಭವ ಮಂಟಪ ॥

(ಕುರುಚಲ ಗಡ್ಡ, ಮುಂಡಾಸು ಬಗಲಕಸಿ ಅಂಗಿ, ಮೊಳಕಾಲಿನ ತುಸು ಕೆಳಗೆ ಬರುವಂತೆ ಉಟ್ಟ ಧೋತರ ಇಂಥ ನಡುಹರಯದ ಭದ್ರ ಪುರುಷನೊಬ್ಬ ಬರುವನು. ಎದುರಗಡೆಯಿಂದ ಮತ್ತೊಬ್ಬ ಅಂಥದೆ ವೇಷದವನು ಬಂದು ಕೈಮುಗಿಯುವನು. ಇವನ

ಲಕ್ಷ್ಯವಿಲ್ಲ. ಆತ ದಾಟಿ ಹೋಗುವನು. ಈತ ಪೇಟಿಬಂದಗಳನ್ನು ಆಡೆಯಿಂದ ಬಿಡಿಸುವನು. ಇವನು ಬಂದ ದಿಕ್ಕಿನಿಂದ ಧಡೂತಿ ಸೀರೆಯುಟ್ಟ, ತಲೆಯ ಮೇಲೆ ಸೆರಗು ಹೊದ್ದ ಮಹಿಳೆಯೊಬ್ಬಳು ಬರುವಳು. ಆಕೆ ಪೇಟಿಬಂದಗಳನ್ನು ಬಿಡಿಸಲು ನೆರವಾಗುವಳು. ಅವನ್ನು ಬಿಡಿಸಿ ಇಟ್ಟ ಮೇಲೆ ಚೂರಿ ತಂದು ಅವನ್ನು ಹೊಲಿದ 'ಫಡಿ'ನಾರನ್ನು ಕೊರೆಯಲು ಮುಂದಾಗುವಳು. ಈತ ಅವಳನ್ನು ತಡೆದು ಹಾಗೆ ಮಾಡಬೇಡವೆಂದು ಸನ್ನೆಯಿಂದ ಹೇಳುವನು. ಆಕೆಗೆ ಆಶ್ಚರ್ಯ.)

(ಈತ ಒಳಗೆ ಹೋಗಿ ತನ್ನ ಅರಿವೆಗಳನ್ನು ತಂದು ಗಂಟು ಕಟ್ಟತೊಡಗುವನು. ಆಕೆ ಹತ್ತಿರ ಬಂದು ನಿಂತು ಪ್ರಶ್ನಾರ್ಥಕವಾಗಿ ನೋಡುವಳು. ಈತ ಈಗೆಗು ಸನ್ನೆಯಿಂದಲೇ ಬಟ್ಟೆಗಳನ್ನು ತೆಗೆದುಕೊಳ್ಳೆಂದು ಸೂಚಿಸುವನು. ಆಕೆ ಮಿಸುಕಾಡದೆ ಹಾಗೇ ದಿಗಿಲುಗೊಂಡು ನಿಂತಿರುವಳು.)

ಈತ : ದೇಶಾಂತರ !

(ಮತ್ತೆ ಒಳಗೆ ಹೋಗುವನು. ಹಳೆಯ ಹಲವು ಪಾತ್ರೆ-ಪಗಡೆ, ಮಡಕೆ ತರುವನು.)

ಈತ : (ಹೆಂಡತಿಗೆ) ದೇಶಾಂತರ ! (ತುಸು ಎತ್ತರಿಸಿದ ದನಿಯಲ್ಲಿ ಹೇಳುವನು.)

(ಆಕೆ ಅಳಲಾರಂಭಿಸುವಳು.)

(ಅಕ್ಕ ಪಕ್ಕದಿಂದ ಅವರಂಥದೆ ವೇಷ ತೊಟ್ಟವರು ಹಲವು ಸ್ತ್ರೀ ಪುರುಷರು ಬರುವರು. ಈತ ಅವರಿಗೆ ಆ ಪೇಟಿಬಂದಗಳನ್ನು ಪಾತ್ರೆ-ಪಗಡೆಗಳನ್ನು ಒಯ್ಯಲು ಸನ್ನೆ ಮಾಡುವನು. ಅವರೆಲ್ಲ ಆಶ್ಚರ್ಯದಿಂದ ನೋಡುತ್ತಲೆ ನಿಲ್ಲುವರು.)

ಈತ : ದೇಶಾಂತರ !

(ಹೆಂಡತಿಗೆ ಅವಸರದ ಸನ್ನೆ ಮಾಡುವನು. ಆಕೆ ಉಪಾಯಗಾಣದೆ ಒಂದು ಸೀರೆ, ಕುಪ್ಪಸ ಬಗಲಿಗಿರಿಸಿಕೊಂಡು ಬಂದು ಅವನ ಹತ್ತಿರ ನಿಲ್ಲುವಳು.)

(ಈತ ಎಲ್ಲರಿಗೂ ನಮಸ್ಕಾರ ಮಾಡಿ ಭಾವಾವೇಶದಿಂದ ಕಲ್ಲಿನ ಕಂಬಗಳಿಗೆ, ಆಡೆಗೆ, ಪೇಟಿಬಂದಗಳಿಗೆ ಕಟ್ಟೆಗೆ ಮುಟ್ಟಿ ಮುಟ್ಟಿ ಕಡೆಗೆ ನೆಲಕ್ಕೆ ಕೈ ಹಚ್ಚಿ ಭೂಮಿಯ ಮಣ್ಣನ್ನು ಹಣೆಗೆ ಹಚ್ಚಿಕೊಂಡು ಮತ್ತೆ ಎಲ್ಲರಿಗೆ ವಂದಿಸಿ ಹೊರಡುವನು. ಅವರೂ ಇವನ ಹಿಂದಿನಿಂದಲೇ ಹೊರಡಲು ಈತ ಅವರನ್ನು ಸನ್ನೆಯಿಂದೇ ತಡೆಯುವನು.)

ಈತ : ದೇಶಾಂತರ... ದೇಶಾಂತರ...! (ಎನ್ನುತ್ತ ಭಾರವಾದ ಹೆಜ್ಜೆಗಳಿಂದ ಹೋಗುವನು. ಹೆಂಡತಿಯೂ ಬಿಕ್ಕುತ್ತ ಹಿಂಬಾಲಿಸುವಳು.)

(ಉಳಿದವರು ಕೊಂಚ ಹೊತ್ತು ಅವರು ಹೋದತ್ತೇ ನೋಡುತ್ತ ನಿಂತು ಅವನು ಬಿಟ್ಟು ಹೋದ ವಸ್ತುಗಳನ್ನೆಲ್ಲ ಮುಟ್ಟಿ ತಾವೂ ದುಃಖಿಸಿ ಸಾವಕಾಶವಾಗಿ ಒಂದೊಂದನ್ನು ತೆಗೆದುಕೊಂಡು ಒಂದೊಂದು ಮೂಲೆಯಿಂದ ಮರೆಯಾಗುವರು. ಮತ್ತೆ ಬಂದು ಬರಿದಾದ ದೃಶ್ಯವನ್ನು ನೋಡುತ್ತ ನಿಲ್ಲುವರು. ಒಬ್ಬ ಯುವಕನಿಗೆ ದುಃಖ ಉಕ್ಕಿ ಬರುವುದು.)

ಯುವಕ : ಕಾಕಾ (ಎಂದು ಪೇಟೆಬಂದ ಕಟ್ಟಿದ್ದ ಕಂಬಗಳನ್ನು ಹಿಡಿದು ಅಳಲಾರಂಭಿಸುವನು. ಉಳಿದವರು ಅವನ ಬೆನ್ನು ತಟ್ಟಿ ಸಮಾಧಾನ ಹೇಳುವಂತೆ ಮುಗಿಲ ಕಡೆಗೆ ನೋಡಿ ಕೈ ಮುಗಿಯುವರು.)

(ಹಿಂದಿನಿಂದ ಸಮೂಹ ಧ್ವನಿಯಲ್ಲಿ ಹಾಡು ಮೂಡಿ ಬರುವುದು)

ಆsss..... ಡೋಹಾssರ..... ಡೋಹಾssರ.....
ನಾವು ಡೋಹಾರ ॥
ಜನುಮದಿಂದ ಜಾತಿಯಿಂದ ।
ಭೂಮಿಯಿಂದ ಮಣ್ಣಿನಿಂದ ॥
ಶಿವನ ಉರಿವ ಕಣ್ಣಿನಿಂದ ।
ಕೂಡಿ ಬಂದ ಮೂಡಿ ಬಂದ ॥
ಡೋಹಾರsss..... ಡೋಹಾssರ..... ನಾವು ಡೋಹಾರ...
ಶಂಭು ಹರಗೆ ಧರಿಸಿಕೊಳ್ಳಲು ।
ಧರ್ಮದಿಂದ ಕರ್ಮದಿಂದ ॥
ಚರ್ಮವನ್ನು ಹದವ ಮಾಡಿ ॥
ಎದೆಯ ಜೀವ ಸುರಿದು ಕೊಟ್ಟ ॥
ಡೋಹಾರ..... ಡೋಹಾರ..... ನಾವು ಡೋಹಾರ...

(ಹಾಡು ಪ್ರಾರಂಭವಾದ ಮೇಲೆ ರಂಗಸ್ಥಳವನ್ನು ಕ್ರಮೇಣ ಕತ್ತಲೆ ಆವರಿಸಿ ಹಾಡು ಮುಗಿದಾಗ ಮತ್ತೆ ಸಾವಕಾಶ ಮಂದ ಬೆಳಕು ರಂಗದ ಮೇಲೆ ಚೆಲ್ಲುವುದು. ಈಗ ಕಾಣುವದೊಂದು ಅಡವಿ. ಹಕ್ಕಿಗಳು ಚಿಲಿಪಿಲಿ ಮಾಡುವ, ಕಾಗೆಗಳು ಕಾವ್ ಕಾವ್ ಎನ್ನುವ ಶಬ್ದ ಕೇಳಬರುವುದು. ಹಿಂದಿನ ದೃಶ್ಯದ ಗಂಡ ಹೆಂಡತಿ ತಮ್ಮ ತಮ್ಮ ಅರಿವೇ ಗಂಟುಗಲೊಂದಿಗೆ ಬರುವರು.)

(ಅವಳ ಮುಖದ ಮೇಲೆ ಇನ್ನೂ ಸಂದಿಗ್ಧತೆ ಇದೆ. ಇವನ ಮುಖದಲ್ಲಿ ಮಾತ್ರ ಯಾವುದೊ ತೃಪ್ತಿ, ಸಂತಸ. ಕನಸನ್ನು ನೋಡುವಂತೆ ಮೇಲಕ್ಕೆ ನೋಡುತ್ತ ನಿಲ್ಲುವನು. ಆಕೆ ಮತ್ತೆ ಅವನ ಭುಜ ಅಲುಗಿಸಿ ಪ್ರಶ್ನಾರ್ಥಕವಾಗಿ ನೋಡುವಳು. ಅವ ಆಕೆಗೆ

ಸಂತೈಸುವಂತೆ ಅಂಗೈ ವರದ ಹಸ್ತ ಮುದ್ರೆಯಿಂದ ಎತ್ತಿ ಕೆಳಗೆ ಕುಳಿತು. ಗಂಟು ಬಿಚ್ಚಿ ಉಟ್ಟ ಧೋತರದ ನಿರಿಗೆ ಸಡಿಲಿಸಿ ಅದೇ ಧೋತರವನ್ನು ಹೊತ್ತುಕೊಂಡು ಮಲಗುವನು. ಅವಳು ಹಣೆಗೆ ಕೈ ಹಚ್ಚಿಕೊಂಡು ಕೂಡುವವಳು. ಕೊಂಚ ಹೊತ್ತಿನ ಮೇಲೆ ನಿಡುಸುಯ್ದು ತಾನೂ ಒಂದೆಡೆ ಹತ್ತಿರದಲ್ಲೇ ಮಲಗಿ ತನ್ನ ಸೀರೆಯ ಸೆರಗನ್ನೇ ಮುಖದ ಮೇಲೆ ಮುಚ್ಚಿಕೊಳ್ಳುವಳು.)

(ಇಬ್ಬರು ಹಾದಿಬಡಿಯುವ ಕಳ್ಳರು ಪ್ರವೇಶಿಸುವರು. ಮನುಷ್ಯರನ್ನು ನೋಡಿ ಹೊಂಚು ಹಾಕಿ, ತಮ್ಮ ಮಚ್ಚುಗಳನ್ನು ಝಳಪಿಸುತ್ತ ಅವರ ಹತ್ತಿರಕ್ಕೆ ಬರುವರು. ನಿಧಾನವಾಗಿ ಅವರ ತಲೆಯ ಕೆಳಗಿನ ಗಂಟುಗಳನ್ನು ಬಿಡಿಸಿಕೊಂಡು ಬಿಚ್ಚಿ, ಜಾಡಿಸಿ ಏನೂ ಸಿಗದೇ ಕುಪಿತರಾಗುವರು. ಒಬ್ಬನು ಗಂಡನನ್ನು ಕಾಲಿನಿಂದ ತಿವಿದು ಎಚ್ಚರಿಸುವನು. ಹೆಂಡತಿ ಗಾಬರಿಯಾಗಿ ಎದ್ದು ಕುಳಿತು ಕಳ್ಳರನ್ನು ಕಂಡು ದಿಗಿಲ್ಗೊಂಡು ತನ್ನ ಕೊರಳ ತಾಳಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವಳು.)

(ಕಳ್ಳನ ತಿವಿತದಿಂದ ಗಂಡನೂ ಎಚ್ಚರಾಗಿ ಎದ್ದು ನಿಲ್ಲುವನು.)

ಈತ (ಗಂಡ) : ದೇಶಾಂತರ !

(ಕಳ್ಳರ ಅವನ ಅಂಗಿಯನ್ನು ಎದೆಯ ಮೇಲೆ ಹಿಡಿದು ಎಳೆದಾಡುವರು. ಈತ ತನ್ನ ಹತ್ತಿರ ಏನೂ ಇಲ್ಲವೆಂದು ಸನ್ನೆ ಮಾಡಿ ಮೇಲೆ ಕೈ ಮಾಡಿ 'ದೇವರೆ ಕಾಪಾಡಬೇಕೆಂಬಂತೆ ನಿಲ್ಲುವನು. ಕಳ್ಳರು ಅವನ ಅಂಗಿಯನ್ನು ಹುಡುಕಾಡಿ, ಅವಳನ್ನೂ ಬೆದರಿಸಿ ನೋಡುವರು. ಏನೂ ಸಿಗದಿರಲು ಮಚ್ಚು ತೋರಿಸುವರು. ಗಂಡ ಹೆಂಡತಿ ಅವರೆದುರು ತಲೆ ತಗ್ಗಿಸಿ ಕೂತು ಬಿಡುವರು. ಏನೂ ಸಿಗದಿರಲು ಕಳ್ಳರು ಅವರನ್ನು ನೂಕಿ ಹೋಗುವರು.)

(ಹೆಂಡತಿ ಅಳುವಳು. ಗಂಡ ಸಂತೈಸುವಂತೆ ಬೆನ್ನು ತಟ್ಟಿ 'ಮೇಲೆ ದೇವರಿದ್ದಾನೆ ; ಕಾಯ್ತಾನೆ' ಎಂಬಂತೆ ಸನ್ನೆಯಿಂದ ತಿಳಿಸುವನು. ಪುನಃ ಇಬ್ಬರೂ ಮಲಗುವರು.)

(ಸರ ಸರ ಶಬ್ದವಾಗುವದು. ಗಾಬರಿಯಿಂದ ಹೆಂಡತಿ ಎದ್ದು ಗಂಡನನ್ನು ಎಚ್ಚರಿಸುವಳು. ಇಬ್ಬರೂ ಏಳುವರು. ಗಂಡ ದೇವರಿಗೆ ಕೈ ಮುಗಿದು ಕುಳಿತು ಬಿಡುವನು.)

(ಬ್ರಾಹ್ಮಣನೊಬ್ಬನ ಪ್ರವೇಶ, ಗಾಬರಿಯಾಗಿದ್ದಾನೆ. ಇವರನ್ನು ಕಂಡು ಮೊದಲು ಇನ್ನಷ್ಟು ಗಾಬರಿಯಾಗುವನು. ಇವರು ಎದ್ದು ಬಂದು ಅಪಹರಿಸಲು ಯತ್ನಿಸುವುದಿಲ್ಲವೆಂದರಿತು ಧೈರ್ಯದಿಂದ

ಹತ್ತಿರ ಬಂದು ಕೂಡುವನು. 'ಎಲ್ಲಿಗೆ' ಬಂದು ಸನ್ನೆಯಿಂದ ಕೇಳುವನು.)

ಈತ (ಗಂಡ) : ದೇಶಾಂತರ !

(ಬ್ರಾಹ್ಮಣ ಸಂಶಯ ಮಿಶ್ರಿತ ವಿಸ್ಮಯದಿಂದ ನೋಡುತ್ತ ಇರಲು ಅಲ್ಲಿ ಹಾವೊಂದು ಬರುವುದು. 'ಶಿವ ಶಿವ' ಎನ್ನುತ್ತ ನಡುಗುವನು. 'ಗಂಡ'ನನ್ನು ಗಟ್ಟಿಯಾಗಿ ಹಿಡಿದುಕೊಳ್ಳುವನು. 'ಗಂಡ' ಕಟ್ಟಿಗೆಯ ತುಂಡಿನಿಂದ ಹಾವನ್ನು ಸರಿಸಿಬಿಡುವನು. ಅದು ಹೋಗುವುದು. ಬ್ರಾಹ್ಮಣ ಪ್ರಾಣದಾನಂ ಮಹಾ ಪುಣ್ಯಂ..., ಶುಭಮಸ್ತು ಶುಭಮಸ್ತು...

(ಹರಸುವನು.)

(ಮತ್ತೆ ಹಿನ್ನೆಲೆ ಹಾಡು ಕೇಳಿ ಬರುವುದು.)

ಶಂಭು ಹರಗೆ ಧರಿಸಿಕೊಳಲು ।
ಧರ್ಮದಿಂದ ಕರ್ಮದಿಂದ ॥
ಚರ್ಮವನ್ನು ಹದವ ಮಾಡಿ ।
ಎದೆಯ ಜೀವ ಸುರಿದು ಕೊಟ್ಟ ॥
ಡೋಹಾರಽಽಽ..... ಡೋಹಾಽಽರ..... ನಾವು ಡೋಹಾರ...

(ಹಾಡು ನಡೆದಾಗ ಕತ್ತಲಾಗಿ ಹಾಡು ಮುಗಿದಾಗ ಮತ್ತೆ ಬೆಳಕು ಚೆಲ್ಲುವುದು. ಹಕ್ಕಿಗಳ ಕಲವರ ಕೇಳಿ ಬರುವುದು.)

ಬ್ರಾಹ್ಮಣ : (ಎದ್ದು) ಸ್ನಾನ ಪುಣ್ಯೋದಕೇಶು... ಮಾತಾ ನರ್ಮದಾ, ನಮೋಸ್ತುತೇ.

(ವಂದಿಸುವನು. ಇವರೂ ಅವನೊಂದಿಗೆ ಸ್ನಾನಕ್ಕೆ ಸಿದ್ಧರಾಗಲು ಆತ ತಡೆದು ಜನಿವಾರ ತೋರಿಸಿ, ನೀವು ಆಮೇಲೆ ಹೋಗಿರೆಂದು ಸನ್ನೆ ಮಾಡಿ ಹೋಗುವನು.)

(ಮತ್ತೆ ಹಾಡಿನ 'ಡೋಹಾಽಽರ...' ಪಲ್ಲವಿ ಕೇಳಿಸುವುದು.)

(ಇವರೂ ಮುಂದಿನ ಪ್ರಯಾಣಕ್ಕೆ ಸಿದ್ಧರಾಗುವರು. ಈಗ ಗಂಡ ಗಂಡುಗೆಜ್ಜೆ ಹಾಕಿ ಧೋತರ ಉಡುವನು. ಹೊರಡುವರು.)

(ಕತ್ತಲೆ)

# ಅಂಕ - ೨

ಚಿಂತಿಯೆ ಭವಾನುಭವ ।
ಚಿಂತನೆ ಶಿವಾನುಭಾವ ॥

ಚಿಂತಿ ಬಿಟ್ಟು ಚಿಂತನೆ ಮಾಡಿ ।
ಚಿಂತನೆಯ ಮಂಥನ ಮಾಡಿ ॥

ಅಂತರಂಗ ಶುದ್ಧರಾದ ।
ಶರಣರ ಮಂಟಪ, ಅನುಭಾವ ಮಂಟಪ ॥

(ಮೂವರು ಓಲಗದವರ ಪ್ರವೇಶ।

ಓಲಗದವ ೧ : ಬಿತ್ತಿದಂತೆ ಬೆಳೆ.

ಓಲಗದವ ೨ : ಹೌದು, ಈ ಮಾತು ನಮ್ಮ ಇಂದಿನ ರಾಜಕೀಯಕ್ಕೆ ಸಂಪೂರ್ಣವಾಗಿ ಅನ್ವಯಿಸ್ತದೆ.

ಓಲಗದವ ೩ : 'ಯಥಾರಾಜಾ ತಥಾ ಪ್ರಜಾ' ಈ ಮಾತೂ ಅಷ್ಟೇ ಸಾರ್ಥಕವಾಗಿ ಅನ್ವಯಿಸುತ್ತದೆಯಲ್ಲವೆ ?

ಓಲಗದವ ೧ : ರಾಜ ಸಂಧಿಸಾಧಕನಾದ ಮೇಲೆ ಪ್ರಜೆಗಳೂ ಅದೇ ಹಾದಿಯನ್ನು ಹಿಡೀತಾರೆ.

ಓಲಗದವ ೨ : ಹಿಡದಿದಾರೆ ಅನ್ನಿ !

ಓಲಗದವ ೩ : ಹೌದು, ರಾಜ ತನ್ನ ಕುತಂತ್ರದಿಂದ -

ಓಲಗದವ ೧ : ಅದಕ್ಕೆ ರಾಜನೀತಿ ಅಂತ ಪ್ರತಿಷ್ಠಿತ ಶಬ್ದ ಇದೆ.

ಓಲಗದವ ೨ : ಕುಟಿಲ ರಾಜನೀತಿಯಿಂದ ಸಾಮ್ರಾಜ್ಯದ ಗದ್ದುಗೆಯನ್ನು ಕಬಳಿಸಿದ.

ಓಲಗದವ ೩ : ಅವನ ಮೆಚ್ಚಿಗೆ ಹಸ್ತಕ ಬಸವಣ್ಣ -

ಓಲಗದವ ೧ : ದಣ್ಣಾಯಕ ಅನ್ನಿ

ಓಲಗದವ ೨ : ಎಲ್ಲರೂ ಸಂಧಿಸಾಧಕರೆ, ಈ ಬಸವಣ್ಣ ಮಾವನ ಹಿಂದೆ ಮಂತ್ರಿಪದವನ್ನು ಕಬಳಿಸಿದವ. ಪಕ್ಷಪಾತ !

ಓಲಗದವ ೩ : ಆದರೆ ಈ ರೀತಿಯ ಪಕ್ಷಪಾತದಿಂದ ವೈರಿಗಳು ಹುಟ್ಟಿಕೊಳ್ಳುತ್ತಾರೆ. ಅನ್ನೋದನ್ನ ಈ ಜನ ಮರೀತಾರೆ.

ಓಲಗದವ ೧ : ಅದು ಸ್ವಾರ್ಥದ ಪ್ರತಿಫಲ.

ಓಲಗದವ ೨ : ಈಗ ಈ ಬಸವನ ವಿರುದ್ಧ ಎಷ್ಟೋ ಜನ ಒಳಗೊಳಗೇ ಉರೀತಿದಾರೆ,

ಓಲಗದವ ೩ : ಆ ಸೊಡ್ಡಳ ಬಾಚರಸನ್ನ ತನ್ನ ಬುಟ್ಟಿಗೆ ಹಾಕ್ಕೊಂಡ ಮಾತ್ರಕ್ಕೆ ದಣ್ಣಾಯಕ ಪದವಿಗೆ ಆಸೆ ಮಾಡುವ ಉಳಿದವರು ಸುಮ್ಮನೆ ಇರುವರೆ ?

ಓಲಗದವ ೧ : ಮಂಚಣ್ಣರಂತೂ ಈ ಬಸವಣ್ಣನನ್ನು ದ್ರೋಹಿ ಎಂದು ತೋರಿಸಿಕೊಡಲು ಕಟ್ಟೆಚ್ಚರದಿಂದ ಕಾಯ್ತಿದಾರೆ.

ಓಲಗದವ ೨ : ಅರಸ ಸಂಧಿಸಾಧಕ, ಮಂತ್ರಿ ಸಂಧಿಸಾಧಕ, ಅಂದಾಗ ಪ್ರಜೆಗಳೇನು ? ಅವರೂ ಸಂಧಿಸಾಧಕರು.

ಓಲಗದವ ೩ : ಅಂತೆಯೇ ಈ ಬಸವನ ಮಹಾಮನೆ ಸೇರಿ ಪುಕ್ಕಟೆ ತಿನ್ನೋದು, ಬಸವಣ್ಣನ್ನ ಸ್ತೋತ್ರ ಮಾಡೋದು, ಹೊಲೆ-ಮಾದಿಗರಾದಿ ಕೀಳು ಜಾತಿಯವರೆಲ್ಲ ಮೇಲೆ ಬರಲಿಕ್ಕೆ ಕಾಯೋದು ನಡೆದಿದೆ.

ಓಲಗದವ ೧ : ಹಾಗೆ ನೋಡಿದರೆ ಬಸವಣ್ಣನಿಂದೇನೂ ನಿಜವಾಗಿ ರಾಜ್ಯಕ್ಕೆ ಅಪಾಯವಿಲ್ಲ.

ಓಲಗದವ ೨ : ಧರ್ಮಕ್ಕೂ ಇಲ್ಲ.

ಓಲಗದವ ೩ : ಅದು ಹೇಗೆ ಧರ್ಮಕ್ಕೂ ಇಲ್ಲ ಅಂತೀರಿ ?

ಓಲಗದವ ೧ : ಇವನೇನೂ ಹೊಸ ಧರ್ಮ ಹುಟ್ಟು ಹಾಕಿಲ್ಲ. ಅಥವಾ ಯಾವುದೇ ಧರ್ಮ ಪೀಠಗಳನ್ನು ಮಠಗಳನ್ನು ವಶಕ್ಕೆ ತೆಗೆದುಕೊಂಡು ತನ್ನ ಆಜ್ಞೆಯೆಂದು ಯಾವ ಹೊಲೆ ಮಾದಿಗರಿಗೂ ದೀಕ್ಷೆ ಕೊಡಿಸ್ತಾ ಇಲ್ಲ.

ಓಲಗದವ ೩ : ತನ್ನ ಮನೆಯಲ್ಲೇ ತಾನೇ ಲಿಂಗ ಕಟ್ಟಿ ದೀಕ್ಷೆ ಕೊಡತಿದ್ದಾನಲ್ಲ !

ಓಲಗದವ ೨ : ಅದರಿಂದೇನಾಗಬೇಕು ? ಅದಕ್ಕೆ ಯಾವ ಪೀಠ, ಮಠ ಮಾನ್ಯತೆ ಕೊಡತದೆ ?

ಓಲಗದವ ೩ : ಹಾಗಾದರೆ ಧರ್ಮಕ್ಕೇನೂ ಚ್ಯುತಿ ಇಲ್ಲ ಅಂತೀರಾ ?

ಓಲಗದವ ೨ : ಹಾಗೆ ನನ್ನ ನಂಬಿಕೆ.

ಓಲಗದವ ೧ : ರಾಜ್ಯದ ವಿಚಾರವೂ ಅಷ್ಟೇ ಬಸವಣ್ಣ ಮೂಗಿನ ನೇರಕ್ಕೆ ನಡೆಯುವ ಸದಾಚಾರಿ. ಆತನಿಗೆ ರಾಜಕೀಯ ಮಹತ್ವಾಕಾಂಕ್ಷೆ ಇಲ್ಲ. ಹಾಗಿದ್ದಿದ್ದರೆ ಗುಪ್ತವಾಗಿ ಸೈನ್ಯ ಬಲ ಕಟ್ಟತ್ತಿದ್ದ. ಓಲಗದಲ್ಲಿ ತನ್ನ ಪರ ಮಾತಾಡುವವರನ್ನೂ ಗುಂಪುಗೂಡಿಸುತ್ತಿದ್ದ.

ಓಲಗದವ ೨ : ಅದೇನೊ ನಿಜ, ಆದರೂ ಈ ಶರಣರೇ ಸೈನಿಕರಾದರೆ ?

ಓಲಗದವ ೧ : ಸಾಧ್ಯವಿಲ್ಲ. ಸೈನ್ಯದ ಖರ್ಚು ಬೇಡೆಂದು ತನ್ನ ಕೋಟೆ ಕಾಯಲು ಒಬ್ಬ ರಾಜ ನಾಯಿಗಳನ್ನು ಸಾಕಿದನಂತೆ. ಆ ನಾಯಿಗಳು ಕೋಟೆ ಕಾಯುವವು ಎಂದುಕೊಂಡಿದ್ದ. ಆದರೆ ಮುತ್ತಿಗೆ ಹಾಕಿದ ವೈರಿ ಮೊದಲು ನಾಯಿಗಳಿಗೆ ತಿಂಡೀ ತುಣುಕು ಚೆಲ್ಲಿದ. ಅವು ತಿನ್ನಲು ಮುಕುರಿದವು. ವೈರಿ ಒಳಹೊಕ್ಕ. ಹಾಗೆ ಈ ಲೆಕ್ಕ.

ಓಲಗದವ ೩ : ಆದರೂ ಮಂಚಣ್ಣೋರು ಆತ ಸೈನ್ಯವನ್ನೇ ಕಟ್ಟುತ್ತಿದ್ದು ಶರಣರೆಂದು ಬಿತಾವಣೆ ಮಾಡುತ್ತಿದ್ದಾನೆ ಅಂತಾರಲ್ಲ !

ಓಲಗದವ ೧ : ಅನ್ನಲೇ ಬೇಕು. ಇಲ್ಲದೇ ಹೋದರೆ ಬಸವಣ್ಣನ ಪ್ರಭಾವ ಹೇಗೆ ಕಡಿಮೆಯಾಗುವುದು ?

ಓಲಗದವ ೩ : ಮತ್ತು ಮಠ ಮಾನ್ಯರನ್ನು ಕಂಡು ಆತ ಧರ್ಮವನ್ನು ತಲೆ ಕೆಳಗು ಮಾಡುತ್ತಿದ್ದಾನೆ ಎಂದು ಅವರೆದುರು ದೂರುತ್ತಿದ್ದಾರಲ್ಲ !

ಓಲಗದವ ೨ : ಅದೂ ಯೋಗ್ಯವೇ. ಇಲ್ಲದೇ ಹೋದರೆ ಜನರು ಬಸವಣ್ಣನಲ್ಲಿ ಸಂಶಯ ತಾಳೋದು ಹೇಗೆ ?

ಓಲಗದವ ೩ : ಅಂದರೆ ಬಸವಣ್ಣನ ಕೆಲಸದಲ್ಲಿ ರಾಜನೂ ಸಂದೇಹ ತಾಳಬೇಕು. ಧರ್ಮ ಪೀಠದವರೂ ಸಂದೇಹ ತಾಳಬೇಕು ಎಂದಂತಾಯ್ತು.

ಓಲಗದವ ೨ : ಅಂದರೆ ಪ್ರಜೆಗಳೂ ಅವನನ್ನು ಸಂಶಯದಿಂದ ನೋಡಲು ಪ್ರಾರಂಭಿಸಿಯಾರು.

ಓಲಗದವ ೧ : ಆ ಮೇಲೆ ಅವನಿಗೆ ಯಾರದೇ ಸಹಾನುಭೂತಿ ಸಿಗಲಾರದು. ಕೂಳಿಗಾಗಿ ಬಂದು ಬಿದ್ದಿರುವ ಈ ಶರಣರೂ ಈ ಮರ ಗೊಡ್ಡಾಯಿತೆಂದು ಬೇರೆ ಮರ ಹುಡುಕಲಿಕ್ಕೆ ಹಕ್ಕಿಗಳು ಹೋಗುವಂತೆ ಹೋಗಬಹುದು.

ಓಲಗದವ ೨ : ಸರಿಯಾಗಿ ಹೇಳಿದಿರಿ.

ಓಲಗದವ ೩ : ಆದರೆ ಬಸವನಿಂದ ಅಪಾಯವಿಲ್ಲ ಎಂದಾಗ ಅವನೇಕೆ ಪಲಾಯನ ಮಾಡಬೇಕು ?

ಓಲಗದವ ೧ : ಇವನಿಗಿಂತ ಹಿರಿಯರು ಬೇಕಾದಷ್ಟು ಜನ ಇದ್ದರೂ ಅವರನ್ನು ಹಿಂದೆ ಹಾಕಿ ರಾಜನ ಮನಸ್ಸು ಗೆದ್ದು ಮೇಲೇರಿದ್ದಾನಲ್ಲ. ಈ ಅನ್ಯಾಯ ಸರಿಪಡಿಸಲಿಕ್ಕೆ ಆತ ಹೋಗಬೇಕು.

ಓಲಗದವ ೩ : ಆದರೆ ಅವನಿಂದ ರಾಜ್ಯಕ್ಕೆ ಒಳ್ಳೆಯದಾಗಿದೆಯಲ್ಲ ! ಬೊಕ್ಕಸ ಬೆಳೆಯುತ್ತಿದೆ. ಜನ ದುಡೀತಾ ಇದಾರೆ. ಶಾಂತಿ ನೆಲಸ್ತಾ ಇದೆ.

ಓಲಗದವ ೨ : ಬೊಕ್ಕಸ ಅವನಿಲ್ಲದಾಗಲೂ ಬೆಳೀತದೆ. ಈಗೇನು ಅವನು ಸ್ವರ್ಗದಿಂದ ಹೊನ್ನಿನ ಮಳೆ ಕರೀತಾ ಇಲ್ಲ. ಅವನಿಲ್ಲಲ್ಲಾಗಲೂ ದುಡಿದೇ ದುಡೀತಾರೆ. ತೆರಿಗೆ ಕೊಡಬೇಕಿಲ್ಲ ; ದುಡೀದೇ ಏನು ಮಾಡ್ತಾರೆ ? ಶಾಂತಿ ಅವನಿಲ್ಲದಿದ್ದರೂ ನೆಲೆಸಿಯೇ ನೆಲಸ್ತದೆ.

ಓಲಗದವ ೩ : ಅವ ಹೋಗೋದರಿಂದ ಆಗುವ ಹೆಚ್ಚಿನ ಪ್ರಯೋಜನವೇನು ?

ಓಲಗದವ ೧ : ವ್ಯವಸ್ಥೆರೀ ವ್ಯವಸ್ಥೆ !

ಓಲಗದವ ೨ : ವ್ಯವಸ್ಥೆ ವ್ಯವಸ್ಥಿತವಾಗಿರ್ತದೆ.

ಓಲಗದವ ೩ : ಅವನಿದ್ದರೆ ಅದು ಕೆಡತದ್ಯೆ ?

ಓಲಗದವ ೧ : ಕೆಟ್ಟಿದೆ !

ಓಲಗದವ ೨ : ಹೊಲೆ ಮಾದಿಗರೆಲ್ಲ ಸೊಕ್ಕಿಗೆ ಬರತೊಡಗಿದ್ದಾರೆ. ಎಲ್ಲೆಲ್ಲಿಂದೋ ಬಂದು ಈ ನಾಡಿನ ಕೂಳಿನ ಉಗ್ರಾಣಕ್ಕೆ ಲಗ್ಗೆ ಹತ್ತಿದ್ದಾರೆ.

ಓಲಗದವ ೩ : ಅವರು ದುಡಿಯುವುದಿಲ್ಲವೆ ?

ಓಲಗದವ ೧ : ಇವರು ಬರುವವರೆಗೆ ಇವರ ಕೆಲಸ ಬೇರೆ ಇಲ್ಲಿಯ ಜನ ಮಾಡತಿದ್ದಿಲ್ಲವೆ ?

ಓಲಗದವ ೨ : ಈಗ ಇವರು ಬಂದು ಅವರ ಹೊಟ್ಟೆಯ ಮೇಲೆ ಕಾಲು ತಂದಿದ್ದಾರೆ. ಉದ್ಯೋಗಾವಾಕಾಶದಲ್ಲಿ ಸ್ಪರ್ಧೆ ಬಂದಿದೆ.

ಓಲಗದವ ೩ : ಜನ ಹೆಚ್ಚಾದಂತೆ ಉದ್ಯೋಗಾವಕಾಶ ಹುಡುಕಿಕೊಂಡು ಜನ ದೇಶಾಂತರಕ್ಕೆ ಹೋಗೋದು ಏನೂ ಇಂದು ನಿನ್ನೆಯ ಮಾತಲ್ಲ.

ಓಲಗದವ ೧ : ಅದು ನೈಸರ್ಗಿಕವಾಗಿ ನಡೆದರೆ ಅಪಾಯವಿಲ್ಲ. ಕೃತಕವಾಗಿ ಆ ರೀತಿ ಪರಿಸ್ಥಿತಿ ಉಂಟು ಮಾಡಿದರೆ ನಾಳೆ ಅನಾಹುತಕ್ಕೆ ಎಡೆಯಾಗ್ತದೆ.

ಓಲಗದವ ೩ : ಅಂತೂ ಒಟ್ಟಿನ ಮೇಲೆ ಬಸವಣ್ಣ ಮಾಡ್ತಿರೋದು ತಪ್ಪು ಅನ್ನಿ.

ಓಲಗದವ ೨ : ತಡೀರಿ, ಅಗೋ, ಮಠಾಧೀಶರು ಬರ್‍ತಿದಾರೆ. ನಾವು ಸ್ವಲ್ಪ ಮರೆಯಾಗೋಣ. ಅವರ ವಿಚಾರ ತಿಳಕೊಂಡು ಅವರಿಗೆ ಅಡ್ಡಬೀಳೋಣವಂತೆ.

(ಮೂವರು ಮರೆಯಾಗುವರು. ಇಬ್ಬರು ಮಠಾಧೀಶರು ಬರುವರು)

ಮಠಾಧೀಶ ೧ : ತಿಳಿಗೇಡಿಗಳಿಗೆ ತಿಳಿವಳಿಕೆ ಹೇಳ್ತಾನೆ. ಅದರಿಂದ ನಮ್ಮ ಕೆಲಸಕ್ಕೆ ನೆರವಾಗ್ತಾನೆ ಈ ಬಸವಣ್ಣ ಅಂತ ನಾವು ಸುಮ್ಮನಿದ್ದರೆ, ನಾಳೆ ಅನಾಹುತವಾಗಬಹುದು.

ಮಠಾಧೀಶ ೨ : ಹೌದು, ನಮ್ಮ ಪ್ರವಚನಗಳಿಗೆ ಬರುವವರಿಗಿಂತ ಈ ಬಸವಣ್ಣನ ಮನೆಗೇ ಅವನ ಶರಣರ ವಚನ ಚರ್ಚೆ ಕೇಳಲಿಕ್ಕೆ ಹೆಚ್ಚು ಜನ ಹೋಗ್ತಿದಾರಂತೆ.

ಮಠಾಧೀಶ ೧ : ಹೀಗಾದರೆ ಮಠಗಳ ಆದಾಯಕ್ಕೆ ಅಪಾಯ ತಪ್ಪಿದ್ದಲ್ಲ.

ಮಠಾಧೀಶ ೨ : ಭಕ್ತಾದಿಗಳೇ ಮಠಗಳ ಆದಾಯ ಕ್ಷೇತ್ರ. ಅವನ ಭಕ್ತಿ ಶ್ರದ್ಧೆಗಳೇ ನಮ್ಮ ಆದಾಯ ಸ್ತೋತ್ರ.

ಮಠಾಧೀಶ ೧ : ಒಬ್ಬ ಅರಸ ಒಬ್ಬ ಪ್ರಜೆಗಿಂತ ಕೊಡುವ ಕಾಣಿಕೆ ಎಷ್ಟೇ ಹೆಚ್ಚೆಂದರೂ ಅವನು ಕೊಡೋದು ಒಂದೇ ಕೈಯಿಂದ ಒಂದೇ ಬಗಸೆಯಿಂದ. ಭಕ್ತಾದಿಗಳದು ಸಹಸ್ರ ಸಹಸ್ರ ಕೈ - ಹಾಗಾಗಿ ಅವರ ದಾನವನ್ನು ಇವನ ಅನುದಾನ ಎಂದೂ ಸರಿಗಟ್ಟಲಾರದು. ಮತ್ತು ಅವರ ದಾನ ನಿಂತು ಹೋದರೆ ಇವನ ಅನುದಾನವೂ ಮರುದಿನವೇ ಮೊಟಕು ಅನ್ನೋದು ನಿಶ್ಚಿತ.

ಮಠಾಧೀಶ ೨ : ಬಸವಣ್ಣನೇನೂ ಜನರಿಗೆ ದುರ್ಬೋಧನೆ ಮಾಡುವುದಿಲ್ಲ. ನಮ್ಮ ವಿರುದ್ಧ ಪ್ರಚಾರ ಮಾಡುವುದಿಲ್ಲ. ಆದರೂ ಅವನ ಕೆಲಸ ದೂರಗಾಮಿಯಾಗಿ ನಮ್ಮ ಸಂಸ್ಥೆಗೆ ಆತಂಕವಾಗುವುದು ಸುಳ್ಳಲ್ಲ.

ಮಠಾಧೀಶ ೧ : ಅಂದಾಗ ಅವನ ಮುಳ್ಳನ್ನ ಹೇಗೆ ಕಿತ್ತೊಗೆಯಬೇಕು ಅನ್ನೋದು ಗಂಭೀರವಾದ ಪ್ರಶ್ನೆ.

ಮಠಾಧೀಶ ೨ : ಅವನನ್ನೇ ಕೇಳಿದರೆ ಹೇಗೆ ?

ಮಠಾಧೀಶ ೧ : ಏನಂತ ?

ಮಠಾಧೀಶ ೨ : ಅಯ್ಯಾ ಬಸವಣ್ಣಾ, ನಿನ್ನನ್ನು ರಾಜನು, ಮಂತ್ರಿಯಾಗಿ ಮಾಡಿದ್ದು ಯಾಕೆ ?

ಮಠಾಧೀಶ ೧ : ಜನಹಿತ ಕಾರ್ಯಕ್ಕಾಗಿ ಅಂತ ಹೇಳ್ತಾನೆ.

ಮಠಾಧೀಶ ೨ : ನಮ್ಮ ಮಠಗಳಿರುವದು ಯಾತಕ್ಕಾಗಿ

ಮಠಾಧೀಶ ೧ : ಜನರ ಮನಸ್ಸಿಗೆ ಅಧ್ಯಾತ್ಮ ಸಿಂಚನೆ ಮಾಡಲಿಕ್ಕೆ.

ಮಠಾಧೀಶ ೨ : ಅದೂ ಜನಹಿತಕ್ಕಾಗಿ ಅಲ್ಲವೇ ?

ಮಠಾಧೀಶ ೧ : ಅಲ್ಲ ಅಂತ ಹೇಗೆ ಹೇಳ್ತಾನೆ ?

ಮಠಾಧೀಶ ೨ : ಅಂದಾಗ ನಮ್ಮ ಕೆಲಸ ನಮಗೆ ಬಿಟ್ಟು ನೀನು ಜನಹಿತರದ ಬೇರೆ ಕೆಲಸ ಹುಡುಕಿಕೊ ಅಂದರೆ ಹೇಗೆ ?

ಮಠಾಧೀಶ ೧ : ಈ ವಿಚಾರ ಯೋಗ್ಯವಾಗಿದೆ. ನಾವು ಮೊದಲು ಅವನನ್ನೇ ಪ್ರಶ್ನಿಸೋಣ. ಅವನಿಂದ ಸರಿಯಾಗಿ ಉತ್ತರ ಸಿಗದಿದ್ದರೆ ಅಥವಾ ನಮ್ಮ ಸಮಸ್ಯೆ ಪರಿಹಾರವಾಗದಿದ್ದರೆ ಆಮೇಲೆ ರಾಜನ ಕಡೆಗೆ ಹೋಗೋಣ.

ಮಠಾಧೀಶ ೨ : ಅದೂ ಸರಿಯೆ. ನೇರವಾಗಿ ಈಗಲೇ ನಾವು ರಾಜನ ಕಡೆಗೆ ದೂರು ಒಯ್ದರೆ ರಾಜ ಈ ವಿಚಾರದಲ್ಲಿ ಬಸವಣ್ಣ ಏನನ್ನುತ್ತಾರೆ ಅಂದರೆ ಹೇಳಲಿಕ್ಕೆ ನಮಗೊಂದು ಉತ್ತರ ಬೇಕಲ್ಲ.

(ಮೂವರು ಓಲಗದವರು ಮುಂದೆ ಬರುವರು.)

ಮೂವರು ಓಲಗದವರು : ಮಹಾಸ್ವಾಮಿಗಳಿಬ್ಬರಿಗೂ ಅಡ್ಡಬಿದ್ದು ವಂದಿಸುವೆವು.

(ಸಾಷ್ಟಾಂಗ ಪ್ರಣಾಮ ಮಾಡುವರು. ಮಠಾಧೀಶರು ಅವರ ತಲೆಗಳ ಮೇಲೆ ಕೈ ಇಟ್ಟು ಆಶೀರ್ವದಿಸುವರು.)

ಓಲಗದವ ೧ : ಪೂಜ್ಯರೆ, ಈಗ ತಮ್ಮಿಂದ ಒಂದು ಪರಿಹಾರ ಸಿಗಬೇಕಾಗಿದೆ ಎಂದು ನಾವು ತಮ್ಮಲ್ಲಿ ಬಿನ್ನಪ್ಪ ಮಾಡಲು ಬಂದಿದ್ದೇವೆ.

ಓಲಗದವ ೨ : ಲಿಂಗ ಕಟ್ಟುವ , ದೀಕ್ಷೆ ಕೊಡುವ ಹಕ್ಕು ಯಾರದು ?

ಓಲಗದವ ೩ : ನಿಮ್ಮದು ! ಮಠಾಧೀಶರದು, ಧರ್ಮ ಗುರುಗಳದು - ಅಲ್ಲವೇ ?

ಓಲಗದವ ೧ : ಹೌದು, ಹಾಗಾದರೆ ಬಸವಣ್ಣ ಎಂತೆಂಥದೋ ಕೀಳು ಜಾತಿಯವರನ್ನೆಲ್ಲ ಕರೆಕರೆಸಿ ಲಿಂಗ ಕಟ್ಟುತ್ತಿದ್ದಾರಲ್ಲ ; ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೆ ?

ಮಠಾಧೀಶ ೧ : ಯಾರು ಬೇಕಾದರೂ ಏನು ಬೇಕಾದರೂ ಕಟ್ಟಿಕೊಳ್ಳಲಿ, ಅದೆಲ್ಲ ಧರ್ಮವಾಗುವುದಿಲ್ಲ. ಅದಕ್ಕೆ ಧರ್ಮದ ಮನ್ನಣೆ ಇಲ್ಲ.

ಮಠಾಧೀಶ ೨ : ಬಸವಣ್ಣ ನಡೆಸಿರುವುದು ಧರ್ಮ ವ್ಯವಸ್ಥೆಯನ್ನು ಹದಗೆಡಿಸುವ ಕೆಲಸವಲ್ಲವೆ ?

ಮಠಾಧೀಶ ೧ : ಹೀಗಾದರೆ ಜಾತಿವ್ಯವಸ್ಥೆ ಉಳಿದೀತೆ ?

ಮಠಾಧೀಶ ೨ : ಜನರ ಧಾರ್ಮಿಕ ಶ್ರದ್ಧೆ ನಾಶಹೊಂದಲಿಕ್ಕಿಲ್ಲವೆ ?

ಮಠಾಧೀಶ ೧ : ಶಿವ ಶಿವ ! (ಕಿವಿ ಮುಚ್ಚಿಕೊಳ್ಳುವರು.)

ಮಠಾಧೀಶ ೨ : ನಮಗೆಷ್ಟೇ ಅಸಹ್ಯವಾದರೂ ಆತ ಅಧಿಕಾರಿ. ಅವನನ್ನು ನಾವು ಹೇಗೆ ತಿದ್ದಬಹುದು.

ಮಠಾಧೀಶ ೧ : ರಾಜ ಮೇಲೊ ಧರ್ಮರಕ್ಷಕ ಮಠ ಮೇಲೊ ?

ಮಠಾಧೀಶ ೨ : ಧರ್ಮೋಲ್ಲಂಘನೆಯಾದಲ್ಲಿ ರಾಜನನ್ನು ಧರ್ಮವು ದಂಡಿಸಿದ ಉದಾಹರಣೆಗಳಿಲ್ಲವೆ ?

ಮಠಾಧೀಶ ೧ : ಈ ವಿಷಯದಲ್ಲಿ ನೀವು ಅನಾಸಕ್ತರಾಗಿ ಉಳಿದರೆ ಹೊಲೆ ಮಾದಿಗರೆಲ್ಲ ತಲೆಗೇರಿಬಿಡ್ತಾರೆ. ಆಮೇಲೆ ಎಲ್ಲಿಯ ಸಮಾಜ ? ಎಲ್ಲಿಯ ಧರ್ಮ ?

ಮಠಾಧೀಶ ೧ : ಧರ್ಮದಂಡವು ರಾಜದಂಡಕ್ಕಿಂತ ಮೇಲು ನಿಜ ! ಪ್ರಾಚೀನ ಕಾಲದಲ್ಲೆಲ್ಲ ರಾಜರು ರಾಜ ಗುರುಗಳಿಗೆ ವಂದಿಸಿಯೇ ಸಿಂಹಾಸನಾರೋಹಣ ಮಾಡುತ್ತಿದ್ದರು. ಗುರ್ವಾಜ್ಞೆಯನ್ನು ರಾಜಾಧಿರಾಜರೂ ಉಲ್ಲಂಘಿಸುತ್ತಿದ್ದಲ್ಲ. ಈಗಿನ ಸ್ಥಿತಿ ಬೇರೆಯಾಗಿದೆ.

ಮಠಾಧೀಶ ೨ : ಈಗ ನಾವು ನೇರವಾಗಿ ರಾಜನಿಗೆ ಆಜ್ಞೆ ಕೊಡುವ ಸ್ಥಿತಿಯಲ್ಲಿಲ್ಲ. ಒಳ್ಳೇ ಕೆಲಸಕ್ಕೆ ಪ್ರಶಸ್ತಿಯಾಗಿ ಸ್ವಸ್ತಿ ವಾಚನ ಮಾಡಲು, ಸಮಾರಂಭಕ್ಕೆ ಆಮಂತ್ರಿಸುವಾಗ 'ಇತ್ಯಾಶಿಷಃ' ಎಂದು ಆಶೀರ್ವದಿಸಲು ಮಾತ್ರ, ನಾವು ಹಿರಿಯರಾಗಿ ಉಳಿದಿದ್ದೇವೆ. ವಿನಃ 'ರಾಜಾ, ನೀನು ಹೀಗೆ ಮಾಡು' ಎಂದು ಹೇಳಲು ನಮಗೆ ಅಧಿಕಾರ ಉಳಿದಿಲ್ಲ.

ಮಠಾಧೀಶ ೧ : ಯಾಕೆ ಉಳಿದಿಲ್ಲ ?

ಮಠಾಧೀಶ ೨ : ಯಾರು ಕಸಿದುಕೊಂಡರು ?

ಮಠಾಧೀಶ ೩ : ಅಥವಾ ನೀವೇ ಬಹುಕಾಲ ಬಳಸೋದನ್ನು ಬಿಟ್ಟದ್ದರಿಂದ ನಿಮಗೆ ಹಾಗೆ ಭಾವನೆಯಾಗಿರುವುದೊ ? ·

ಮಠಾಧೀಶ ೧ : ಹೇಗೆ ಇರಲಿ, ಈಗಿನ ರೀತಿಯಲ್ಲೇ ಈಗಿನ ಸಮಸ್ಯೆ ಪರಿಹರಿಸಿಕೊಳ್ಳಬೇಕು.

ಮಠಾಧೀಶ ೨ : ಉಪಾಯವಿಲ್ಲ, ಕಾಲಾಯ ತಸ್ಮೈ ನಮಃ.

ಮಠಾಧೀಶ ೧ : ನಮಗೇನೂ ಬಸವಣ್ಣನವರ ಮೇಲೆ ದ್ವೇಷ ಇಲ್ಲ.

ಮಠಾಧೀಶ ೨ : ಅವರ ಉತ್ಕರ್ಷ ನೋಡಿ ನಮಗೇನೂ ಹೊಟ್ಟೆಯುರಿ ಇಲ್ಲ.

ಮಠಾಧೀಶ ೩ : ಬಸವಣ್ಣ ಒಳ್ಳೆಯವರೇ.

ಮಠಾಧೀಶ ೧ : ವಿನಯಶೀಲರು.

ಮಠಾಧೀಶ ೨ : ನಿರ್ವ್ಯಸನಿಗಳು.

ಮಠಾಧೀಶ ೩ : ದಯಾಳುಗಳು.

ಮಠಾಧೀಶ ೧ : ಆದರೆ ರಾಜಕಾರ್ಯದಲ್ಲಿರುವವರು ಸ್ವಲ್ಪ ಗಟ್ಟಿಯಾಗಿರಬೇಕಾಗುವುದು.

ಮಠಾಧೀಶ ೨ : ಇವರ ವಿನಯ ತುಸು ಜಾಸ್ತಿಯಾಗುವದು.

ಮಠಾಧೀಶ ೩ : ಇವರ ದಯೆ ಸ್ವಲ್ಪ ಹೆಚ್ಚಾಗುವದು.

ಮಠಾಧೀಶ ೧ : ಸ್ವಲ್ಪಾದರೂ ಬಿಗುವಿನಿಂದ ಇರದಿದ್ದರೆ ರಾಜಮರ್ಯಾದೆ ಏನು ಉಳೀತಿದೆ ?

ಮಠಾಧೀಶ ೧ : ಹಾಗಿದ್ದರೆ ಈ ಬಗ್ಗೆ ನೀವು ಓಲಗದವರು ರಾಜರಿಗೆ ಸಲಹೆ ನೀಡಬಹುದಲ್ಲ !

ಮಠಾಧೀಶ ೨ : ನಿಮ್ಮ ಪರವಾಗಿ ನಾವು ಮಠಾಧೀಶರು ರಾಜನಿಗೆ ಹೇಳಲಿಕ್ಕೆ ಬರುವದು ಸರಿಯಾಗಿರುವುದಿಲ್ಲ.

ಮಠಾಧೀಶ ೨ : ನೀವು ಹೇಳಲಿಕ್ಕೆ ಬರೋದು ಬೇಡ.

ಮಠಾಧೀಶ ೩ : ನೀವು ನಮ್ಮ ಬಗ್ಗೆ ಹೇಳೋದು ಬೇಡ. ನಿಮ್ಮ ಪರವಾಗಿಯೇ ಹೇಳಬೇಕಾದ್ದಿದೆ.

ಮಠಾಧೀಶ ೧ : ಏನದು ?

ಮಠಾಧೀಶ ೧ : ಧರ್ಮದ ರಕ್ಷಣೆ !

ಮಠಾಧೀಶ ೨ : ಸಮಾಜದ ವ್ಯವಸ್ಥೆ.

ಮಠಾಧೀಶ ೨ : ನಾವದನ್ನು ಮಾಡುವವರೆ ಇದ್ದೇವೆ.

ಮಠಾಧೀಶ ೩ : ಹಾಗಿದ್ದರೆ ಆ ವಿಚಾರದಲ್ಲಿ ನಿಮ್ಮ ಹೇಳಿಕೆಯನ್ನು ಪುಷ್ಟೀಕರಿಸಲು ಓಲಗದ ಸದಸ್ಯರನ್ನು ನಾವು ಸಿದ್ಧಪಡಿಸುವೆವು.

ಮಠಾಧೀಶ ೧ : ಅಗೊ, ಬಸವಣ್ಣನವರೇ ಇತ್ತ ಬರುತ್ತಿರುವಂತಿದೆ.

ಮಠಾಧೀಶ ೨ : ಅವರು ನಮ್ಮನ್ನು ಕಾಣದೆ ಮುಂದೆ ಹೋಗುವ ಉದ್ಧಟರೇನಲ್ಲ. ತಡೆಯಿರಿ. ಸಾಧ್ಯವಾದರೆ ಇಲ್ಲೇ ಮಾತಾಡೋಣ.

(ಎಲ್ಲರೂ ಸಜ್ಜಾಗಿ ನಿಂತಿರಲು ಹಿಂದಿನಿಂದ ಸಂಬೋಳಿಯವನು ಬರುವನು. ಆತ ಬೆನ್ನಿಗೆ ಕೊರೆಯ ಹೆಂಟ ಕಟ್ಟಿಕೊಂಡಿದ್ದಾನೆ ಬಾಯಿಯ ಮುಂದೆ ಗಡಿಗೆ ಹಿಡಿದುಕೊಂಡಿದ್ದಾನೆ.)

ಸಂಬೋಳಿಯವ : ಸಂಬೋಳಿ, ಸಂಬೋಳಿ, ಸಂಬೋಳಿ.....

(ಎಲ್ಲರೂ ಅವನನ್ನು ನೋಡಿ ದೂರ ಸರಿದು ನಿಲ್ಲವರು. ಅವನು ಹೋದಂತೆಲ್ಲ ಅವನ ಹಿಂದಿನ ಕೊರೆಯ ಹೆಂಟ ರಸ್ತೆಯನ್ನು ಉಡುಗುತ್ತ ಹೋಗುವದು. ಎದುರಿಗೆ ಬಸವಣ್ಣ ಬರುವನು.) ಸಂಬೋಳಿಯವನು ಅವನಿಗೆ ನೆಲಮುಟ್ಟಿ ವಂದಿಸುವನು.

ಬಸವಣ್ಣ : ಶರಣು ಸಂಬೋಳಿ ಶರಣರೆ, ಶರಣು.

ಸಂಬೋಳಿ : ತಾವು ಹಿರಿಯರು, ನಾನು ಹೀನಕುಲದಾವ. ನನಗೆ ನೀವು ಶರಣು ಅಂತ ಅನಬ್ಯಾಡ್ರಿ ಶಿವಾ.

ಬಸವಣ್ಣ : ನನ್ನಲ್ಲಿರುವಂತೇ ರಕ್ತ ಮಾಂಸ, ಎಲುಬಿನ ಗೂಡು ನಿಮ್ಮ ಮೈಯಲ್ಲೂ ಇದೆ. ನಾನು ಹುಟ್ಟಿದ ತತ್ವಗಳಿಂದೇ ಸಂಬೋಳಿಯಣ್ಣಾ ನೀನೂ ಹುಟ್ಟಿದ್ದೀ ಕೊನೆಗೆ ನಾನು ನಾಶವಾಗುವಂತೇ ನೀನೂ ನಾಶವಾಗುತ್ತೀ. ನನ್ನಲ್ಲಿರುವಂತೇ ಆತ್ಮ ನಿನ್ನಲ್ಲೂ ಇದೆ. ನನಗೂ ನಿನಗೂ ಏನೂ ಅಂತರವಿಲ್ಲವಯ್ಯ.

ಸಂಬೋಳಿ : ಜಾತಿ, ಜಾತಿ ಅಣ್ಣಾ, ನಮ್ಮ ನಮ್ಮ ಕರ್ಮದಿಂದ ಬಂದ ಜಾತಿ !

ಬಸವಣ್ಣ : ಹಿಂದಿನ ಜನ್ಮದ ಕರ್ಮದ ವಿಚಾರ ಮಾಡಬೇಡಿ ? ಈಗಿನ ಜನ್ಮದಲ್ಲಿ ಮಾಡುವ ಕರ್ಮದ ವಿಚಾರಮಾಡಿ ? ನಾವು ಸಮಾಜದ ಧುರೀಣರು. ಬೆಳಿಗ್ಗೆ ನೀವು ಹಸನು ಮಾಡಿದ ರಸ್ತೆಗಳನ್ನು ಸಂಜೆಯವರೆಗೆ ಹೊಲಸು ಮಾಡುತ್ತೇವೆ. ನಾವು ಹೊಲಸು ಮಾಡಿದ ರಸ್ತೆಗಳನ್ನು ನಮ್ಮ ಮೊದಲೆ ಎದ್ದು ನೀವು ಹಸನು ಮಾಡುತ್ತೀರಿ. ನೀವು ಸಮಾಜದ ಸೇವೆ ಮಾಡುತ್ತೀರಿ. ಸಮಾಜವನ್ನು ಹಸನು ಮಾಡುತ್ತೀರಿ. ನೀವು ನನಗಿಂತ ಮೇಲು.

ಸಂಬೋಳಿ : ಹಂಗ ಹೇಳಬ್ಯಾಡ್ರಿ ಶಿವ. ಹಂಗ ಹೇಳಬ್ಯಾಡ್ರಿ ಪುಣ್ಯಾ ಮಾಡಿದ್ದಕ್ಕ ನಿಮಗ ಆ ಜನ್ಮಾ ಬಂದೈತಿ. ಪಾಪಾ ಮಾಡಿದ್ದಕ್ಕ ನನಗೆ ಈ ಜನ್ಮಾ ಬಂದೈತಿ. ನನ್ನ ಪಾಪದ ಬೆಂಕಿ ನನ್ನ ಈಗಾಗಲೆ ಸಾಕಷ್ಟು ಸುಡತಿರುವಾಗ ಹಿಂತಾ ಮಾತ ಹೇಳಿ ಈ ಪಾಪೀ ಜೀವಕ್ಕ ಹಿಂಸಾ ಮಾಡಬ್ಯಾಡ್ರಿ. ಭೋಗ ! ಭೋಗಿಸ್ತೇನಿ ಭೋಗಿಸಿ ನೀಗತೇನಿ. ನಿಮ್ಮ ಹರಿಕಿ ಇದ್ದರ ಮುಂದಿನ ಜನ್ಮಕ ಸ್ವಲ್ಪ ಮ್ಯಾಲಿನ ಜಾತ್ಯಾಗ ಹುಟ್ಟುತೀನಿ.

ಬಸವಣ್ಣ : ಎಂಥ ಉದಾತ್ತ ಚಿತ್ತರಯ್ಯಾ ನೀವು ! ನೀವು ಬರುವ ದಾರಿಯಲ್ಲಿ ನಿಮ್ಮ ನೆರಳು ಬೀಳಬಾರದೆಂದು ಜನರನ್ನು ಎಚ್ಚರಿಸಲು 'ಸಂಬೋಳಿ' ಅಂತೀರಿ. ನಿಮ್ಮ ಮಾತಿನ ಮೈಲಿಗಿ ಆದೀತೆಂದು ಬಾಯಿಗೆ ಗಡಿಗೆ ಹಿಡೀತೀರಿ. ನೀವು ನಡದ ಹೆಜ್ಜೀ ಗುರುತೂ ಅಳಸಲೆಂದು ಹಿಂದ ಹೆಂಟಾ ಎಳೀತೀರಿ. ನಿಮ್ಮ ಹೆಜ್ಜೆಯಲ್ಲಿ ಹೆಜ್ಜೆ ಇಡುವ ಅವಕಾಶ ನನಗ ಸಿಕ್ಕರ ನಾನೂ ನಿಮ್ಮಂತೆ ಸಮಾಜದ ಸೇವೆ ಮಾಡಿ ನನ್ನ ಜನ್ಮ ಸಾರ್ಥಕ ಮಾಡಿಕೋಬಹುದು. ನೀವು ಪಾವನರು, ಪಾಪಿ ನಾನು !

ಸಂಬೋಳಿ : ನಿಮ್ಮ ಹಿಂತಾ ಮಾತಿನಿಂದ ಕಣ್ಣಾಗ ನೀರ ಬರ್ತಾವ. ದ್ಯಾವರು ನಿಮ್ಮ ರೂಪದಾಗ ಈ ಪಾಪಿಗೆ ಇಂದ ದರ್ಶನ ಕೊಟ್ಟ. (ವಂದಿಸುವನು)

ಮಠಾಧೀಶ ೧ : ಏ ಸಂಬೋಳಿಯವನೆ ಎಷ್ಟು ಮಾತಾಡ್ತಾ ನಿಂತೀದಿ ?

ಮಠಾಧೀಶ ೨ : ಹೋಗು ಬೇಗ.

ಮಠಾಧೀಶ ೩ : ನಿನ್ನ ಸಲುವಾಗಿ ನಮಗ ಆತಂಕ, ಹಾದಿ ಬಿಡು.

ಸಂಬೋಳಿ : ತಪ್ಪಾತು ಶಿವಾ, ತಪ್ಪಾತು, ಚಮಿಸಿ ಬಿಡ್ರಿ. (ಹೋಗುವನು)

ಮಠಾಧೀಶ ೧ : ಮಹಾಮಂತ್ರಿಗಳು ಇಂಥ ಕೀಳು ಕುಲದವರೊಂದಿಗೆ ಮಾತಾಡುತ್ತ ಅವರನ್ನು ವಂದಿಸುತ್ತ, ಹೊಗಲುತ್ತ ನಿಲ್ಲುವದರಿಂದ ರಾಜಮರ್ಯಾದೆಗೆ ಕುಂದು.

ಮಠಾಧೀಶ ೨ : ಇದರಿಂದ ಆಡಳಿತ ಶಿಥಿಲವಾಗುವುದು.

ಮಠಾಧೀಶ ೩ : ಮರ್ಯಾದೆಯ ಬಿಗಿಯೂ ಹೋಗಿ ಬಿಟ್ಟ ಮೇಲೆ ಉಳಿಯುವುದೇನು ?

ಬಸವಣ್ಣ : ಮನುಷ್ಯತ್ವ ! ಎಲ್ಲ ತತ್ವಗಳಿಗಿಂತ ಹೆಚ್ಚಿನ ಸಮಾಜ ಜೀವನದ ಮೂಲ ತತ್ವ ! ದಯವಿಲ್ಲದ ಧರ್ಮವದಾವುದಯ್ಯಾ ? ದಯವೇ ಧರ್ಮದ ಮೂಲವಯ್ಯಾ. ದಯಬೇಕು ಸಕಲ ಪ್ರಾಣಿಗಳಲ್ಲಿ.

ಮಠಾಧೀಶ ೧ : ಬಸವಣ್ಣನವರೆ ನಿಮ್ಮ ಪ್ರವಚನ ನಿಲ್ಲಿಸಿ.

ಮಠಾಧೀಶ ೨ : ಪ್ರವಚನ ಮಾಡಲಿಕ್ಕೆ ನಮ್ಮ ಮಠಗಳಿವೆ.

ಮಠಾಧೀಶ ೧ : ನಾವೇ ತಮ್ಮನ್ನು ಭೇಟಿಯಾಗಿ ಒಂದು ವಿಷಯ ಇತ್ಯರ್ಥ ಮಾಡಬೇಕೆಂದಿದ್ದೆವು.

ಮಠಾಧೀಶ ೨ : ಈಗ ನೀವೇ ಎದುರು ಸಿಕ್ಕಿದ್ದೀರಿ. ಸಂತೋಷ.

ಬಸವಣ್ಣ : ಪೂಜ್ಯರೆ ಕೇಳಿ. ನನ್ನಿಂದ ಯಾವ ಪರಿಹಾರವಾಗಬೇಕು ?

ಮಠಾಧೀಶ ೧ : ನೀವು ಧರ್ಮವಿರೋಧಿಗಳೇ ?

ಬಸವಣ್ಣ : ಅಯ್ಯೋ, ಶಿವ ಶಿವ ! ನಾನು ಯಾರನ್ನೂ ಏನನ್ನೂ ವಿರೋಧಿಸುವುದಿಲ್ಲ. ನನ್ನ ತಿಳುವಳಿಕೆಯಂತೆ ನಾನು ನಡೆಯುತ್ತೇನೆ. ಎಲ್ಲರಲ್ಲೂ ಎಲ್ಲದರಲ್ಲೂ ನಮ್ರಭಾವದಿಂದ ವರ್ತಿಸುತ್ತೇನೆ. ವಿರೋಧ, ಘರ್ಷಣೆಯಂಥ ವಿಚಾರಗಳು ನನ್ನ ಬಳಿಯಲ್ಲೂ ಸುಳಿಯದಂತೆ ನನ್ನ ಚಿತ್ತವನ್ನ ನಿರ್ಮಲವಾಗಿ ಇಡೆಂದು ಕೂಡಲ ಸಂಗಮನಲ್ಲಿ ಸದಾ ಬೇಡಿಕೊಳ್ಳುತ್ತೇನೆ.

ಮಠಾಧೀಶ ೨ : ನೀವು ಹೊಸ ಧರ್ಮ ಸ್ಥಾಪಿಸಹೊರಟಿದ್ದೀರಾ ?

ಬಸವಣ್ಣ : ಇಲ್ಲವಲ್ಲ, ಧರ್ಮ ಸ್ಥಾಪಿಸುವ ಮಹಂತ ನಾನಲ್ಲ, ಶಿವಭಕ್ತರ ತೊತ್ತಿನ ತೊತ್ತಿನ ಪಡಿದೊತ್ತಿನ ಮಗ ನಾನು.

ಮಠಾಧೀಶ ೧ : ಹಾಗಾದರೆ ಜನರಿಗೆಲ್ಲ ಲಿಂಗ ಕಟ್ಟುತ್ತಿರುವದೇಕೆ ?

ಮಠಾಧೀಶ ೨ : ಇದು ಪ್ರಚ್ಛನ್ನ ವಿರೋಧವಲ್ಲವೆ ?

ಬಸವಣ್ಣ : ತಪ್ಪು ತಿಳಿಯಬೇಡಿ ಪೂಜ್ಯರೆ, ವಿರೋಧಿಸುವದೇ ನನಗೆ ಬೇಕಿದ್ದರೆ ನಾನು ಯಾವುದಾದರು ಧರ್ಮವನ್ನು ನಿಂದಿಸುತ್ತಿದ್ದೆ, ಧರ್ಮ ದ್ರಷ್ಟಾರರು ಪ್ರಾಚೀನ ಕಾಲದಿಂದೇ ತೆರೆದಿಟ್ಟಿರುವ ಮುಕ್ತಿ ಮಾರ್ಗದಲ್ಲಿ ನಡೆಯಿರೆಂದು, ಶರಣರಿಗೆ ನಾನು ಹೇಳುವೆ. ಬಹಿರಂಗಕ್ಕಿಂತ ಅಂತರಂಗ ಶುದ್ಧಿಗೆ ಹೆಚ್ಚು ಮಹತ್ವ ಕೊಡಿರೆಂದು ಹೇಳುವೆ. ಮಂದಿರಗಳಲ್ಲಿ ಪ್ರವೇಶವಿಲ್ಲದವರು ಅದಕ್ಕಾಗಿ ಕಾಯುವದು ಬೇಡ. ಅಧ್ಯಾತ್ಮ ವಿದ್ಯೆಗೆ ಅಧಿಕಾರಿಯಾಗುವ ಅವಕಾಶವಿಲ್ಲವೆಂದು ಕೊರಗುವದು ಬೇಡ. ಆತ್ಮೋನ್ನತಿಯ ಮಾರ್ಗ ಎಲ್ಲರಿಗೂ ಮುಕ್ತವಾಗಿದೆ ಎಂದು ಪ್ರಾಚೀನರು ಹೇಳಿದ್ದನ್ನೇ ನಾನು ಹೇಳಿರುವೆ. ಪೂಜೆಗೆಂದು ಗುಡಿಗೇಕೆ ಹೋಗಬೇಕೆಂದು ಲಿಂಗವ ಕಟ್ಟುವೆ. ಅಧ್ಯಾತ್ಮ ಸಾಧನೆಗೆ ಅವಕಾಶವಿಲ್ಲೆಂದು ಕೊರಗುವವರಿಗೆ ನನ್ನ ಮನೆಯಲ್ಲೇ ಸೇರಿ ಚಿಂತನೆಯ ಮಂಥನ ಮಾಡಲು ಹೇಳುವೆ.

ಮಠಾಧೀಶ ೧ : ಈಗಿರುವ ಶೈವ ಪಂಥಗಳಲ್ಲಿ ನಿಮ್ಮದು ಯಾವ ಪಂಥ ?

ಮಠಾಧೀಶ ೨ : ಅಥವಾ ಅವನ್ನೆಲ್ಲ ಧಿಕ್ಕರಿಸುವ ಹೊಸ ಪಂಥವೊ ?

ಬಸವಣ್ಣ : ಇಲ್ಲ, ಯಾವ ಶೈವ ಪಂಥದಲ್ಲು ಕೈ ಹಾಕಲು, ವ್ಯವಸ್ಥೆಯನ್ನು ಕಲಕಲು ನನಗಿಷ್ಟವಿಲ್ಲ. ಅದಕ್ಕೆ ಅವರವರು ತಮ್ಮ ತಮ್ಮ ಮನಸ್ಸಿನ ಏಕಾಗ್ರತೆಗೆ ತಮ್ಮ ಲಿಂಗವನ್ನು ತಮ್ಮಿಷ್ಟದಂತೆ ಹೆಸರಿಸಿ ಇಷ್ಟಲಿಂಗವನ್ನೇ ಅಂಗದಮೇಲೆ ಧರಿಸಿ ಭಕ್ತಿಪರವಶರಾದರೆ ಯಾವ ಧರ್ಮವನ್ನೂ ಉಲ್ಲಂಘಿಸಬೇಕಿಲ್ಲ. ಯಾವ ಕಟ್ಟಳೆಯನ್ನೂ ಮುರಿಯಬೇಕಿಲ್ಲ.

ಮಠಾಧೀಶ ೧ : ಈ ನಿಮ್ಮ ಬೋಧನೆಗೆ ಧರ್ಮ ಶಾಸ್ತ್ರಾಧಾರ ?

ಬಸವಣ್ಣ : 'ಏಕಸಂದ್ ವಿಪ್ರಾಬಹುಧಾವದಂತಿ' ಎಂದು ಋಗ್ವೇದವೇ ಸಾರಿದೆ. ದೇವನೊಬ್ಬ ನಾಮ ಹಲವು ಎಂಬ ವಿಚಾರ ಹೊಸದಲ್ಲ. ಅದಕ್ಕೆ ಇಷ್ಟಲಿಂಗ ಭಕ್ತಿಯಿಂದ ಅಂತಿಮವಾಗಿ ಸರ್ವಾಂತರ್ಯಾಮಿಯನ್ನೇ ಆರಾಧಿಸಿದಂತಾಗುವದು ಎಂಬುದು ನನ್ನ ದೃಢ ವಿಶ್ವಾಸದ ಮಾತು. ಇದು ವಿರೋಧವಲ್ಲ ; ಇದು ವಿರೋಧ ತಪ್ಪಿಸುವ ಹೂಟ !

ಮಠಾಧೀಶ ೨ : ತಾವು ವೇದಗಳನ್ನು ಟೀಕಿಸಿಲ್ಲವೆ ?

ಬಸವಣ್ಣ : ಡಾಂಭಿಕತೆಯನ್ನು ಬಿಟ್ಟು ಸಾತ್ವಿಕತೆಯನ್ನು ಬೆಳೆಸಿಕೊಳ್ಳಲು ನಾನು ಪ್ರತಿಪಾದಿಸಿರುವೆ.

ಮಠಾಧೀಶ ೧ : ಈ ಕುರಿತು ನಾವು ರಾಜರೆದುರು ತಮ್ಮನ್ನು ಪ್ರಶ್ನಿಸಿದರೆ ಇಷ್ಟೇ ಧೈರ್ಯವಾಗಿ ಉತ್ತರಿಸಬಲ್ಲಿರಾ ?

ಬಸವಣ್ಣ : ಕೂಡಲ ಸಂಗಮದೇವನುಳ್ಳನ್ನಕ್ಕ ಬಿಜ್ಜಳನ ಭಯವೆನಗೇಕಯ್ಯ ?

ಮಠಾಧೀಶ ೨ : ಹಾಗಾದರೆ ಇನ್ನು ಮುಂದಿನ ಮಾತು ಕತೆ ರಾಜ ಸನ್ನಿಧಿಯಲ್ಲಿ ನಡೆಯಲಿ.

(ಮಠಾಧೀಶರು, ಓಲಗದವರು ಹೋಗುವರು.)

(ಅವರು ಹೋದತ್ತೇ ನೋಡುತ್ತ ಕೆಲಹೊತ್ತು ಬಸವಣ್ಣ ನಿಲ್ಲುವರು.)

ಬಸವಣ್ಣ : ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು. ಅದು ಅವರು ಮಾಡಿಕೊಂಡ ಅಪಾರ್ಥ. ಇವರು ಮಾಡಿಕೊಂಡ ಅಪಾರ್ಥ ಇದು. ಆನೆ ಅಂಕುಶಕ್ಕಂಜುವದೆ ? ಸಿಂಹದ ನಖವೆಂದಂಜುದಲ್ಲದೆ, ಆನು ಬಿಜ್ಜಳಂಗಂಜುವೆನೆ ? ನಾನೊಬ್ಬ ಶಿವಕಿಂಕರ. ಈ ರಾಜ್ಯ, ಅಧಿಕಾರಗಳ ಲೋಭವೆನಗಿಲ್ಲೆಂದು ಇವರಿಗೆ ಹೇಗೆ ತಿಳಿಸಲಿ ?

(ಢಣ್ ಎಂದು ಜಾಗಟೆಯ ಶಬ್ದವಾಗುವದು)

(ನಿಡುಸುಯ್ದು ಅಧೋವದನನಾಗಿ ಬಸವಣ್ಣನು ಮಂದಗತಿಯಲ್ಲಿ ಹೋಗುವನು.)

(ಕತ್ತಲೆ)

(ಮರೆಯಲ್ಲಿ - 'ಡೋಹಾರ... ನಾವು ಡೋಹಾರ' ಒಂದು ಪದ್ಯ ಕೇಳಬರುವರು.)

(ಪುನಃ ಬೆಳಕು ಚೆಲ್ಲಿದಾಗ ಕಾಣುವ ದೃಶ್ಯ ; ಕಕ್ಕಯ್ಯ ಮತ್ತು ಅವನ ಹೆಂಡತಿ. ಹೆಂಡತಿ ಅರಳೀಕಾಯಿ (ಹರಡಾ) ಪುಡಿ ಮಾಡುತ್ತಿದ್ದಾಳೆ. ಪಕ್ಕದಲ್ಲಿ ಜಾಲಿಯ ತೊಗಟೆಗಳ ರಾಶಿ ಇದೆ. ಕಕ್ಕಯ್ಯ ಚರ್ಮವನ್ನು ಹರಡಿಕೊಂಡು 'ಸಿಪ್'ನಿಂದ ಅದರ ಮೇಲುಭಾಗವನ್ನು ತಿಕ್ಕಿ ಕೂದಲುಗಳನ್ನೆಲ್ಲ ತೆಗೆಯುತ್ತಿದ್ದಾನೆ)

ಹೆಂಡತಿ : ಇಷ್ಟು ದೂರ ದೇಶಾಂತರಕ ಬಂದು ನಾವು ಏನ ಕಮಾಯಿಸಿಧಾಂಗಾತು ? ಅಲ್ಲಿ ಮಂದಿ ಎಷ್ಟು ಮರಾಮರಾ ಮರಗಿದ್ದರು.

ಕಕ್ಕಯ್ಯ : ಇಲ್ಲೊ, ನಮ್ಮನ್ನು ಹಚ್ಚಿಕೊಂಡಿಲ್ಲೇನು ಮಂದಿ ?

ಹೆಂಡತಿ : ಯಾರ ಅದಾರ ?

ಕಕ್ಕಯ್ಯ : ಮಾದರ ಚೆನ್ನಯ್ಯ, ಹಳ್ಳಯ್ಯ, ಶ್ವಪಚಯ್ಯ, ಸಂಬೊಳ್ಳಪ್ಪ.

ಹೆಂಡತಿ : ಆದರ ಅಲ್ಲೀ ಮಂದಿ ಏನ ಕೆಟ್ಟಮಾಡಿದ್ದರಂತ ನೀವು ಇಷ್ಟ ದೂರ ದೇಸಕ ದೇಶಾಂತರ ಬಂದು ಬಿಟ್ಟರಿ ?

ಕಕ್ಕಯ್ಯ : ಬರೀ ದೇಶಾಂತರ ಅಲ್ಲ.

ಹೆಂಡತಿ : ಮತ್ತ ?

ಕಕ್ಕಯ್ಯ : ಇಗ ನೋಡ್ತಿ ಇಲ್ಲೊ ? ಇಲ್ಲಿ ಬಂದ ನಾವು ಇಲ್ಲೀ ಮಾತ ಕಲತಿವಿ. ಇಲ್ಲೀ ಹಂಗ ಅರಿವಿ ತೊಡಕಾತ್ತೀವಿ. ಅಂದಾರ ನಾವು ದೇಶಾಂತರ ಮಾಡೀವಿ. ವೇಷಾಂತರ ಮಾಡೀವಿ. ಅಷ್ಟ ಯಾಕ ಭಾಷಾಂತರಾನೂ ಮಾಡೀವಿ.

ಹೆಂಡತಿ : ಇಷ್ಟೆಲ್ಲ ಅವಾಂತರ ಯಾದಕ್ಕಾಗಿ ಅಂತ ?

ಕಕ್ಕಯ್ಯ : ಅದ್ ನಿನಗ ಈಗ ತಿಳ್ಯಾಕಿಲ್ಲ.

ಹೆಂಡತಿ : ನಾ ಹೆಣ್ಣ ಹೆಂಗಸ. ನನಗೆ ತಿಳವಳಿಕಿ ಇಲ್ಲ, ನೀವು ತಿಳಿದಾವರು. ಗಂಡಸರು, ತಿಳಿಸಿ ಹೇಳ್ರಿ. (ಕೊನೆಯ ಮಾತನ್ನು ತೀಡಿ ಹೇಳುವಳು.)

ಕಕ್ಕಯ್ಯ : ಅದ ಹೇಳಿ ತಿಳ್ಯೊ ·ಯಿಸಯ ಅಲ್ಲ, ಅನಬವಸಬೇಕು.

ಹೆಂಡತಿ : ಹ್ಯಾಂಗ ?

ಕಕ್ಕಯ್ಯ : ನನ್ನ ಹಂಗ.

ಹೆಂಡತಿ : ನೀವೇನ ಬ್ಯಾರೆ ಅನಬವಸಾಕತ್ತೀರಿ ? ಅಲ್ಲಿ ಮಾಡಿದ್ನs ಇಲ್ಲ್ಯೂ ಮಾಡ್ತಾ ಇದೀರಿ. ಇಲ್ಲಿ ಬಂದಮ್ಯಾಲೂ ಇದನs ಮಾಡೋದಿತ್ತು ಅಂದಮ್ಯಾಲ ಅಲ್ಲಿಂದ ಇಲ್ಲಿ ಏಕಾಏಕಿ ಬರೂದ ನಿಮ್ಮ ತಲ್ಯಾಗ ಹ್ಯಾಂಗ ಬಂತು ?

ಕಕ್ಕಯ್ಯ : ಹಿಂಗ ದೇಶಾಂತರ ಮಾಡಾವರು ನಾವು ಪೈಲಾದವರೂ ಅಲ್ಲ, ಕಡ್ಯಾವರೂ ಅಲ್ಲ, ಬರೂದೊಂದುs ಅಂತ ಅಲ್ಲ. ಹಿಂದ ನಾವು ಕಾಶೀ ಅಯೋಧ್ಯಾ ಕಡೆ ಇದ್ದಾವರು. ಎಂದೊ ಹಿರೇರ ಕಾಲಕ್ಕ ನರ್ಮದಾ ಸೀಮಿಗಿ ಬಂದ್ವಿ. ಈಗ ಇಕಡಿ ದಕ್ಷಿಣ ದೇಸಕ ಬರೂ ಪ್ರೇರಣಾ ಆಯ್ತು. ಇತ್ತ ಬಂದಿವಿ.

ಹೆಂಡತಿ : ಹ್ಯಾಂಗಾಯ್ತು ಅಂತ ಆ ಪ್ರೇರನಾ ? ಏನ ಕನಸ ಬಿತ್ತೊ ? ಕನಸಿನ್ಯಾಗ ಯಾವ ಗೊರವ ಸಾದೂ ಬಂದ ಹೇಳಿದನೊ ? ಏನ ಮುಗಲ ಹರದ ದೇವರ ಹಣಿಕಿ ನೋಡಿ ನಿಮ್ಮನ್ನ ಕರದ ಹೇಳಿದನೊ ? ಏನಾತು ?

ಕಕ್ಕಯ್ಯ : ಪ್ರೇರಣಾ ಅಂದರ...

ಹೆಂಡತಿ : ಹೇಳ್ರಿ

ಕಕ್ಕಯ್ಯ : ಈಗ ಸಾದೂ ಸಂತರು, ಸನ್ಯಾಸಿಗೋಳು ಇರ್ತಾರಿಲ್ಲ ?

ಹೆಂಡತಿ : ನಾವೂ ಅವರ ಹಂಗs ಏನು ?

ಕಕ್ಕಯ್ಯ : ಹಂಗ ಅಲ್ಲ.

ಹೆಂಡತಿ : ಮತ್ತ ?

ಕಕ್ಕಯ್ಯ : ಅವರು ಭಾಳ ದಿವಸ ಒಂದು ಕಡೆ ಇರ್ತಾರೇನು ?

ಹೆಂಡತಿ : ಇಲ್ಲ.

ಕಕ್ಕಯ್ಯ : ಅವರಿಗೆ ತಿರಕ್ಕೊಂತ ಇರೂ ಪ್ರೇರಣಾ ಯಾರ ಕೊಡತಾರ ?

ಹೆಂಡತಿ : ದ್ಯಾವರು ?

ಕಕ್ಕಯ್ಯ : ಹಂಗ, ಅದs ದ್ಯಾವರು ನನಗೂ ಪ್ರೇರಣಾ ಕೊಟ್ಟ.

ಹೆಂಡತಿ : ಹಂಗಾರ ನನಗ ಆಗs ಇದನೆಲ್ಲ ತಿಳಿಸಿ ಹೇಳಲಿಲ್ಲ ಯಾಕ ? ದಡಗ್ಗನs ಎದ್ದಿರಿ. ಇದ್ದ ಚರ್ಮ ಗಿರ್ಮ ಎಲ್ಲಾ ಹಂಚಿ ಬಿಟ್ಟಿರಿ. ಮನಿಮಾರ ಹಂಗs ಬಿಟ್ಟಿರಿ. ಬಗಲಾಗ ಸೀರಿ ಇಟ್ಕೊಂಡ ನಾನೂ ನಿಮ್ಮ ಬೆನ್ನ ಹಿಂದ ಬಂದೆ. ಇಷ್ಟ ದೂರದ ಪ್ಯಾಣ ನಿಮ್ಮ ತಲ್ಯಾಗ ಇತ್ತು ಅಂದಾಗ ತಯಾರಿ ಮಾಡಿಕೊಂಡ ಬರಾಕ ಆಗತಿತ್ತ ಇಲ್ಲ ?

ಕಕ್ಕಯ್ಯ : ಏನ ತಯಾರಿ ? ಮನಸಿನ ತಯಾರಿನಽ ತಯಾರಿ. ಅದೊಂದ ಇದ್ದರ ಬ್ಯಾರೆ ಏನೂ ಬೇಕಾಗೂದಿಲ್ಲ.

ಹೆಂಡತಿ : ಮನಸಿನ ತಯಾರಿ ನಿಮದ ಇತ್ತು. ನಂದು ?

ಕಕ್ಕಯ್ಯ : ಮದಿವಿ ಮಾಡ್ಕೊಂಡಾಗ ಹೇಣ್ತಿ ಸಿಕ್ಕ ಗಂಡನ ಕೂಡ ಜನ್ಮಾ ಮಾಡಾಕ ಮನಸಿನ ತಯಾರಿ ಮಾಡ್ಕೊಂಡಽ ಇರ್ತಾಳ.

ಹೆಂಡತಿ : ನೀವು ಮನಸಿನ ತಯಾರಿ ಮಾಡಿಕೊಂಡಾಗ ಎಲ್ಲಿ ಹೋಗೋದು ಏನು ಮಾಡೋದು ಅಂತ ನಿಮಗೊತ್ತಿತ್ತು. ಹಂಗ ಅದೆಲ್ಲ ನನಗ ಗೊತ್ತಿತ್ತೇನು ?

ಕಕ್ಕಯ್ಯ : ಅದ ಗಂಡನ ಕೂಡ ಬಾಳೆ ಮಾಡೊ ಹೆಣ್ಣಿನ ಮನಸಿನ ತಯಾರಿ! ನಾವು ಸಣ್ಣ ಪುಟ್ಟ ಕೆಲಸಕ, ಬದಲಾವಣೆಗೆ ಮನಸಿನ ತಯಾರಿ ಮಾಡ್ಕೋತೀವಿ. ನೀವು ಹೆಂಗಸ್ರು ಇಡೀ ಆಯುಸ್ಸ ಗಂಡನ ಸೆರಿಗ್ಗಿ ಕಟ್ಟಿ ಬಿಡೂ ಮನಸಿನ ತಯಾರಿ ಮಾಡ್ತೀರಿ. ನಿಮ್ಮ ತಯಾರೀ ಮುಂದ ನಮ್ಮ ತಯಾರಿ ಯಾವ ಲೆಕ್ಕ ?

ಹೆಂಡತಿ : ಆದರೂ ಈ ಊರಿಗೆ ಬಾ ಅಂತ ನಿಮಗ ಯಾರು ಹೇಳಿದರು ?

ಕಕ್ಕಯ್ಯ : ಯಾರೂ ಹೇಳಲಿಲ್ಲ.

ಹೆಂಡತಿ : ಹಂಗಽ ಬಂದಿರಿ ?

ಕಕ್ಕಯ್ಯ : ಹೌದು.

ಹೆಂಡತಿ : ಅದಽ ಇಂಥಾ ಊರಿಗೆ ಹೋಗಬೇಕಂತ ಯಾಕ ಠರಾಸಿದಿರಿ ?

ಕಕ್ಕಯ್ಯ : ಸನ್ಯಾಸಿಗೋಳ ಅಂತ ಹೇಳಿದ್ನೆಲ್ಲಾ ?

ಹೆಂಡತಿ : ಹಂ.

ಕಕ್ಕಯ್ಯ : ಅವರಿಂದ ಈ ಊರ ವಿಚಾರ ತಿಳೀತು.

ಹೆಂಡತಿ : ಏನದು ?

ಕಕ್ಕಯ್ಯ : ಈ ಊರಾಗ ಒಬ್ಬ ದೇವರಂಥಾ ಮನಷಾ ಅದಾನ. ಅವ ನಮ್ಮಂತಾವರ್ನ ಉದ್ಧಾರ ಮಾಡ್ತಾನ.

ಹೆಂಡತಿ : ಯಾಂವ ಅವ ?

ಕಕ್ಕಯ್ಯ : ಅವಕಾಶ ಬರಲಿ. ತೋರಿಸ್ತೀನಿ.

ಹೆಂಡತಿ : ಹೆಸರೇನು ?

ಕಕ್ಕಯ್ಯ : ಒಮ್ಮಿ ಮನಿಗೇ ಕರಸ್ತೀನಿ.

ಹೆಂಡತಿ : ಯಾರ ಅಂವ ? ಅವನ ಹೆಸರೇನು ?

ಕಕ್ಕಯ್ಯ : ಅಂವ ಇಂವ ಅನಬಾರದು.

ಹೆಂಡತಿ : ಮತ್ತ ?
ಕಕ್ಕಯ್ಯ ಅವರು ಈ ರಾಜ್ಯದ ಡಣಾಯಕ ಮಂತ್ರಿ ಅದಾರ.

ಹೆಂಡತಿ : ಅಂದರ ?

ಕಕ್ಕಯ್ಯ : ಅವರು ಹೇಳಿಧಾಂಗ ಸೈನ್ಯ ಕೇಳತಽತಿ. ಅವರ ಹೇಳಿದಾಂಗ ರಾಜ್ಯ ನಡೀಽತತಿ.

ಹೆಂಡತಿ : ಮತ್ತ ರಾಜಾ ಏನ ಮಾಡ್ತಾನ ? ಎಲ್ಲಾ ಈ ಡಣಾಯಕ ಮಂತ್ರೀನಽ ನಡಸಿದ ಮ್ಯಾಲ.

ಕಕ್ಕಯ್ಯ : ಈ ರಾಜಾ ಡಣಾಯಕ ಮಂತ್ರಿನ್ನ ನೇಮಸ್ತಾನ. ಡಣಾಯಕನ ಕೂಡ ಚರ್ಚಾಮಾಡಿ ಏನೆನು ಮಾಡಬೇಕು ಅದನ್ನು ಗೊತ್ತ ಮಾಡಿ ಹಂಗ ಮಾಡಂತ ಹೇಳ್ತಾನ.

ಹೆಂಡತಿ : ಹಿಂಗ ಮಾಡು ಅಂತ ಹೇಳಿಬಿಟ್ಟರ ಆಯ್ತೇನು ಅವನ ಕೆಲಸ ?

ಕಕ್ಕಯ್ಯ : ರಾಜ್ಯ ಅವಂದು.

ಹೆಂಡತಿ : ಅದರ ಎಲ್ಲಾರಿಗೆ ಹೇಳಾವ ಡಣಾಯಕ. ಇದ ಛಲೋಲಾ. ಪೆಟ್ಟಿಗಿ ಒಬ್ಬರ ಕಡೆ. ಅದರ ಕೀಲಿ ಕೈ ಮತ್ತೊಬ್ಬರ ಕಡೆ.

ಕಕ್ಕಯ್ಯ : ನೀ ಎಲ್ಲಾ ತಪ್ಪ ತಪ್ಪ ತಿಳಕೋತಿ.

ಹೆಂಡತಿ : ಇರಲೇಳ್ರಿ, ಹಂಗಾರ ಇಲ್ಲೀ ರಾಜಾ ಯಾರು ? ಮತ್ತ ಆ ಡಣಾಯಕ ಯಾರು ?

ಕಕ್ಕಯ್ಯ : ಇಲ್ಲೀ ರಾಜಾ ಬಿಜ್ಜಳ. ಡಣಾಯಕ ಮಂತ್ರಿ ಬಸವಣ್ಣ.

ಹೆಂಡತಿ : ಅಂವ ದೇವರಂಥಾ ಮನಷಾನಽ ?

ಕಕ್ಕಯ್ಯ : ಹೌದು.

ಹೆಂಡತಿ : ಮತ್ತ ಅಂವನ ಮ್ಯಾಲಿನಾವ ರಾಜಾ. ಅಂದರ ಅಂವ ದೇವರ ಮ್ಯಾಲಿನ ದೊಡ್ಡ ದೇವರ ಇದ್ದಾಂಗ.

ಕಕ್ಕಯ್ಯ : ರಾಜಾ ರಾಜಾನಾಂಗಽ ಅದಾನ. ಖರೆ, ಮಂತ್ರಿ ದೇವರ್ಹಾಂಗ ಅದಾನ.

ಹೆಂಡತಿ : ಇದೊಳೆ ಚಮತ್ಕಾರ ಆಯ್ತಲಾ ! ದೇವರಂಥಾ ಮನಷಾ ಅಂದರ ಏನೇನ ಮಾಡ್ತಾನ ? ಕಣ್ಣ ಇಲ್ಲದಾವರಿಗೆ ಕಣ್ಣು, ಕಾಲಿಲ್ಲದಾವರಿಗೆ

ಕಾಲು, ಮಕ್ಕಳಿಲ್ಲದಾವರಿಗೆ ಮಕ್ಕಳು ಕೊಡ್ತಾನೇನು ? ಬೇಕು ಅಂದಾಗ ಮಲಿ ತರಸತಾನೇನು ?

ಕಕ್ಕಯ್ಯ : ದೇವರಂದರ ಅಂಥಾಂವಲ್ಲ.

ಹೆಂಡತಿ : ದೇವರಿಗೆ ಬೇಡಿಕೊಳ್ಳಾವರು ಎಲ್ಲಾ ಇಂಥಾವಽ ಬೇಡಾಂಗಿಲ್ಲೇನು?

ಕಕ್ಕಯ್ಯ : ಅಂಥಾ ದೇವರಲ್ಲ.

ಹೆಂಡತಿ : ದೇವರೊಳಗೂ ಮತ್ತ ಹಂತಾವು ಹಿಂತಾವು ಅಂತ ಇರ್ತಾವೇನು? ಹಂಗಾರ ಇಂವ ಎಂಥ ದೇವರು ?

ಕಕ್ಕಯ್ಯ : ನೀ ಮಾರೀ ಮಸಣೀಽ ದೇವರ್ಷಷ್ಟ ತಿಳಕೊಂಡಿದಿ ನಿನಗ ಆ... ಆ... ಪರಮಾತ್ಮನ ಬಗ್ಗಿ ತಿಳಿಸಿ ಹೇಳೂದ ನನ್ನ ಕೈಲಿ ಆಗಾಂಗಿಲ್ಲ.

ಹೆಂಡತಿ : ಹಂತಾ ಪರಮಾತ್ಮನ್ಹಂಗ ಅದಾನ ? ಅವ ಬೇಡಿದ್ದ ಕೊಡ್ತಾನಿಲ್ಲ?

ಕಕ್ಕಯ್ಯ : ಬೇಡೂ ಮನಸ್ಸ ಇಲ್ಲಧಾಂಗ ಮಾಡತಾನ.

ಹೆಂಡತಿ : ಅಂದರ ?

ಕಕ್ಕಯ್ಯ : ಮನಷಾಗ ಆಸೆ ಭಾಳ.

ಹೆಂಡತಿ : ಈ ಆಸೆ ಅದಾವಂಥೇಳಿ ಮನಷಾ ದುಡೀತಾನ. ಬದಕತಾನ, ಇಲ್ಲಾಂದರ ಏನೈತಿ ?

ಕಕ್ಕಯ್ಯ : ಅದಕ್ಕ ಈ ಆಸೆ ಮಾಡೊ ಮನಸ್ಸ ಹಸನ ಮಾಡತಾನು.

ಹೆಂಡತಿ : ಹಸನ ಆದ ಮನಸ್ಸಾ ಆಸೆ ಮಾಡಾಂಗಿಲ್ಲ ?

ಕಕ್ಕಯ್ಯ : ಮಾಡತೈತಿ ಆದರ.

ಹೆಂಡತಿ : ಆದರಽ ಏನು ?

ಕಕ್ಕಯ್ಯ : ಈ ಜಗತ್ತೆಲ್ಲ ಹುಟ್ಟಸಿದ ದ್ಯಾವರ ಧ್ಯಾನಾ ಮಾಡೂ ಆಸೆ ಮಾಡತೈತಿ.

ಹೆಂಡತಿ : ಅದರಿಂದೇನ ಸಿಗತೈತಿ ?

ಕಕ್ಕಯ್ಯ : (ವ್ಯಸ್ತನಾಗಿ) ಬೆಳ್ಳಿ ಸಿಗಾಂಗಿಲ್ಲ, ಬಂಗಾರ ಸಿಗಾಂಗಿಲ್ಲ, ಮನಸ್ಸಿಗೆ ಶಾಂತಿ ಸಿಗತೈತಿ. ಸಾಕಪ್ಪ, ಇನ್ನೇನ ಬ್ಯಾಡಾ ಅಂತ ಅನೂ ಹಂಗ ಆಗತೈತಿ.

ಹೆಂಡತಿ : ಏನ ಹೇಳ್ತೀರೋ ? ಒಟ್ಟ ಒಮ್ಮಿ ಭೆಟ್ಟಿ ಮಾಡಿಸಿರಿ, ನೋಡೋಣ ಹೆಂತಾ ಸಮಾಧಾನ ಸಿಗತೈತೆಂತ.

ಕಕ್ಕಯ್ಯ : (ದೂರ ನೋಡಿ) ಭಲೆ ಪುಣ್ಯವಂತಿ ನೀನು. ಅಕಾ, ಅವರೂ ಇಕಡಿ ಬರಾಕತ್ತಾರ. ನೋಡು, ಹಿಂಗೂ ಹೋಗ್ತಾರ. ನೋಡು. ಕೈ ತೊಳಕೊಂಡ ಬರತೀನಿ. ಕೈ ಮುಗೀಬೇಕು. ಪಾದಾ ಮುಟ್ಟಬೇಕು. (ಒಳಗೆ ಹೋಗುವನು.)

ಹೆಂಡತಿ : (ಅವಸರದಿಂದ ಕೈಗಳನ್ನು ಸೆರಗಿಗೆ ಒರೆಸಿಕೊಂಡು) ನಮ್ಮ ಮನಿಗಿ ಪರಸಾದಕ ಬರ್ರಿ ಅಂತ ಕೇಳ್ತಿನಿ. ಇಷ್ಟ ಹೇಳ್ತಾರಂದ ಮ್ಯಾಲ ನಮನೀಗಿ ಅವರು ಪಾದಾ ಬೆಳಸಿದರ, ನಮ್ಮ ಮನ್ಯಾಗ ಪ್ರಸಾದ ತಗೊಂಡರ ನಮ್ಮ ಏಳೇಲ ಜನ್ಮದ ಪಾಪಾ ಹರದೀತು.

(ಬಸವಣ್ಣ ಅಧೋವದನಾಗಿ ಅವಸರವಸರವಾಗಿ ಬರುವನು.) ಯಪ್ಪಾ, ದ್ಯಾವರ, ಮಂತ್ರಿ, ಅಣ್ಣಾರೀ, ಡಣಾಯಕರ. ನಮ್ಮ ಮನೀ ಪರಸಾದಾ ತಗೊಂಡ ಹೋಗರಿ.

(ಬಸವಣ್ಣನ ಲಕ್ಷ್ಯವಿಲ್ಲ. ಹಾಗೇ ಹೋಗಿ ಬಿಡುವನು. ಕಕ್ಕಯ್ಯನ ಹೆಂಡತಿ ನಿರಾಶಾಭಾವದಿಂದ ಅವ ಹೋದತ್ತಲೇ ನೋಡುತ್ತ ನಿಲ್ಲುವಳು. ಕಕ್ಕಯ್ಯನ ಬರುವನು.)

ಕಕ್ಕಯ್ಯ : ಬಂದರು ?

ಹೆಂಡತಿ : ಅಕಾ ಹ್ವಾದರ ನೋಡ್ರಿ.

ಕಕ್ಕಯ್ಯ : ನೀ ಕರೀಲಿಲ್ಲ ?

ಹೆಂಡತಿ : ಕರದೆ, ಮಂತ್ರಿ, ಅಣ್ಣಾರಿ, ಡಣಾಯಕರ ಅಂತಾನೂ ಕರದೆ. ನಮ್ಮ ಮನೀ ಪರಸಾದ ತಗೊಂಡ ಹೋಗ್ರಿ ಅಂದೆ. ಅವರು ಹೊಳ್ಳಿ ಸೈತ ನೋಡಲಿಲ್ಲ.

(ಡಣ್ ಎಂಬ ಜಾಗಟೆಯ ಶಬ್ದ)

ಕಕ್ಕಯ್ಯ : (ತನ್ನಷ್ಟಕ್ಕೇ) ಹೊಳ್ಳಿ ಸೈತ ನೋಡಲಿಲ್ಲ ?

ಹೆಂಡತಿ : ಹ್ಯಾಂಗ ನೋಡ್ಯಾರು ? ನಮ್ಮ ಜಾತಿಯಾವದು ? ಕುಲ ಯಾವದು? ಕಸಬ ಯಾವದು ?... ಅಂಥಾಂಗ ಇಲ್ಲಿ ಬಂದು ನಾವು ದೇಶಾಂತರ ಮಾಡಿದಾಂಗಾತು. ವೇಷಾಂತರ ಬಾಸಾಂತರ ಎಲ್ಲ ಆವಾಂತರಾನೂ ಮಾಡಿಥಂಗಾತು, ಆದರ ಬದಲಾಗದ್ದು ಅಂದರ ಕುಲ ಕಸಬು ಎರಡೂ.

ಕಕ್ಕಯ್ಯ : ನಮ್ಮ ಕುಲ ಅಂದರ ಕಡಿಮೀದೇನ ಅಲ್ಲ ! (ಅಭಿಮಾನ ಹುರಿಗೊಳ್ಳುತ್ತಿದೆ.) ವೀರ ಬಾಹುಕನ ಕುಲದವರು ನಾವು. ನಮ್ಮ ಕಸಬೂ ಕಡಿಮೇದ ಅಲ್ಲ, ಶಿವನಿಗೇ ತೊಡಾಕ ಚರ್ಮ ಹದಾ

ಮಾಡಿ ಕೊಟ್ಟವರು ನಾವು. ರಿಸಿಗೋಳಿಗೆಲ್ಲ ಜಿಗರೀ ಚರ್ಮ ತಯಾರಿಸಿ ಕೊಟ್ಟಾವರು ನಾವು !

(ಸಂಬೋಳಿಯವನು ಬರುವನು.)

ಸಂಬೋಳಿ : ನಮಸ್ಕಾರ ಕಾಕಾ.

ಕಕ್ಕಯ್ಯ : (ತನ್ನ ವಿಚಾರದಲ್ಲೇ) ನಾವೂ ಏನ ಕಡಿಮ್ಯಾವರಲ್ಲ,

ಸಂಬೋಳಿ : ಕಾಕಾ -

ಕಕ್ಕಯ್ಯ : ನಾವೂ ಏನ ಕೀಳ ಅಲ್ಲ.

ಸಂಬೋಳಿ : (ಅವನನ್ನ ಮುಟ್ಟಿ ಅಲುಗಾಡಿಸಿ) ಕಾಕಾ -

ಕಕ್ಕಯ್ಯ : (ಎಚ್ಚತ್ತು) ಆಂ ? ಓ... ಸಂಬೋಳ್ಯಪ್ಪಾ ! ಬಾ... ಯಪ್ಪಾ.

ಸಂಬೋಳಿ : ಕಾಕಾ, ಇಂದ ಎದ್ದ ಗಳಿಗ್ಗೆ ನಿಮ್ಮಿಬ್ಬರದೂ ಮಾರಿ ನೋಡಿದ್ದೆ.

ಕಕ್ಕಯ್ಯ : ಅದಕ್ಕ ನಿನ್ನ ಕೆಲಸ ಕೆಟ್ಟಿತs ?

ಸಂಬೋಳಿ : ಅದಕ್ಕ ನನ್ನ ಭಾಗ್ಯ ತೆರೀತೊಯಪ್ಪಾ.

ಕಕ್ಕಯ್ಯ : ಆಂ ?

ಸಂಬೋಳಿ : ಹಂ ! ಇಂದು ಬಸವಣ್ಣೋರ ದರಸನ ಆತು. ಅವರು ನನ್ನ ಕೂಡ ಮಾತಾಡಿದವರು. ನಮ್ಮ ಕೆಲಸದ ಬಗ್ಗೆ, ನನ್ನ ಬಗ್ಗೆ - ಭಾಳ ಭಾಳ ಮಾತಾಡಿದರು.

ಕಕ್ಕಯ್ಯ : ಮತ್ತ ನಮ್ಮ ಕಡೆ ಹೊಳ್ಳಿ ಸೈತ ನೋಡಲಿಲ್ಲ ?

ಸಂಬೋಳಿ : ಯಾರು ?

ಕಕ್ಕಯ್ಯ : ಅವರs.

ಸಂಬೋಳಿ : ಯಾರು ಅವರು ?

ಕಕ್ಕಯ್ಯ : ನಿಮ್ಮ ಬಸವಣ್ಣೋರು ! ಅಂದಾಗ, ನಿನಗ ದರಶನಾ ಕೊಟ್ಟಿದ್ದರ, ಆಸಿರವಾದ ಮಾಡಿದ್ದರ, ಅದು ನನ್ನ ಮಾರಿ ನೋಡಿದ್ದರಿಂದಲ್ಲ, ನನ್ನ ಪುಣ್ಯಾದಿಂದಲ್ಲ, ನಿನ್ನ ಹಡದ ತಾಯೀ ಪುಣ್ಯಾದಿಂದ. ಇನ್ನೂ ನಮ್ಮ ಪಾಪಾ ಭಾಳ ಇದ್ದಾಂಗಾತು ! (ನಿಟ್ಟುಸಿರು) ಈ ಪಾಪಾ ತೊಳದ ಹೋಗೂ ಮಟಾ ದೇವರ ಧ್ಯಾನಾ ಮಾಡ್ತೀನಿ !

ಹೆಂಡತಿ : ಮತ್ತೆ ಕೆಲಸ ?

ಕಕ್ಕಯ್ಯ: ಕೆಲಸಕ್ಕ ಕೈ ಖಾಲೀನ ಇರ್ತಾವಲ್ಲ, ಕೈಲೆ ಕೆಲಸ

ನಡೀತತಿ, ಮನಸ್ಸಿನ್ಯಾಗ ಧ್ಯಾನ ನಡೀತತಿ ! ದಿವಸಾ ಬೆಳಿಗ್ಗೆ ಲಗು ಎದ್ದು, ಜಳಕ ಮಾಡಿ, ಮಡೀಲೆ ನೀರ ತಂದು, ಪೂಜೀ ಮಾಡಿ, ಧ್ಯಾನಾ ಮಾಡತೇನಿ ! ನನ್ನ ಪಾಪಾ ಕರಗಿ ಬಸವಣ್ಣೋರ ದರಸನ ಆಗೂ ತನಕಾ ಯಾರ ಕೂಡಾನೂ ಮಾತ ಆಡಾಂಗಿಲ್ಲ !

ಹೆಂಡತಿ : ನನ್ನ ಕೂಡ ?

ಕಕ್ಕಯ್ಯ : ಯಾರದೂ ಕೂಡ ಇಲ್ಲ.

ಹೆಂಡತಿ : ಅಂದರ ಹ್ಯಾಂಗರೀ ? ಏನಾರ ಬೇಕು ಬ್ಯಾಡ, ಹೇಳೂದು ಕೇಳೂದು ಹ್ಯಾಂಗ ?

ಕಕ್ಕಯ್ಯ : ಆದರ ಚಿಂತೀ ಅವನs ಮಾಡಲಿ.

ಹೆಂಡತಿ : ಹಂಗ ಅಂದರ ಹ್ಯಾಂಗಾ ? ಇದೇನ ಝುಡ್ಡಿ ಬಂತs ನಮ್ಮವ್ವಾ ! ಎಲ್ಲಿಂದ ಎಲ್ಲಿ ಆ ದೇವ್ರಂಥಾ ಮನಷನ ಮನಿಗಿ ಬರ್ರಿ ಅಂತ ಕರ್ರ್ಯಾಕ ಹ್ವಾದ್ನಿ ನಾನು ! ನನ್ನ ತಪ್ಪಾತು. ನೀವು ಬರೇ ನೋಡ ಅಂದಿದ್ದೀರಿ. ನೀವು ಮನಿಗಿ ಕರಸತೀನಿ ಅಂದಿದ್ದೀರಿ. ನಾ ಕಾಯಲಿಲ್ಲ. ನಾನs ಕರದ ಬಿಟ್ಟೆ, ಅದಕ್ಕ ಸಿಟ್ಟಾದರೊ ಏನೆನೊ ? ಅವರೂ ಸಿಟ್ಟಾದರು, ನೀವು ಸಿಟ್ಟಾಗಿ ಮಾತ ಬಂದ ಮಾಡಾವ್ರ ಅಂತೀರಿ, ಇನ್ನ ನನ್ನದ ಹ್ಯಾಂಗ ? (ಬಿಕ್ಕಲಾರಂಭಿಸುವಳು.)

ಸಂಬೋಳಿ : ಅಕ್ಕಾ, ನಾ ಬಂದ ನಿಮಗ ತ್ರಾಸ ಕೊಟ್ಟಾಂಗಾತು. ನಾ ಹಿಗ್ಗಿನಿಂದ ಹೇಳಿದ ನನ್ನ ಸಂತೋಸ ನಿಮ್ಮನ್ನ ಹಿಂಗ ಕುಗ್ಗಿಸಿತು. ಹಿಗ್ಗಿನ ಮಗ್ಗಲಾಗs ಕುಗ್ಗ ಬರಬೇಕಂದ್ರ, ಏನೊ ತೆಪ್ಪಗಂಟ ಆಗೇತಿ. ನನ್ನ ಚಮಸ್ರಿ. ಕಾಕಾ, ನೀವು ಹಿಂಗ ಸಿಟ್ಟ ಹಿಡೀ ಬ್ಯಾಡ್ರಿ. ಬಸವಣ್ಣೋರ ಏನೊ ಚಿಂತ್ಯಾಗ ಇರಬೇಕು. ಇಲ್ಲ, ಅವಸರದಾಗ ಇರಬೇಕು. ಇಲ್ಲಾಂದರ ಹಿಂಗ ಮಾಡಾವರ ಅಲ್ಲ, ಅದರಾಗೂ ಬಡವರು, ನಮ್ಮಂಥ ಕೀಳ ಕುಲದವರು ಅಂದರಂತೂ ಅವರು ಮುಗಿಬೀಳತಾರ. ನಮ್ಮ ಪಕ್ಷ ವಹಿಸಿ ಮ್ಯಾಲ ಜಾತ್ಯಾವರ ಕೂಡ ಅವರು ಜಗಳಾಡತಾರ. ಹೊರತು, ಕೀಳ ಜಾತ್ಯಾವರ್ನ ಕಡಿಗಣಸಾಂಗಿಲ್ಲ. ನೀವು ಮನಸ ಶಾಂತ ಮಾಡರಿ.

ಕಕ್ಕಯ್ಯ : ಯಾರದು ಕೀಳ ಕುಲ ? ನಮದು ? ಅಲ್ಲಲ್ಲ ! ನಾವೂ ಹಿಂದ ಇಲ್ಲ, ರಾಜರಾಗಿ ಆಳಿದಾವರು. ಈ ತಿಳೀ ಬಣ್ಣದ ನಮಕಿಂತ ತುಸಾ ಹೆಚ್ಚಿನ ತಿಳಿವಿನ ಜನ ಬಂದು ನಮ್ಮನ್ನು ತದಕಿದರು. ತುಳಿದರು. ಹ್ವಾನಾ ಹೋಗಿ ನಾವು ಹೀನಾ ಆದಿವಿ ಆದರೂ ಹುಲಿ ಮುಪ್ಪಾದರೂ ಹುಲ್ಲ ಮೇಯಾಂಗಿಲ್ಲ, ಅದಕ್ಕ ನಮ್ಮ ವಂಶದ

ಹಿಂದಿನ ಹಿರ್ಯಾ, ವೀರಬಾವುಕ ಈ ತಿಳೀ ಬಣ್ಣದವರ ರಗೂವಂಶದ ರಾಜಾ ಹರಿಚ್ಚಂದ್ರನ್ನ ಆಳಾಗಿ ಇಟ್ಟಕೊಂಡು ತಾ ರಾಜಾನ್ಹಾಂಗ ಮೆರದಿದ್ದ. ಅವರ ನಮ್ಮನ್ನು ತುಳದಿದ್ದರೂ ನಾವೂ ಅವರ್ನ ತುಳೀದೇ ಬಿಟ್ಟಿಲ್ಲ. ಅವರು ತುಳದ ಸಂದರ್ಬಗೋಳು ಭಾಳ ಇರಬಹುದು. ನಮ್ಮವು ಕಡಿಮಿ ಇರಬಹುದು. ಹಂಗಾದರೇನಾತು ? ನಾವೂ ಅವರ ಸರೀಸಮಾನರು ನಾವ್ಯಾಕ ಕಡಿಮ್ಯಾವರ ಅನಕೋಬೇಕು ? ಸಂಬೊಳ್ಯಾಪ್ಪಾ, ನಾವು ಈ ಭೂಮಿ ತುಳದಷ್ಟ ಇವರ್ಯಾರ ತುಳದ್ದಾರ ? ನಾವ ದೇಶಾಂತರ ಮಾಡಿದಷ್ಟ ಇವರ್ಯಾರ ಮಾಡ್ಯಾರ ? ನಾವು ಎಂದ್ಯಾಟಿವಿ ದಾಟೀವಿ. ಸಂಕಟಗೋಳ್ನ ದಾಟೀ ಬಂದೀವಿ. ಈಸಿ ಬಂದೀವಿ. ಇವರಕಿಂತ ನಾವ ಹೆಚ್ಚ ಕಾಲ ಇರತೀವಿ. ಇವರು ನಾಸ್ ಆದರೂ ನಾವು ನಾಸ್ ಆಗಾಂಗಿಲ್ಲ.

ಸಂಬೋಳಿ : ಹೌದ ಕಾಕ. ಬಿರಿಗಾಳಿಗಿ, ಮರ ಬೀಳತಾವ. ಹುಲ್ಲ ಉಳೀತಾತಽತಿ, ಗಾಳಿ ಸರದ ಮ್ಯಾಲ ಮತ್ತ ತಲಿ ಎತ್ತಿ ನಿಲ್ಲತತಿಽ. ಆದರ ನಮ್ಮ ಕೀಳ ಕಸಬಿನಿಂದ ನಮಗ ತಗಲಿರೂ ಕೀಳತನ ಹೋಗಲಾರದು.

ಕಕ್ಕಯ್ಯಾ : ನಮ್ಮ ಕಸಬ ಕೀಳಲ್ಲ. ಶಿವಗ ಉಟ್ಟಕೊಳಾಕ ಹುಲೀ ಚರ್ಮ ಹದಮಾಡಿ ಕೊಟ್ಟಾವರು ನಾವು. ರಿಸಿಗೋಳಿಗೆ ಹಾಸಿಕೊಂಡು ತಪಸ್ ಮಾಡಾಕ ಚಿಗರೀ ಚರ್ಮ ಹದ ಮಾಡಿ ಕೊಟ್ಟಾವರು ನಾವು. ಸಾಯೂ ತನಾ ನಂದು ನಂದು ಅಂತ ಬಡಕೋಳಾವರೂ ಸತ್ತ ಗಳಿಗ್ಗೆ ಸಿಡದ ದೂರ ಸರೀತಾರ, ಸತ್ತ ಮ್ಯಾಲೂ ಹಿಂದ ಸರೀದಽ ಪ್ರಾಣಿಗೋಳ ದಹನ, ದಫನಕ್ಕೂ, ಎಲುಬು, ಮಾಂಸ-ರಕ್ತ-ಚರ್ಮಗಳನ್ನ ಇದ್ದವರ ಉಪಯೋಗಕ್ಕ ಬರೂ ಹಂಗ ಮಾಡೋದ್ಕೂ ದುಡ್ಯಾವರು ನಾವು. ಶಿವ ಸ್ಮಶಾನದ ದೇವರಲ್ಲ ? ಹಂಗಾರ ನಾವಽ ನಿಜವಾದ ಶಿವಗಣದವರು. ಹಿಂಗಿರಲಾಗಿ ನಮ್ಮ ಕಸಬ ಯಾಕ ಕೀಳ ಆಗ್ತಾತ ? ಕೆಲಸದಾಗ ಕೈ ಕೊಳೀ ಆಗ್ತತಿ ಮೈದೊಳಗಟ್ಟತತಿ ಆದ. ಇದನ್ನ ಕೀಳ ಅಂತಿದ್ದರ ಅದು ತಪ್ಪು. ಇದ ಹೊರಗಿನ ಕೊಳಿ ; ಹೊರಗಿಂದ ಹೊರಗಽ ತೊಳದ ಹಾಕಬೌದು. ಆದರಽ ಮೈಮುರಿ ದುಡೀಲಾರದವರು, ಮೂರ ಮೂರು ಸರತಿ ಮುಳಮುಳಗಿ ಏಳಾವರು, ಮೈ ತಿಕ್ಕಿ ತಿಕ್ಕಿ ಜಳಕ ಮಾಡಾವರು, ಕೂತ ಕೂತಲ್ಲೇ ಬೊಜ್ಜ ಬೆಳದ ಬೆವರ ಬಿಟ್ಟು ಕೊಳೀ ಆಗ್ತಾರಲ್ಲ ? ಅದು, ಅವರ ಒಳಗಿನ ಕೊಳಿ. ಹೊರಗಿನ ಕೊಳೀ ತೊಳೀಬೌದು. ಒಳಗೆಲ್ಲ ಕೊಳೀ ತುಂಬ್ಕೊಂಡವರ ಆ ಕೊಳೀ ಕಳ್ಯಾವರ ಹ್ಯಾಂಗ ? ಯಾರದು ಕೊಳಿ ? ಯಾರದು ಕೊಳಿ ಹೇಳ ಸಂಬೋಳ್ಯಪ್ಪಾ ಹೇಳು... ಅಂದ ಎಂದ್ಯಾಟಿವ್ಯಾಗ

ಅವ ಹಾರೂ ರಾತ್ರೀ ಗಾಬರ್‍ಯಾಗಿ ನಮ್ಮ ಆಸರಾಕ ನಿಂತ. ಹಾವಾ ನೋಡಿ ಗಾಬರ್‍ಯಾಗಿ ನನ್ನ ಹಿಡಕೊಂಡ. ಆವಾಗ ಅವನಿಗೆ ಮೈಲಿಗೆ ಆಗಲಿಲ್ಲ. ಮರುದಿನ ನಸಕ ಹರದ ಮ್ಯಾಲ ಜಳಕಕ್ಕ ಹೋಗಬೇಕಾದ್ರ, ನಮ್ಮನ್ನ ಸಂಗಾಟ ಬರೂಗುಡಲಿಲ್ಲ. ಜನವಾರ ತೋರಿಸಿ 'ತಡೀರಿ' ಅಂದ್ಹಾ. ಕಷ್ಟದಾಗ ನಮ್ಮ ಜಾತಿ ಅವನಿಗೆ ಕಾಣಲಿಲ್ಲ. ಪಾರ ಆದ ಮ್ಯಾಲ ಮತ್ತ ನಾಯೀ ಬಾಲ ಆಗಿ ನಿಂತ. ಈ ಬಸವಣ್ಣನ್ನ ಇನ್ನ ನಾ ಹಾದೀ ಕಾಯಾಂಗಿಲ್ಲ ದೇವರಿಗಿ ಆಣೀ ಹಾಕತೀನಿ. ಅವನಽ ಬೇಕಾದ್ರ ನನ್ನ ಹುಡಕ್ಕೊಂಡ ಬರಲಿ. ನನ್ನ ಯೋಗ್ಯತಾ ಏನನ್ನೋದ ಪರಕ್ಸೆ ಆಗೇ ಹೋಗಲಿ. ನನ್ನ ಒಳಗ ಏನಾದರೂ ಘಟ್ಟಿತನ ಇದ್ದರ ನಾ ಗೆಲ್ಲತೀನಿ. ಮತ, ಖರೇನಽ ಕೀಳತನ ಇದ್ದರ ಸೋಲತೇನಿ.

ಸಂಬೋಳಿ : ಆದರೂ ಬಸವಣ್ಣೋರು ಹಂತಾವರ ಅಲ್ಲ. ನೀವು ಅವರ ಮ್ಯಾಲ ಸಿಟ್ಟ ಹಿಡೀಬ್ಯಾಡ್ರಿ. ನೋಡ್ರಿ ಇನ್ನೊಮ್ಮೆ ವಿಚಾರ ಮಾಡ್ರಿ.

ಕಕ್ಕಯ್ಯ : ನನಗ ಬಸವಣ್ಣ ಮ್ಯಾಲಿ ಸಿಟ್ಟ ಇಲ್ಲ. ನನ್ನ ಮ್ಯಾಲಽ ಸಿಟ್ಟು, ನನ್ನ ಕೀಳ ಜಾತೀ ಮ್ಯಾಲ ಸಿಟ್ಟು. ನನಗ ದ್ಯಾವರ ಮ್ಯಾಲ ಸಿಟ್ಟು. ತಮ್ಮ, ಇದ ತಂದೀ ಮಕ್ಕಳ ನಡುವಿನ ಹ್ಯಾವದ ಪ್ರಶ್ನೆ ಐತಿ. ನೀ ಇದರಾಗ ತಲೀ ಹಾಕಬ್ಯಾಡ.

ಹೆಂಡತಿ : ಹೋಗಲೇಳ್ರಿ, ಇಷ್ಟ ದೂರಿಂದ ಈ ಬಸವಣ್ಣೋರ್ನ ಕಾಣಲಿಕ್ಕೆ ಬಂದೀರಿ. ಇಷ್ಟ ದಿನ ಕಾದೀರಿ.

ಕಕ್ಕಯ್ಯ : ಬರೇ ಕಾದಿಲ್ಲ, ಸುತ್ತ ಸುಳದಾಡೀನಿ ನಿತ್ಯ ನೆನದೇನಿ. ಅವರ ಬೋಧನಾ ಮಂದೀ ಬಾಯಿಂದ ದೂರದಿಂದ ಕೇಳಿ ತಿಳಕೊಂಡೇನಿ. ಎದರಾ ಬದರಾ ನಿಂತಿಲ್ಲ. ಅವರ ಕೈಲಿ ಸೈ ಅನಿಸಿಕೊಂಡಿಲ್ಲ. ಅದರ ಪರೀಕ್ಸೆ ಇನ್ನಽ ಆಗಬೇಕು. ಸಂಬೋಳ್ಯಪ್ಪಾ, ನೀ ಏನ ಮನಸಿಗಿ ಹಚ್ಚಿಕೊಬ್ಯಾಡ. ಇದರಾಗ ನಿಂದೇನ ತಪ್ಪ ಇಲ್ಲ. ಇದ ತಂದಿ ಮಕ್ಕಳ ನಡುವಿನ ಹ್ಯಾವದ ಪ್ರಶ್ನೆ ಐತಿ ಅನಲಿಲ್ಲ ?

ಸಂಬೋಳಿ : ಬಸವಣ್ಣೋರ ಮ್ಯಾಲ ಸಿಟ್ಟಿಲ್ಲ ಅಲ್ಲ ? (ಏಳುವನು.)

ಕಕ್ಕಯ್ಯ : ನಾ ದ್ಯಾವರಿಗಿ ಆಣೀ ಇಟ್ಟೀನಿ. ಆ ದ್ಯಾವರ ಮನಷಾ ಈ ಬಸವಣ್ಣಾ ಇದ್ದರ ನನ್ನ ಆಣಿ ಬಿಡಸಲಿ. ಇದ ಅವಗಽ ಐತಿ. (ಸಂಬೋಳಿಯವನು ಹೋಗುವನು. ಕಕ್ಕಯ್ಯಾ ನೀರಿನ ಕೊಡ, ಧೋತರ ತಗೊಂಡು ಹೊರಡುವನು.)

ಹೆಂಡತಿ : ಎಲ್ಲಿ ಹೊಂಟಿರಿ !

ಕಕ್ಕಯ್ಯ : ಹಳ್ಳಕ್ಕ ಹೋಗಿ ಜಳಕ ಮಾಡಿ ನೀರು ತಂದು ದ್ಯಾವರಾ ತೊಳದು ಪೂಜಿ ಮಾಡ್ತೀನಿ. (ಹೋಗುವನು.)

ಹೆಂಡತಿ : (ತನ್ನಷ್ಟಕ್ಕೆ) ಮತ್ತೆಲ್ಲಿ ದೇಶಾಂತರ ಹೊಂಟಿರೇನೊ ಅಂತ ಅಂಜಿದೆ. (ಕೆಲಸದ ಸಾಮಾನುಗಳನ್ನು ಎತ್ತಿ ಇಟ್ಟು) ಅಡಗೀ ಕೆಲಸಕ ಹತ್ತಬೇಕಿನ್ನ. ಬಸವಣ್ಣ ಬಸವಣ್ಣ ಅಂತ ಬಡಕೊಂಡರು. ಆ ಬಸವಣ್ಣ ಎದರಿಗೆ ಬಂದರೂ ನೋಡಲಿಲ್ಲ. ಕೈ ಮಾಡಿ ಕರದರೂ ಕಣ್ಣ ಹಾಯಿಸಲಿಲ್ಲ. (ನಿಟ್ಟುಸಿರು) ನಮ್ಮ ಹಿರ್ಯಾನ ಭ್ರಾಂತಿ ಯಾವಾಗ ಹೊಗತತ್ತ್ಯೋ ! ದೇಸ ಬಿಟ್ಟ ದೇಸಕ ಬಂದ್ವಿ. ನಮ್ಮ ಬಳಗ ಇಲ್ಲ. ನಮ್ಮ ಮಂದಿ ಇಲ್ಲ. ಹೋದೇನಂದರ, ನೋಡೇನಂದರ ಹತ್ತರದ ಹಾದಿ ಅಲ್ಲ. ಇಡೀ ಆಯುಸ್ಸದಾಗ ಒಮ್ಮೊಮ್ಮೆ ಆಗೋಷ್ಟು ದೂರದ ಪ್ಯಾಣ. ಏನ ಹಣ್ಯಾಗ ಬರದತ್ತ್ಯೋ ನೋಡಬೇಕು. (ನಿಡುಸುಯ್ದು ಒಳಗೆ ಹೋಗುವಳು.)

(ಕತ್ತಲೆ.)

# ಅಂಕ - ೩

(ಮರೆಯಿಂದ)

ಅವಕಾಶ ವಂಚಿತರೆಲ್ಲ ।
ಜಾತಿ ಭೀತಿ ಭೂತ ಮೆಟ್ಟಿ ॥
ಶಿವಾನುಭವ ಯೋಗಿಯಾಗಿ ।
ಕಾಯರೋಗ ಕುಲವನಳಿಸಿ ॥
ಕಾಯಕಾವ ಬಿಡದೆ ಸಾಗಿ ।
ಸಾರಿದ ಮಂತ್ರದ, ಅನುಭವ ಮಂಟಪ ॥

(ಬೆಳಕು ಚೆಲ್ಲಿದಾಗ ಕಾಣುವ ದೃಶ್ಯ - ಬಸವಣ್ಣ, ಘಟಿವಾಳಯ್ಯ, ಮಾಚಯ್ಯ, ಹಡಪದ ಅಪ್ಪಣ್ಣ, ಮೊಳಗಿ ಮಾರಯ್ಯ - ಮೊದಲಾದವರು ಕುಳಿತಿದ್ದಾರೆ. ಶ್ವಪಚಯ್ಯ ಮತ್ತು ಚೆನ್ನಯ್ಯ ಬರುವರು. ಶ್ವಪಚಯ್ಯ ಬಿಳೀ ಗಡ್ಡದ ವಯಸ್ಕ ಚೆನ್ನಯ್ಯ ಹರೆ ತಿರುಗುತ್ತಿರುವ ಪ್ರೌಢ.)

ಶ್ವಪಚಯ್ಯ : ಶರಣು ಬಸವಣ್ಣೋರೇ

ಬಸವಣ್ಣ : ಶರಣು ಶ್ವಪಚಯ್ಯನವರೆ, ಶರಣು ಚೆನ್ನಯ್ಯನವರೆ,

ಚೆನ್ನಯ್ಯ : ಘಟಿವಾಳಯ್ಯನವರೆ, ಮಾಚಯ್ಯನವರೆ, ಅಪ್ಪಣ್ಣೋರೆ, ಮಾರಯ್ಯನೋರೆ, ಎಲ್ಲಾರಿಗೂ ಶರಣು, (ಶ್ವಪಚಯ್ಯ, ಚೆನ್ನಯ್ಯ ಇಬ್ಬರೂ ವಂದಿಸುವರು.)

ಎಲ್ಲ ಶರಣರು : ಶರಣು, ಬನ್ನಿ, ಏನು ಸಮಾಚಾರ ?

ಶ್ವಪಚಯ್ಯ : ಸಮಾಚಾರ ಮಹತ್ವದ್ದ ಐತಿ.

ಬಸವಣ್ಣ : ಏನದು ?

ಚೆನ್ನಯ್ಯ : ಮಾಳವಾದಿಂದ ಶಿವಭಕ್ತರೊಬ್ಬರು ಬಂದಾರ.

ಬಸವಣ್ಣ : ಯಾರು ?

ಶ್ವಪಚಯ್ಯ : ಡೋಹರರು, ನಾವು ಡೊಹರಣ್ಣಾ ಅಂತೀವಿ.

ಚೆನ್ನಯ್ಯ : ಸಂಬ್ಬೋಳ್ಯಪ್ಪಾ ಕಾಕಾ ಅಂತಾನ.

ಬಸವಣ್ಣ : ಎಂದು ಬಂದಿದಾರೆ ?

ಶ್ವಪಚಯ್ಯ : ಕೆಲವು ವರ್ಷ ಆಯ್ತು.

ಬಸವಣ್ಣ : (ಆಶ್ಚರ್ಯದಿಂದ) ವರ್ಷಗಳೇ ಗತಿಸಿದರೂ ನನಗೆ ಗೊತ್ತೇ ಇಲ್ವಲ್ಲ.

ಚೆನ್ನಯ್ಯ : ಹೌದು, ಅವರು ಸ್ವಲ್ಪ ಸಂಕೋಚ ಸ್ವಭಾವದವರು.

ಬಸವಣ್ಣ : ಮನುಷ್ಯ ಅಂತರ್ಮುಖಿಯಾದರೆ ಈ ಬಗೆಯ ಸಂಕೋಚ ಅವನ ನಡತೆಯಲ್ಲಿ ಬರ್ತದೆ. ಅನುಭವ ಮಂಟಪಕ್ಕೆ ಒಮ್ಮೆಯೂ ಕರೆತರಲಿಲ್ಲವೇಕೆ ?

ಶ್ವಪಚಯ್ಯ : ಬರ್ತಿರ್ತಾರ. ದೂರ ಕೂಡತಾರ. ಹಂಗ ಎದ್ದ ಹೋಗತಾರ.

ಬಸವಣ್ಣ : ಮಾಳವಾದಿಂದ ಬಂದವರೆ ?

ಚೆನ್ನಯ್ಯ : ಹೌದು

ಬಸವಣ್ಣ : ವಿಂದ್ಯಾಟವಿಯನ್ನು ದಾಟಿ ಬಂದವರೆ ?

ಶ್ವಪಚಯ್ಯ : ಹೌದು.

ಬಸವಣ್ಣ : ನರ್ಮದಾ ನದಿಯನ್ನು ದಾಟಿ ಬಂದವರಲ್ಲವೇ ?

ಚೆನ್ನಯ್ಯ : ಹೌದು.

ಬಸವಣ್ಣ : ನರ್ಮದೆಯನ್ನು ದಾಟುವುದಕ್ಕೆ ನಮ್ಮ ದೇಶದ ಸಂಸ್ಕೃತಿಯಲ್ಲಿ ಬಲು ಮಹತ್ವವಿದೆ. ಆದಿ ಶಂಕರರ ಗುರು ಈ ನರ್ಮದಾ ನದಿಯ ಆಚೆಯವರು. ಆದ್ಯ ಗುರು ಶಂಕರರ ಗುರುಗಳ ಸೀಮೆಯವರು ಎಂದಾಗ ನಮಗೆ ಪೂಜ್ಯರು. ವಿಂಧ್ಯಾಟವಿಯನ್ನು ದಾಟಿ ಬಂದವರಲ್ಲವೆ ? ಹಾಗಿದ್ದರೆ ಅದೂ ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ಬಲು ಮಹತ್ವದ ಅಂಶ. ಅಂದು ಅಗಸ್ತ್ಯರು ವಿಂಧ್ಯಾಟವಿಯನ್ನು ದಾಟಿ ಬಂದರು. ಉತ್ತರ ದಕ್ಷಿಣಗಳು ಒಂದಾದವು. ರಘುರಾಮಭದ್ರ ವಿಂಧ್ಯಾಟವಿಯನ್ನು ದಾಟಿ ಬಂದ ಉತ್ತರ ದಕ್ಷಿಣಗಳು ಮತ್ತೆ ಒಂದಾದವು. ಅಂದು ಋಷಿಗಳು, ರಾಜರು ಈ ಜೋಡಿಸುವ ಕೆಲಸ ಮಾಡಿದ್ದು ಇಂದಿಗೂ ಭಣಂಗ

ಸಂನ್ಯಾಸಿಗಳಿಂದ, ವ್ಯಾಪಾರಕ್ಕಾಗಿ ಓಡಾಡುವ ಶೆಟ್ಟಿ - ಬಣಜಿಗರಿಂದ ಮುಂದುವರಿದಿದೆ. ಆಕ್ರಮಣ, ಕ್ಷಾಮ, ಡಾಮರ ನಿಮಿತ್ತವಾಗಿ ಜನರು ದೇಶಾಂತರ ಮಾಡುವುದ್ರಿಂದ ಇದು ಮುಂದುವರಿದಿದೆ.

ಇವರೆಲ್ಲರಿಗಿಂತ ಈಗ ಬಂದಂತಹ ಶಿವಭಕ್ತರ ವಿಂಧ್ಯೋಲ್ಲಂಘನ ಮಿಗಿಲಾದದ್ದು. ಏಕೆಂದರೆ ಇವರು ಡೋಹರರು ಅಂದಿರಲ್ಲ ? ಶಿವಭಕ್ತರು ಎಂದಿರಲ್ಲ ? ನಾನು ಅವರನ್ನು ಕಾಣಬೇಕು. ಎಲ್ಲಿರುವರು ? ಇಲ್ಲಿ ಬಂದಿರುವರೇ ? ಕರೆಯಿರಿ.

ಶ್ವಪಚಯ್ಯ : ಅವರು ಈಗ ಕೆಲದಿನಗಳಿಂದ ಯಾರೊಂದಿಗೂ ಮಾತಾಡುವದೇ ಇಲ್ಲ.

ಚೆನ್ನಯ್ಯ : ಸ್ವಲ್ಪ ಮುಂಗೋಪಿ.

ಬಸವಣ್ಣ : (ಕಿರುನಕ್ಕು) ಭಕ್ತರು ದೇವರ ಮೇಲೆ ಕೋಪಿಸುವುದೇನೂ ಹೊಸ ವಿಷಯವಲ್ಲ.

ಶ್ವಪಚಯ್ಯ : ಅವರು ನಿಮ್ಮ ಮೇಲೆ ಸಿಟ್ಟಾಗಿರುವರು.

ಬಸವಣ್ಣ : ಶಿವಭಕ್ತರೊಬ್ಬರು ಈ ಶಿವಕಿಂಕರನ ಮೇಲೆ ಸಿಟ್ಟಾದರೆ ? ಪ್ರಮಾದ, ಪ್ರಮಾದ.

ಚೆನ್ನಯ್ಯ : ಅಂದರೆ ಅವರು ನಿಮ್ಮ ಮ್ಯಾಲೇ ಸಿಟ್ಟಾಗಿದಾರೆ ಅಂತೇನಲ್ಲ, ದೇವರಿಗೆ ಆಣೆ ಹಾಕಿದ್ದಾರಂತೆ.

ಬಸವಣ್ಣ : ಏನಂತ ?

ಶ್ವಪಚಯ್ಯ : ಬಸವಣ್ಣೋರು ತನ್ನ ಬಾಗಿಲಿಗೆ ಬರಬೇಕಂತ.

ಬಸವಣ್ಣ : ಈ ಕಿಂಕರನು ಸದಾ ಸಿದ್ಧ, ನಡೆಯಿರಿ, ಈಗಲೇ ಹೋಗೋಣ.

ಚೆನ್ನಯ್ಯ : ಅಂದರೆ - (ಏನೋ ವಿವರಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಧ್ವನಿ)

ಬಸವಣ್ಣ : ಏನು ?

ಶ್ವಪಚಯ್ಯ : ತಾವು ಒಮ್ಮೆ ಅವರ ಮನೆಯ ಎದುರಿನಿಂದ ಬರುತ್ತಿದ್ದಿರಂತೆ.

ಚೆನ್ನಯ್ಯ : ಅವರ ಹೆಂಡತಿ ನಿಮ್ಮನ್ನ ಪ್ರಸಾದ ತೆಗೆದುಕೊಂಡು ಹೋಗಿರೆಂದು ಕರೆದರಂತೆ.

ಶ್ವಪಚಯ್ಯ : ನೀವು ಹೊರಳಿಯೂ ನೋಡಲಿಲ್ಲ, ಹಾಗೇ ಬಂದು ಬಿಟ್ಟರಂತೆ.

ಚೆನ್ನಯ್ಯ : ಇದೆಲ್ಲ ಸಂಬೋಳೆಪ್ಪನಿಂದ ಗೊತ್ತಾಯ್ತು.

ಬಸವಣ್ಣ : ಇರಬಹುದು ತಡೆಯಿರಿ, ನೆನಪಾಯ್ತು ಈಗ್ಗೆ ಕೆಲ ದಿನಗಳ ಹಿಂದೆ, ಸುಮಾರು ತಿಂಗಳೊಪ್ಪತ್ತೇ ಆಯ್ತು ಅಂದು ಮಠಾಧೀಶರು ಓಲಗದವರು ನಾನು ಧರ್ಮ ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದೇನೆಂದು ಆರೋಪಿಸಿದರು, ನಾನು ಡಾಂಭಿಕತೆಯನ್ನು ಬಿಟ್ಟು ಸಾತ್ವಿಕತೆ ಬೆಳಸಿಕೋಬೇಕೆಂದು ಪ್ರತಿಪಾದಿಸ್ತೇನೆ ಎಂದೆ. ನನ್ನನ್ನು ಎಲ್ಲರೂ ಅಪಾರ್ಥ ಮಾಡಿಕೊಳ್ಳುವುದಕ್ಕಾಗಿ ಮನಸ್ಸು ಬೇಸರಗೊಂಡಿತ್ತು. ಅದೇ ಚಿಂತೆಯಲ್ಲಿ, ಚೆನ್ನಯ್ಯನವರ ಮನೆಯ ಕಡೆಗೆ ಹೋಗೋಣವೆಂದು ಹೊರಟಿದ್ದೆ. ಆದರೆ ವಿಚಾರದ ಜಾಲದಲ್ಲಿ ಚೆನ್ನಯ್ಯನವರ ಮನೆಯನ್ನು ದಾಟಿ ಹೋದದ್ದೂ ಗೊತ್ತಾಗಲಿಲ್ಲ. ಮರಳಿ ಮನೆಗೆ ಬಂದಾಗಲೆ ಸುತ್ತಿನ ಪ್ರಪಂಚದ ಅರಿವು ಮೂಡಿದ್ದು. ಬಹುಶಃ ಅದೇ ದಿನ ಈ ಪ್ರಮಾನ ನಡೆದಿರಬೇಕು. ಆದರೆ ಈ ಪ್ರಮಾದ ಅರಿವಿಲ್ಲದೆ ನಡೆದಿದೆ. ಕ್ಷಮೆ ಕೇಳೋಣ. ನಡೆಯಿರಿ. ಎಲ್ಲರೂ ಹೋಗೋಣ. ('ನಡೆಯಿರಿ. ನಡೆಯಿರಿ' ಎನ್ನುತ್ತ ಎಲ್ಲರೂ ಹೊರಡುವರು)

(ಕತ್ತಲೆ)

(ಮರೆಯಿಂದ 'ಡೋಹಾರ....' ಮೊದಲ ನುಡಿ ಕೇಳಿ ಬರುವುದು)

(ಬೆಳಕು ಚೆಲ್ಲಿದಾಗ ಕಕ್ಕಯ್ಯನ ಮನೆ. ಕಕ್ಕಯ್ಯ ಚರ್ಮದಿಂದ ಚಾಲ ಅಂಗ ಅಂಗವಾಗಿ ಹಾಳೆಗಳನ್ನು ನಿರಿಗೆ ಮಾಡಿ ಮಡಿಕೆ ಹಾಕುತ್ತಿದ್ದಾನೆ. ಹೆಂಡತಿ ಮುಂದಾಣಕ್ಕೆ ನೀರು ತಂದು ಸುರಿಯುತ್ತಿದ್ದಾಳೆ. ಬಸವಣ್ಣ ಮತ್ತಿತರ ಶರಣರ ಪ್ರವೇಶ. ಕಕ್ಕಯ್ಯ ಅವರ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಅವನ ಹೆಂಡತಿ ಅವನಿಗೆ ಸೂಚನೆ ಮಾಡಿ, ಭುಜ ತಟ್ಟಿ ಅವರೆಲ್ಲ ಬಂದಿರುವುದನ್ನು ಸನ್ನೆ ಮಾಡಿ ಹೇಳುವಳು. ಮತ್ತೆ ಅರ್ಧ ಮರೆಯಾಗಿ ಕುತೂಹಲದಿಂದ ನೋಡುತ್ತ ನಿಲ್ಲುವಳು.

ಬಸವಣ್ಣ : ಕಾಯಕ ಯೋಗಿಗಳಿಗೆ ಶಿವಕಿಂಕರ ಬಸವನ ಪ್ರಣಿಪಾತಗಳು.

(ವಂದಿಸುವನು.)

(ಕಕ್ಕಯ್ಯ ನೋಡುವುದಿಲ್ಲ.)

ಶ್ವಪಚಯ್ಯ : ಡೋಹರಣ್ಣ, ಬಸವಣ್ಣೋರು ಬಂದಿದ್ದಾರೆ.

ಚೆನ್ನಯ್ಯ : ಅವರೇ ನಿಮ್ಮ ಬಾಗಿಲಿಗೆ ಬರಬೇಕೆಂದಿದ್ದಿರಲ್ಲ ? ಈಗ ನೋಡ್ರಿ ಬಂದಿದ್ದಾರೆ.

ಶ್ವಪಚಯ್ಯ : (ಇನ್ನೂ ಕಕ್ಕಯ್ಯ ತಲೆ ಎತ್ತಿ ನೋಡದಿರಲು) ಸಿಟ್ಟು ಶಿವನ ಮೇಲೊ ಬಸವನ ಮೇಲೋ ?

ಚೆನ್ನಯ್ಯ : ದೇವರ ಮೇಲೆ ಆಣೆ ಇಟ್ಟು ವ್ರತಸ್ಥರಾಗಿದ್ದ ನಿಮ್ಮ ನೇಮ ಫಲಿಸಿದೆ.

ಹೆಂಡತಿ : (ಮುಂದೆ ಬಂದು ಎಲ್ಲರಿಗೂ ಒಟ್ಟಿಗೆ ನೆಲ ಮುಟ್ಟಿ ನಮಸ್ಕರಿಸುವಳು.) ಬರ್ರಿ ಅಣ್ಣಾ (ಗಂಡನಿಗೆ) ಏನ್ರಿ, ಅವರೆಲ್ಲ ಬಂದಾರ.

ಕಕ್ಕಯ್ಯ : ಅವರು ಬಂದಿಲ್ಲ, ಇವರು ಕರೆ ತಂದಾರ, ಅವರು ಬಂದದ್ದು ಇವರಿಗಾಗಿ. ಈ ಕಷ್ಟ ಕುಲದ ನಷ್ಟದೈವನಿಗಾಗಿ ಅಲ್ಲ.

ಬಸವಣ್ಣ : ಡೋಹರಣ್ಣ ನನ್ನನ್ನ ಕ್ಷಮಿಸಿರಿ. ಆ ದಿನ ಯಾವದೋ ಮನದ ಚಿಂತೆಯಲ್ಲಿದ್ದ ನಾನು ತಮ್ಮನ್ನು ನೋಡದೆ ಹೋದೆ. ಪ್ರಮಾದವಾಯಿತು.

ಕಕ್ಕಯ್ಯ : ಈಗ ಯಾಕೆ ನೆನಪಾಯಿತು ?

ಬಸವಣ್ಣ : ನಿಮ್ಮ ಅಂತರ್ಮುಖತೆ, ನಿಮ್ಮ ನಿಷ್ಠುರ ನಿಷ್ಠೆ ಇವೆಲ್ಲ ನೀವು ಶ್ರೇಷ್ಠ ಸದ್ಭಕ್ತರೆಂದು ತೋರಿಸಿವೆ. ನಿಮ್ಮೆದುರು ನಾನು ನಿಮ್ಮ ತೊತ್ತಿನ, ತೊತ್ತಿನ ಪಡಿದೊತ್ತಿನ ಕಂದ. ಕ್ಷಮಿಸಿರಿ. ನೀವು ಬಂದು ಹಲವು ವರ್ಷಗಳೇ ಆದುವಂತೆ. ನೀವು ಅಗಸ್ತ್ಯ, ರಾಮ, ಭದ್ರರಂತೆ ಇತಿಹಾಸ ನಿರ್ಮಿಸಿದ್ದೀರಿ. ಹರನಿಗೆ ವ್ಯಾಘ್ರಾಂಬರ, ಋಷಿ ಮುನಿಗಳಿಗೆ ಕೃಷ್ಣಾಜಿನ ಒದಗಿಸಿದ ಪವಿತ್ರ ಕುಲ ಕಸಬಿನವರು ನೀವು, ನೀವು ಹಿರಿಯರು.

ಕಕ್ಕಯ್ಯ : (ಕೈಯೊಳಗಿನ ಚರ್ಮಬಿಟ್ಟು) ಈ ಹೇಸಿ ಕೆಲಸ ನಮ್ಮ ಕಸಬು. ಈ ಹೇಸಿ ಕೈಯಲ್ಲಿ ರೊಟ್ಟಿ ಇಟ್ಟುಕೊಂಡು ತಿನ್ನುವವರು ನಾವು. ನಾವು ಕೊಳಕೇರಿಯವರು, ನಾವು ಕಷ್ಟ ಜೀವಿಗಳು. ಹೇಸಿಗಳು.

ಬಸವಣ್ಣ : ಮನಸ್ಸು ಘನ ಮಹಿಮೆಯಿಂದ ಮೆರೆವ ನರನಕ್ಷತ್ರರು ನೀವು ಕಾರ್ಮಿಕ ಮಲ, ಮಾಹಿಕ ಮಲ, ಆಣವ ಮಲಗಳನ್ನು ಲಯಗೊಳಿಸಿ ನೀವು ಸುಜ್ಞಾನ ಪ್ರಭೆಯನ್ನು ಸಾರಬೇಕು. ನಮ್ಮ ಅನುಭವ ಮಂಟಪಕ್ಕೆ ಆಗಮಿಸಿ ನಮ್ಮ ಅನುಭಾವ ಗಂಗೆಯಲ್ಲಿ ನಮ್ಮನ್ನು ಪಾವನ ಗೊಳಿಸಬೇಕು.

ಕಕ್ಕಯ್ಯ: ಅನುಭವ ಮಂಟಪಕ್ಕೆ ನಾನು ಬರ್ತೇನೆ, ನಿಮ್ಮ ಚರ್ಚೆ ಕೇಳ್ತೇನೆ. ಈ ಹಿರಿಯರಾದ ಶ್ವಪಚಯ್ಯ, ಚೆನ್ನಯ್ಯರೊಂದಿಗೆ

ಚರ್ಚಿಸ್ತೇನೆ. ಆದರೂ ನನ್ನ ದೇಶ, ವೇಷ, ಭಾಷೆ, ಕುಲ, ಕಸಬು ಎಲ್ಲ ನಿಮಗೆ ದೂರ.

ಬಸವಣ್ಣ : ನೀವು ಶರಣಸಮೂಹವನ್ನು ಸೇರಬೇಕು. ಶೈವಧಾರೆಯನ್ನು ಬಲಪಡಿಸಬೇಕು.

ಕಕ್ಕಯ್ಯ : ಬಸವಣ್ಣೋರೆ, ಏಕಲವ್ಯ ದ್ರೋಣದಿಂದ ಮರೆಗೆ ನಿಂತು ವಿದ್ಯೆ ಕಲಿತ. ಶಂಬುಕ ಮರೆಗೆ ನಿಂತು ತಪಸ್ಸು ಮಾಡಹೋದ. ನಾನೂ ಅವರಂತೇ ಮರೆಗೆ ನಿಂತೇ ನಿಮ್ಮ ಅನುಭವ ಮಂಟಪದ ಪ್ರಯೋಜನ ಪಡೆದಿರುವೆ.

ಬಸವಣ್ಣ : ನೀವು ಮರೆಗೆ ನಿಂತಿಲ್ಲ. ನಾವು ನಿಮ್ಮ ಕಡೆ ಕಣ್ಣು ಹರಿಸಿಲ್ಲ ಅಷ್ಟೇ. ಇದು ನಿಮ್ಮ ಕತ್ತಲು. ನಮ್ಮ ಪ್ರಮಾದ, ನಿಮ್ಮದಲ್ಲ.

ಕಕ್ಕಯ್ಯ : (ಭಾವಾವೇಶದಿಂದ ಹಾಡುವನು ವಿಲಂಬಿತ ಸ್ವರದಲ್ಲಿ)
ಆಸೆಯಾಮಿಷವಳಿದು ।
ಹುಸಿವಿಷಯಂಗಳೆಲ್ಲ ಹಿಂಗಿ ॥
ಸಂಶಯ ಸಂಬಂಧ ನಿಸ್ಸಂಬಂಧವಾಯಿತ್ತಯ್ಯ ।
ಎನ್ನ ಮನದೊಳಗೆ ಘನಪರಿಣಾಮವ ಕಂಡು ।
ಮನ ಮಗ್ನವಾಯಿತ್ತಯ್ಯ .... ॥ (ತಡೆಯುವನು)

ಬಸವಣ್ಣ : ಸುಂದರವಾಗಿದೆ. ಹಾಡಿರಿ, ಹೇಳಿರಿ. ನಿಂತಿರೇಕೆ ?

ಕಕ್ಕಯ್ಯ : ನನ್ನದೂ ರಚನೆಯೇ ? ಇದೂ ಅನುಭಾವವೆ ? ಇದನ್ನೂ ವಚನವೆನ್ನುವಿರಾ ?

ಬಸವಣ್ಣ : ಇದಕ್ಕೆ ಎರಡು ಮಾತೇ ಇಲ್ಲ.

ಕಕ್ಕಯ್ಯ : ಧನ್ಯನಾದೆ, ಅಂದು ನಾನಿಲ್ಲಿ ಬಂದೆ, ನಿಮ್ಮನ್ನು ಕಂಡೆ. ಇಂದು ನಿಮ್ಮ ಮನಸ್ಸನ್ನು ಗೆದ್ದೆ. ನಾನು ಧನ್ಯನಾದೆ. ಆದರೆ ಒಂದು ಆತಂಕ.

ಬಸವಣ್ಣ : ಏನದು ?

ಕಕ್ಕಯ್ಯ : ನನಗೆ ಅಂಕಿತ ?

ಬಸವಣ್ಣ : ನಿಮ್ಮ ಇಷ್ಟಲಿಂಗವೇ ನಿಮ್ಮ ಅಂಕಿತ.

ಕಕ್ಕಯ್ಯ : ಅದೂ ಇಲ್ಲ.

ಬಸವಣ್ಣ : ಅನುಭವ ಮಂಟಪಕ್ಕೆ ಬನ್ನಿ, ಅಲ್ಲಮ ಪ್ರಭುಗಳೇ ಲಿಂಗಧಾರಣೆ ಮಾಡಿಸುವರು. ಸಕಲ ಶರಣರೆದುರು ನಿಮ್ಮನ್ನು ಪ್ರಕಾಶ ಪಡಿಸುವರು.

ಕಕ್ಕಯ್ಯ : ಅಕ್ಕನ ಚೆನ್ನ ಮಲ್ಲಿಕಾರ್ಜುನ ದೇವನ ಹೆಸರು ನನಗೆ ಪ್ರಿಯವೆನಿಸಿದೆ.

ಬಸವಣ್ಣ : ಹಾಗೇ ಆ ಹೆಸರು ಇನ್ನು ಅನೇಕರಿಗೆ ಪ್ರಿಯವೆನಿಸಿದೆ. ಘನಲಿಂಗ ದೇವರು 'ಮೋಹನ ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತ ಹೊಂದಿದ್ದಾರೆ. ಸೊನ್ನಲಿಗೆಯ ಸಿದ್ಧರಾಮ ಶರಣರು 'ಕಪಿಲ ಸಿದ್ಧ ಚೆನ್ನ ಮಲ್ಲಿಕಾರ್ಜುನ' ನನ್ನು ನೆನೆದು ಹಾಡಿದ್ದಾರೆ. ಪುರದ ನಾಗಣ್ಣವರು ಅಮರಗುಂಡದ ಮಲ್ಲಿಕಾರ್ಜುನನೆಂದು ಅಂಕಿತ ಹೊಂದಿದ್ದಾರೆ. ನೀವು ಹಾಗೇ ಹೊಂದಬಹುದು.

ಕಕ್ಕಯ್ಯ : ಅಭಿನವ ಮಲ್ಲಿಕಾರ್ಜುನನೆನ್ನಲೆ ?

ಬಸವಣ್ಣ : ತುಂಬ ಸುಂದರವಾದ ಅಂಕಿತ. ನಿಮ್ಮ ಬದುಕೂ ಅಭಿನವ. ನಿಮ್ಮ ಇಷ್ಟಲಿಂಗವೂ ಅಭಿನವ. ನಿಮ್ಮ ಅಂಕಿತವೂ ಅಭಿನವ. ಚೆನ್ನಮಲ್ಲಿಕಾರ್ಜುನನಲ್ಲಿ ಭಕ್ತಿ ಇರಿಸಿಕೊಂಡಿರುವ ನೀವು ಧಾರಾಳವಾಗಿ ಅಭಿನವ ಮಲ್ಲಿಕಾರ್ಜುನನೆಂಬ ಅಂಕಿತದಲ್ಲಿ ವಚನ ರಚನೆ ಮಾಡಿರಿ. ಅಂದ ಹಾಗೆ ನಿಮ್ಮ ಸೀಮೆಯಲ್ಲಿ ನಿಮ್ಮನ್ನು ಏನೆಂದು ಕರೆಯುತ್ತಿದ್ದರು ?

ಕಕ್ಕಯ್ಯ : ಕಾಕಾ ಅಂತಿದ್ದರು.

ಬಸವಣ್ಣ : ಆಯ್ತು, ನಾವೂ ನಿಮ್ಮನ್ನು ಕಕ್ಕ ಅಂತೇವೆ. ನೀವು ಹಿರಿಯರು, ಅದರಿಂದ ನೀವು ಕಕ್ಕಯ್ಯ. ನಿಮ್ಮ ಕಸಬೂ ನಿಮ್ಮ ಹೆಸರಿನೊಂದಿಗೇ ಖ್ಯಾತವಾಗಲಿ. ಇಂದಿನಿಂದ ನೀವು ಶರಣವರೇಣ್ಯ ಡೋಹರ ಕಕ್ಕಯ್ಯ, ಮಹಾಶಿವಶರಣ ಡೋಹರ ಕಕ್ಕಯ್ಯ.

ಕಕ್ಕಯ್ಯ : ಧನ್ಯನಾದೆ. (ಹೆಂಡತಿಗೆ) ಲೇ. ಇವರಿಗೆಲ್ಲ ಪಾದಕ್ಕೆ ಬೀಳು. (ಹೆಂಡತಿ ಪ್ರತ್ಯೇಕ ಪ್ರತ್ಯೇಕವಾಗಿ ನಮಸ್ಕರಿಸುವಳು)

ಶ್ವಪಚಯ್ಯ : ತಾಯಿ ಸಾಕು. ಈ ನಮಸ್ಕಾರ ಆ ಪರಶಿವನಿಗೆ ಸಂದಿದೆ. ಇಂಥ ಪುಣ್ಯಸ್ತ್ರೀಯನ್ನು ಹೊಂದಿದ ಕಕ್ಕಯ್ಯನವರ ಬದುಕು ಸಾರ್ಥಕ. ತಾಯೆ ಇಂಥ ಗಂಡನ ಕೈ ಹಿಡಿದ ನಿಮ್ಮ ಬದುಕು ಧನ್ಯ !

ಬಸವಣ್ಣ : ಮಹಾವೀರಶೈವ ಶರಣವರೇಣ್ಯ ಡೋಹರ ಕಕ್ಕಯ್ಯನವರಿಗೆ

ಎಲ್ಲ ಶರಣರು : ನಮೋ ನಮಃ

(ಕಕ್ಕಯ್ಯ ಆನಂದತುಂದಿಲನಾಗಿ ಶಿರಬಾಗಿ ಕೈಜೋಡಿಸಿಕೊಂಡು ನಿಲ್ಲುವನು. ಜಯಘೋಷ ಮುಂದುವರಿಯುವುದು.)

(ಕತ್ತಲೆ)

(ಹಲಗೆಯ ಶಬ್ದ ಕೇಳುವುದು)

(ಬೆಳಕು ಚೆಲ್ಲಿದಾಗ ಗಂಡಭೇರುಂಡ ವೇಷಧಾರಿ ಬಹುರೂಪಿ ಚೌಡಯ್ಯನ ಪ್ರವೇಶ ಸಂಗಡ ಹಲಗೆಯವನೂ ಇರುವನು. ಮೂಗನ್ನು ಪಕ್ಷಿಯ ಚುಂಚಿನಂತೆ ಅಲಂಕರಿಸಲಾಗಿದೆ. ಹಿಂದೊಂದು ಮುಖವಿದೆ. ಅದೂ ಜೀವಂತ ಮುಖ. ಅದಕ್ಕೂ ಚುಂಚಿನ ಮೂಗು. ಎರಡೂ ಮುಖಗಳು ಅತ್ತಿತ್ತ ತಿರುಗಿ ನೋಡಬಹುದು. ಬೆನ್ನಿಗೆ ಒಬ್ಬ ಬಾಲಕನನ್ನು ಹಿಮ್ಮುಖವಾಗಿ ಕಟ್ಟಿಕೊಳ್ಳಬಹುದು. ಅಥವಾ ಎರಡು ವ್ಯಕ್ತಿಗಳು ಬೆನ್ನಿಗೆ ಬೆನ್ನು ಕೂಡಿಸಿ ಕಟ್ಟಿಕೊಂಡು ಈ ವೇಷ ಕಟ್ಟಬಹುದು. ಹಾಡುವಾಗ ನರ್ತನ ಗತಿಯಲ್ಲಿ ಹೆಜ್ಜೆಗಳನ್ನು ಇಡುವನು.)

ಬಹುರೂಪಿ ಚೌಡಯ್ಯ : ವಿಧವಿದ ಬಹುರೂಪ । ಧರಿಸೂತ ಚರಿಸೂವ ॥
ಬಹುರೂಪಿ ಚೌಡಯ್ಯ । ಬಂದಿಹನು ನೋಡಯ್ಯ ॥
(ಹಲಗೆಯ ಬಾಜನ)
ವೇಷದಲಿ ಬಲು ವೇಷ । ಅದು ಗಂಡ ಭೇರುಂಡ ॥
ಹಿಂದೆಮುಖ ಮುಂದೆ ಮುಖ । ತಿರುಗಿದರೆ ಸುತ್ತಮುಖ ॥
ಆ ಕಡೆಗೆ ಈ ಕಡೆಗೆ ಮುಂದುಗಡೆ, ಹಿಂದುಗಡೆ ॥
ಎಡೆಬಿಡದೆ ನಡೆಗೆಡದೆ । ಸುತ್ತೆಲ್ಲ ನೋಡುವದು ॥
ಸುತ್ತಿ ಸುಳಿದಾಡುವದು । ಅದು ಗಂಡ ಭೇರುಂಡ ॥
(ಹಲಗೆಯ ಬಾಜನ)
ನೋಡಿ ನಡೆ ನೀ ಮುಂದೆ । ಎಡೆವೀಯೊ ಎಲೆ ಮಂಕೆ ॥
ಹಿಂದೇನು ಬರುತಿಹುದು । ಸುತ್ತೇನು ನಡೆದಿಹುದು ॥
ಮೇಲೇನು ಕಾದಿಹುದು । ಕೆಳಗೇನು ಬಿದ್ದಿಹುದು ॥
ತಿಳಿಕೊಂಡು ಇಡು ಹೆಜ್ಜೆ । ಎಂದಂದು ಹೇಳುತಿದೆ ॥
ವೇಷದಲಿ ಬಲು ವೇಷ । ಅದು ಗಂಡ ಭೇರುಂಡ ॥
(ಹಲಗೆಯ ಬಾಜನ)
ಮೈ ಮರೆತು ಚಲಿಸದಿರು । ಎಂದು ಎಚ್ಚರಿಪುದಕೆ ॥
ಬಹುರೂಪಿ ಚೌಡಯ್ಯ । ಬಂದಿಹನು, ನೋಡಯ್ಯ ॥
(ಹಲಗೆಯ ಬಾಜನ)
(ಇನ್ನು ಮುಂದೆ ಗದ್ಯ ಶೈಲಿಯಲ್ಲಿ ಕಣಿಯ ಹೇಳುವಂತೆ)
ಇನ್ನಾಡುವೆ ಜಂಗಮ ಬಹುರೂಪ ।
ಅಲ್ಲಮನಂತಾಡುವೆ ಬಹುರೂಪ ।
ಅಜಗಣ್ಣನಂತಾಡುವೆ ಬಹುರೂಪ ।
ಮೊಗವಾಡದಯ್ಯಗಳಂತಾಡುವೆ ಬಹುರೂಪ ।

ಪುರುಷಾಂಗಣವ ಮೆಟ್ಟಿ ಆಡುವೆ ಬಹುರೂಪ ।
ರೇಕಣ್ಣ ಪ್ರಿಯನಾಗನಾಥ -
-ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲ ॥
(ಹಲಗೆ ಬಾಜನ)
(ಮತ್ತೆ ಹಾಡಿನ ಲಯದಲ್ಲಿ)
ವಿಧ ವಿಧ ಬಹುರೂಪ । ಧರಿಸೂತ ಚರಿಸೂವ ॥
ಬಹುರೂಪಿ ಚೌಡಯ್ಯ । ಬಂದಿಹನು ನೋಡಯ್ಯ ।

(ಹಲಗೆ ಬಾಜನದೊಂದಿಗೆ ವೇಷದವನು ಹೊರಡುವನು)

(ಈ ಹಾಡು ಪ್ರಾರಂಭವಾದ ಮೇಲೆ ಜನ ಬಂದು ನೋಡುತ್ತ ನಿಲ್ಲುವರು ಓಲಗದವರೂ ಬರುವರು. ಎರಡನೆಯ ನುಡಿಯನ್ನು ಓಲಗದವರ ಹತ್ತಿರ ಹೋಗಿ, ಹೋಗಿ ಅವರಿಗೆ ಕೈ ಮಾಡಿ ಹೇಳುತ್ತಾ ಹಾಡುವನು. ಆಗ ಜನರು ನಗುವರು. ಓಲಗದವರು ಗಂಭೀರರಾಗುವರು. ಹಾಡು ಮುಗಿದಾಗ ಜನರು ಪುಡಿಕಾಸು ಕೊಡುವರು.)

ಮಠಾಧೀಶ ೧ : ಏ ಬಹುರೂಪಿ ತಡೆ.
(ವೇಷದವ, ಹಲಗೆಯ ತಡೆಯುವರು.)

ಮಠಾಧೀಶ ೨ : ನಿಮ್ಮ ಉದ್ಧಟತನ ಅತಿಯಾಯ್ತು.

ಮಠಾಧೀಶ ೩ : ನೀವೇನು ವೇಷದವರೊ, ಮಂತ್ರಿಗಳ ವಾಲಗವರೊ ?

ಚೌಡಯ್ಯ : ನಾವು ಬಸವ ಗುರುವಿನ ಶರಣ ಶಿಶುಗಳು. ಜನಮ ರಂಜನೆ ನಮ್ಮ ಕಸಬು, ಕಸಬಿನಲ್ಲೂ ಸದ್ ವಿಚಾರ ಸಾರುವದು ಕಸಬಿನ ಕಾಯಕ ಸಂಧಾನ.

ಮಠಾಧೀಶ ೧ : ವೇಷ ಕಟ್ಟಿಹೊಟ್ಟೆ ಹೊರೆಯುವದನ್ನು ಮೀರಿದ ಉದ್ದೇಶ ನಿಮ್ಮದಿದ್ದಂತೆ ತೋರ್ತದೆ.

ಮಠಾಧೀಶ ೩ : ವೇಷದ ನೆಪದಲ್ಲಿ ಬಸವಣ್ಣನವರ ಮತ್ತು ಅವರ ತಂಡದವರ ಪ್ರಚಾರ ಮಾಡುವದು ನಿಮ್ಮ ಉದ್ದೇಶವಿದ್ದಂತೆ ಕಾಣ್ತದೆ.

ಮಠಾಧೀಶ ೨ : ಹೋಗಲಿ ಬಿಡ್ರಿ, ಅವರ ಕೂಡ ಹರಟಿ ಏನು ಪ್ರಯೋಜನ ?

ಮಠಾಧೀಶ ೧ : ಹುಂ, ಹೋಗ್ರಿ.

ಮಠಾಧೀಶ ೨ : ಏನು ಮಾಡಬೇಕು, ಹೇಗೆ ಮಾಡಬೇಕು, ನಾವು ನೋಡ್ತೇವೆ.

ಮಠಾಧೀಶ ೩ : (ಅವರು ಬೇಗ ಹೋಗದಿರಲು) ಹೋಗ್ರಿ, ಅಂತ ಹೇಳಿದರೆ ತಿಳೀಲಿಲ್ಲ ? (ಗದರಿಸುವನು.)

(ವೇಷದವರು ಹೋಗುವರು.)

(ಮೂವರೂ ಕಟ್ಟೆಯೊಂದರ ಮೇಲೆ ಕೂಡವರು.)

ಮಠಾಧೀಶ ೧ : ಮಂಚಣ್ಣನವರು ಕೊಟ್ಟಿರುವ ನಕ್ಷೆ ತಂದಿರುವಿರಾ ?

ಮಠಾಧೀಶ ೨ : ತಂದಿದ್ದೇನೆ. (ತೆಗೆದು ಬಿಡಿಸಿ ಇಡುವನು. ಎಲ್ಲರೂ ಸುತ್ತ ಕುಳಿತು ಕೊಳ್ಳುವರು.)

ಮಠಾಧೀಶ ೩ : ಇದು ಚಾಲುಕ್ಯ ಸಾಮ್ರಾಜ್ಯ.

ಮಠಾಧೀಶ ೧ : ಮತ್ತಿದು ಚೋಳ ಸಾಮ್ರಾಜ್ಯ.

ಮಠಾಧೀಶ ೨ : ಇಬ್ಬರಿಗೂ ವಂಶಪಾರಂಪರಿಕವಾಗಿ ದ್ವೇಷ.

ಮಠಾಧೀಶ ೩ : ಅಂಥ ವೈರಿಗಳಾದ ಚೋಳರನ್ನೇ ಕಟ್ಟಿಕೊಂಡು ಸೋಮೇಶ್ವರ ರಾಜ ತನ್ನ ತಮ್ಮನಾದ ವಿಕ್ರಮಾದಿತ್ಯನ ಮೇಲೆ ದಂಡೆತ್ತಿ ಹೋದ.

ಮಠಾಧೀಶ ೧ : ಆಗ ವಿಕ್ರಮಾದಿತ್ಯ ಬನವಾಸಿಯನ್ನಾಳುತ್ತಿದ್ದ.

ಮಠಾಧೀಶ ೨ : ಇದು ಬನವಾಸಿ.

ಮಠಾಧೀಶ ೩ : ಆದರೆ ವಿಕ್ರಮಾದಿತ್ಯ ಇಬ್ಬರನ್ನೂ ಹಿಮ್ಮೆಟ್ಟಿದ. ಅಣ್ಣನನ್ನು ಸೋಲಿಸಿ ತಾನೇ ಕಲ್ಯಾಣದ ಗದ್ದುಗೆ ಏರಿ ಚಾಲುಕ್ಯ ಸಮ್ರಾಟನಾದ.

ಮಠಾಧೀಶ ೧ : ಇದು ಕಲ್ಯಾಣ ಇಲ್ಲಿದೆ.

ಮಠಾಧೀಶ ೨ : ಈ ವಿಕ್ರಮಾದಿತ್ಯ ಸುಮಾರು ೫೦ ವರ್ಷ ರಾಜ್ಯ ಮಾಡಿದ.

ಮಠಾಧೀಶ ೩ : ಆದರೆ ಅವನ ಕಾಲಕ್ಕೆ ಹೊಯ್ಸಳ ಬಿಟ್ಟಿದೇವ ಸ್ವಾತಂತ್ರ್ಯ ಸಾರಿದ.

ಮಠಾಧೀಶ ೧ : ಇದು ಹೊಯ್ಸಳರ ರಾಜ್ಯ.

ಮಠಾಧೀಶ-೨ : ಅಲ್ಲಿಗೆ ಚಾಲುಕ್ಯ ರಾಜ್ಯದ ಶಕ್ತಿ ಕುಸಿಯಲಾರಂಭಿಸಿತು.

ಮಠಾಧೀಶ ೩ : ಗಂಗವಾಡಿಯ ಅಡಿಗೈಮಾನ ರಾಜ ಬಂಡೆದ್ದ.

ಮಠಾಧೀಶ ೧ : ಆದರೆ ವಿಕ್ರಮಾದಿತ್ಯ ಅವನ್ನ ಸೋಲಿಸಿ ತಣ್ಣಗೆ ಮಾಡಿದ. ಇದು ಗಂಗವಾಡಿ ಇಲ್ಲಿದೆ.

ಮಠಾಧೀಶ ೨ : ಅಂತೂ ಬಿರುಕುಗಳು ಕಾಣಿಸಿಕೊಂಡವು ಅನ್ನೋದು ಸುಳ್ಳಲ್ಲ.

ಮಠಾಧೀಶ ೩ : ಈ ವಿಕ್ರಮನ ಮಗ ಸೋಮೇಶ್ವರ ಪಟ್ಟಕ್ಕೆ ಬಂದಾಗ ಹೊಯ್ಸಳರಾಜ ಬನವಾಸಿ, ಪಾನಂಗಲ್, ಉಚ್ಚಂಗಿ ಇನು ಗೆದ್ದುಕೊಂಡವ. ಸೋಮೇಶ್ವರ ಅಪ್ಪನಂತೆ ಪರಾಕ್ರಮಿ ಇರಲಿಲ್ಲ.

ಮಠಾಧೀಶ ೧ : ತಡೀರಿ, ಈ ಊರುಗಳು ಎಲ್ಲೆಲ್ಲಿವೆ ನೋಡೋಣ.

ಮಠಾಧೀಶ ೨ : ನೋಡ್ರಿ ? ಇಲ್ಲಿ ಇಲ್ಲಿ ಇವೆ.

ಮಠಾಧೀಶ ೩ : ಅವನ ತರುವಾಯ ಬಂದ ಚಾಲುಕ್ಯರಾಜ ಜಗದೇಕಮಲ್ಲ. ಅವ ಮಾಳವ, ಗುರ್ಜರ, ಚೋಳ ರಾಜರೊಂದಿಗೆ ಕಾದಿದ.

ಮಠಾಧೀಶ ೧ : ಆಮೇಲೆ ಬಂದವ ಮೂರನೇ ತೈಲಪ.

ಮಠಾಧೀಶ ೨ : ಜಗದೇಕನ ತಮ್ಮ. ಈತನ ಆಡಳಿತಕ್ಕೆ ಕರಹಡ, ತರ್ದೇವಾಡಿ ಇವೆಲ್ಲ ಸೇರಿದ್ದವು.

ಮಠಾಧೀಶ ೩ : ಎಲ್ಲಿ ಇವೆ ಅವು ?

ಮಠಾಧೀಶ ೧ : ಇಲ್ಲಿ.

ಮಠಾಧೀಶ ೩ : ಸರಿ.

ಮಠಾಧೀಶ ೨ : ಈ ಕಲ್ಯಾಣದ ಮೂರನೇ ಜಗದೇಕಮಲ್ಲರಾಜನಲ್ಲಿ ಬರ್ಮದೇವ ದಂಡನಾಯಕನಾಗಿದ್ದ. ಅವ ಶೂರನಾಗಿದ್ದ.

ಮಠಾಧೀಶ ೩ : ಆದರೆ ರಾಜಾ ಜಗದೇಕಮಲ್ಲ ಆಕಸ್ಮಿಕ ನಿಧನ ಹೊಂದಿದ್ದರಿಂದ ಮೂರನೇ ತೈಲಪನೇ ಸಮ್ರಾಟನಾದ.

ಮಠಾಧೀಶ ೧ : ಆಗ ಬರ್ಮದೇವ ದಂಡನಾಯಕ ಪದವಿಯನ್ನು ತ್ಯಾಗ ಮಾಡಿದ.

ಮಠಾಧೀಶ ೨ : ನೋಡಿ. ಒಂದು ಕಡೆಯಿಂದ ಚಾಲುಕ್ಯ ಸಾಮ್ರಾಜ್ಯದಲ್ಲಿ ಸಾಮಂತರು ಸ್ವತಂತ್ರರಾಗುವ ಪ್ರವೃತ್ತಿ ಬೆಳೆಯುತ್ತಿತ್ತು.

ಮಠಾಧೀಶ ೩ : ಇನ್ನೊಂದೆಡೆ ವೈರಿಗಳೊಂದಿಗಿನ ಸಂಬಂಧಗಳು ಸುಧಾರಿಸುತ್ತಿದ್ದಿಲ್ಲ.

ಮಠಾಧೀಶ ೧ : ಚಕ್ರವರ್ತಿ ಎನ್ನಿಸಿಕೊಳ್ಳಲು ಕೌಟುಂಬಿಕ ಕಲಹಗಳೂ ಇದ್ದೇ ಇದ್ದವು. ಒಂದು ಕಡೆ ಅಣ್ಣನ ತರುವಾಯ ತಮ್ಮ ಪಟ್ಟಕ್ಕೆ ಬರುವ ಆಸೆ. ಇನ್ನೊಂದು ಕಡೆ ಸತ್ತ ದೊರೆಯ ಮಗ ಪಟ್ಟಕ್ಕೆ ಬರುವ ಹವಣು.

ಮಠಾಧೀಶ ೨ : ಅದು ಚಾಲುಕ್ಯ ಸಾಮ್ರಾಜ್ಯ ಇತಿಹಾಸದಲ್ಲಿ ಮೊದಲಿನಿಂದಲೂ ನಡೀತಾ ಇದ್ದುದ್ದೇ.

ಮಠಾಧೀಶ ೩ : ಹಿಂದೆ ಇದೇ ಜಗಳದಲ್ಲಿ ಇಮ್ಮಡಿ ಪುಲಿಕೇಶಿ ಮಂಗಳೇಶಕಕ್ಕನ ವಿರುದ್ಧ ಬಂಡೆದ್ದು ಅರಸೊತ್ತಿಗೆ ಪಡೆದಿದ್ದ.

ಮಠಾಧೀಶ ೧ : ಇಂಥದರಲ್ಲ ದಂಡನಾಯಕರು, ಆಡಳಿತ ನಿರ್ವಾಹಣಾಧಿಕಾರಿ ವರ್ಗದವರು ಅಸಂತೋಷಗೊಳ್ಳುತ್ತ ಪದತ್ಯಾಗ ಮಾಡುತ್ತ ನಡೆದರೆ ರಾಜ್ಯಕ್ಕೆ ಸ್ಥಿರತೆ ಬಂದೀತೆ ?

ಮಠಾಧೀಶ ೨ : ಖಂಡಿತವಾಗಿ ಸಾಧ್ಯವಿಲ್ಲ.

ಮಠಾಧೀಶ ೩ : ಆಗ ಮಹಾದೇವರಸ -

ಮಠಾಧೀಶ ೧ : ಅಂದರೆ ಕಸಪಯ್ಯ ಅಂತ ಖ್ಯಾತನಾಗಿರುವವನು -

ಮಠಾಧೀಶ ೩ : ದಂಡನಾಯಕನಾದ.

ಮಠಾಧೀಶ ೧ : ಆಗ ಈ ಬಿಜ್ಜಳ ಈ ದಂಡನಾಯಕ ಪದವಿಗೆ, ಆಮೇಲೆ ಸಾಮ್ರಾಜ್ಯ ಲಕ್ಷ್ಮಿಗೆ ಹೊಂಚು ಹಾಕಿ ಎಚ್ಚರದಿಂದ ಹೆಜ್ಜೆ ಇಡುತ್ತಿದ್ದ. ಇವನೂ ತರ್ದೇವಾಡಿ, ಕರಹಡ ಅಥವಾ ಕರಹಾಟಕ, ಬನವಾಸಿ ಮುಂತಾದ ಕಡೆ ಅಧಿಕಾರಿಯಾಗಿದ್ದು ಆಡಳಿತ ಒಳಮರ್ಮವನ್ನು ತಿಳಿದಿದ್ದ, ಅನುಭವ ಪಡೆದಿದ್ದ, ಮೇಲಾಗಿ ಈತ ಆರನೇ ವಿಕ್ರಮಾದಿತ್ಯ ರಾಜನ ಮೊಮ್ಮಗನೂ ಆಗಿದ್ದರಿಂದ ಅಂತಃಪುರ ಸಂಬಂಧವೂ ಇತ್ತು. ತನ್ನ ಕಣ್ಣಮುಂದೇ ಇಬ್ಬರು ಚಾಲುಕ್ಯ ಚಕ್ರವರ್ತಿಗಳು ಗತಿಸಿದ್ದನ್ನು ಈತ ಕಂಡವನಾಗಿದ್ದ.

ಮಠಾಧೀಶ ೨ : ಈತ ದಂಡನಾಯಕನಾದ.

ಮಠಾಧೀಶ ೩ : ಆದರೆ ಬಿಜ್ಜಳ ಮುತ್ಸದ್ಧಿ. ಅದಕ್ಕೆ ಕಸಪಯ್ಯನಿಂದ ದಂಡನಾಯಕತ್ವ ತನಗೆ ಬರುವಂತೆ ಮಾಡಿಕೊಂಡು ತಾನು ದಂಡನಾಯಕನಾದಾಗ ಕಸಪಯ್ಯನನ್ನು ಕೈ ಬಿಡದೆ ಬನವಾಸಿಗೆ ಸಾಮಂತನೆಂದು ಹೋಗುವಂತೆ ಮಾಡಿದ.

ಮಠಾಧೀಶ ೧ : ಕಸಪಯ್ಯ ಬಂಡೆದ್ದಿದ್ದರೆ ಅವನಿಗೆ ರಾಜನದೂ ಸಹಾನುಭೂತಿ ಸಿಗುತ್ತಿದ್ದಿಲ್ಲ. ಪ್ರಜೆಗಳದೂ ಸಹಾನುಭೂತಿ ಸಿಗುತ್ತಿದ್ದಿಲ್ಲ. ಆದರೂ ಕಸಪಯ್ಯನ್ನ ಪೂರ್ತಿ ನಂಬಿ ಇರಲಿಕ್ಕೂ ಸಾಧ್ಯವಿರಲಿಲ್ಲ. ಎಂದರಿತಿದ್ದ ಬಿಜ್ಜಳ ಅವನ ಕೈ ಕೆಳಗಿನ ಅಧಿಕಾರಿಗಳು ತನ್ನ ಕಡೆಯವರು ಇರುವಂತೆ ನೇಮಿಸಿದ. ಅದರಿಂದ ಅಲ್ಲಿ ಬಂಡೆದ್ದರೆ ತನಗೆ ಅದನ್ನೂ ತಿಳಿದುಕೊಳ್ಳಲು ಅನುಕೂಲ ಮಾಡಿಕೊಂಡ.

ಮಠಾಧೀಶ ೨ : ಕಸಪಯ್ಯನ ಕೈಕೆಳಗಿದ್ದ ಬಿಜ್ಜಳನ ಜನರು ಅಂದರೆ -

ಮಠಾಧೀಶ ೩ : ಪೋತರಸ, ಚಟ್ಟರಸ, ಪದ್ಮರಸ, ಸಾವರಸ ಮುಂತಾದವರು.

ಮಠಾಧೀಶ ೧ : ಇನ್ನು ತಾನು ತರ್ದೇವಾಡಿ ಬಿಟ್ಟು ಕಲ್ಯಾಣಕ್ಕೆ ಬಂದಮೇಲೆ ತರ್ದೇವಾಡಿ ತನ್ನ ಅಧೀನದಿಂದ ದೂರಾಗಬಾರದೆಂದು, ಅಲ್ಲಿ ತನ್ನವನಾದ ಮೈಲಾರದೇವನನ್ನು ಸಾಮಂತನಾಗಿ ನೇಮಿಸಿದ. ಆವನ ನೆರವಿಗೆ ರೇಚಣ, ಮಲ್ಲದೇವ, ಬಮ್ಮರಸ ಮುಂತಾದ ಅಧಿಕಾರಿಗಳನ್ನು ನಿಯಮಿಸಿದ.

ಮಠಾಧೀಶ ೨ : ಅದೇ ರೀತಿ ಸುತ್ತಿನ ರಾಜರೊಂದಿಗೆಯೂ ಚೆನ್ನಾಗಿ ಸಂಬಂಧವಿರಿಸಿಕೊಂಡಿದ್ದ.

ಮಠಾಧೀಶ ೩ : ಹೌದು. ಸಿಂದವಂಶದ ಚಾವುಂಡನಿಗೆ ತನ್ನ ಮಗಳನ್ನು ಕೊಟ್ಟು ಶರೀರ ಸಂಬಂಧ ಬೆಳೆಸಿದ್ದ. ನೊಳಂಬವಾಡಿಯ ಪಾಂಡ್ಯ ರಾಜನಾದ ಎರಡನೆಯ ಭೋಜನೊಂದಗೆ ಗೆಳೆತನದಿಂದಿದ್ದ.

ಮಠಾಧೀಶ ೧ : ಆಗ ಬಿಜ್ಜಳನಿಗೆ ರಾಜ್ಯದ ಹಿತಕ್ಕಿಂತ ತಾನು ಮೇಲೇರುವ ವಿಷಯ ಹೆಚ್ಚು ಮಹತ್ವದ್ದಾಗಿ ಕಂಡಿತ್ತು.

ಮಠಾಧೀಶ ೨ : ಅದಕ್ಕೆಂದೇ ಕಾಕತೀಯ ರಾಜ ಎರಡನೇಯ ಪ್ರೋಲನು ಉತ್ತರದಿಂದ ಏರಿ ಬಂದಾಗ, ಪೂರ್ವದಲ್ಲಿ ಭೀಮನಯ್ಯನೆಂಬ ಸಾಮಂತ ಬಂಡೆದ್ದಾಗ ಈತ ನಿರ್ಲಕ್ಷ ಮಾಡಿದ.

ಮಠಾಧೀಶ ೩ : ಆಗ ರಾಜ್ಯದ ಚಿಂತೆ ಇದ್ದಿದ್ದರೆ ಬಿಜ್ಜಳ ಸುಮ್ಮನೆ ಕೂಡಿತ್ತಿದ್ದಿಲ್ಲ.

ಮಠಾಧೀಶ ೧ : ಬಿಜ್ಜಳನೇನೂ ಕಡಿಮೆ ಪರಾಕ್ರಮಿಯಾಗಿರಲಿಲ್ಲ.

ಮಠಾಧೀಶ ೨ : ಆದರೂ ಆಗ ಈ ಎರಡೂ ಆಕ್ರಮಣಗಳ ಕಾಲಕ್ಕೆ ಬಿಜ್ಜಳ ಉದಾಸೀನನಾಗಿ ಉಳಿದ. ರಾಜ್ಯದ ಶಕ್ತಿ ಕುಗ್ಗಿದರೆ ರಾಜನು ಇನ್ನಷ್ಟು ತನ್ನನ್ನು ಅವಲಂಬಿಸುವಂತಾದೀತೆಂಬ ಸ್ವಾರ್ಥದ ಆಕಾಂಕ್ಷೆ ಬಿಜ್ಜಳನದು.

ಮಠಾಧೀಶ ೩ : ಆಗ ರಾಜಾ ತೈಲಪ ತಾನೇ ಈ ಆಕ್ರಮಣಗಳನ್ನು ಎದುರಿಸಲು ಮುಂದಾದ. ಪ್ರೋಲನಿಗೆ ಸೆರೆಸಿಕ್ಕ. ಪ್ರೋಲ ರಾಜನೇ ತೈಲಪನನ್ನು ಉದಾರನಾಗಿ ಬಿಟ್ಟು ಬಿಟ್ಟ. ಅಪಮಾನಗೊಂಡ ತೈಲಪ ಮರಳಿ ಕಲ್ಯಾಣಕ್ಕೆ ಬರದೆ ಅಣ್ಣಿಗೇರಿಯಲ್ಲಿ ನಿಂತು ಬಿಟ್ಟ. ಈ ಸಂಧಿ ಸಾಧಿಸಿ ಬಿಜ್ಜಳ ತಾನೇ ಕಲ್ಯಾಣದ ಚಕ್ರವರ್ತಿ ಎಂದು ಸಾರಿದ. ಆಗ ತೈಲಪ ಹಲ್ಲು ಕಿತ್ತ ಹುಲಿಯಂತಾಗಿದ್ದ. ಪ್ರಜೆಗಳು ಅವನ ಪಕ್ಷವಹಿಸಿ ವಿರೋಧಿಸುವಷ್ಟು ಆತ ಜನಪ್ರಿಯನೂ ಆಗಿರಲಿಲ್ಲ.

ಮಠಾಧೀಶ ೧ : ಇದು ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ಕಬಳಿಸಿ ಕಲಚೂರಿ ಮನೆತನದ ಆಳ್ವಿಕೆಯ ಇತಿಹಾಸವನ್ನು ಪ್ರಾರಂಭಿಸಿದ ಕತೆ.

ಮಠಾಧೀಶ ೨ : ಈ ರೀತಿ ಸಂಚಿನಿಂದ ಸಂಧಿಸಾಧಿಸಿದವನಿಗೆ ತನ್ನನ್ನು ಯಾರಾದರೂ ಹೀಗೇ ಎತ್ತಿ ಹಾಕಿಯಾರೆಂದು ಭಯ ಇದ್ದೇ ಇರ್ತದೆ. ಆಗ ಜನಾನುರಾಗ ಗಳಿಸುವದು ಬಲು ಮುಖ್ಯ ಕೆಲಸ. ಅದಿದ್ದರೆ ತನಗೆ ಅನ್ಯಾಯವಾದಾಗ ತನ್ನ ಪರವಾಗಿ ದನಿ ಏಳುವ ಸಾಧ್ಯತೆ ಇರ್ತದೆ.

ಮಠಾಧೀಶ ೩ : ಈ ಜನಾನುರಾಗ ವರ್ಧನೆಗೆ ಬಸವಣ್ಣ ಯೋಗ್ಯ ಎಂದು ಎಣಿಸಿ ಬಿಜ್ಜಳ ಅವನನ್ನು ದಂಡನಾಯಕನನ್ನಾಗಿ ನೇಮಿಸಿದ.

ಮಠಾಧೀಶ ೧ : ಮೇಲಾಗಿ ತರ್ದೇವಾಡಿಯ ಸಾಮಂತ ಮೈಲಾರ, ಬನವಾಸಿಯ ಸಾಮಂತ ಕಸಪಯ್ಯ, ಕರಹಡದ ಸಾಮಂತ ಭೋಜ - ಈ ಮೂವರಲ್ಲಿ ಯಾರನ್ನೇ ದಂಡನಾಯಕನೆಂದು ನೇಮಿಸಿದರೆ ಅವರವರ ನಡುವೆ ಅಂತಃಕಲಹ ಪ್ರಾರಂಭವಾಗುವುದೆಂದು ಬಿಜ್ಜಳ ಎಣಿಸಿದ.

ಮಠಾಧೀಶ ೨ : ಆದರೆ ಬಿಜ್ಜಳನ ಪರವಾದ ಜನಾನುರಾಗ. ಈ ಬಸವನಿಂದ ಸಿದ್ಧವಾದೀತೆ ?

ಮಠಾಧೀಶ ೩ : ಅದನ್ನು ಕಾಲವೇ ನಿರ್ಣಯಿಸಬೇಕು.

ಮಠಾಧೀಶ ೧ : ಜನರೇನೊ ಬಸವನನ್ನು ಪ್ರೀತಿಸತೊಡಿದ್ದಾರೆ. ಇದರಿಂದ ರಾಜನಿಗೆ ತನ್ನ ಯೋಜನೆಯಲ್ಲಿ ಭರವಸೆ ಕಾಣತೊಡಗಿದೆ.

ಮಠಾಧೀಶ ೨ : ಆದರೆ ಅಸಂತುಷ್ಟರು ಬಸವನ ವಿರುದ್ಧ ಅಪಪ್ರಚಾರ ಹೂಡಿದ್ದೂ ಸುಳ್ಳಲ್ಲ. ಅವರ ಆಕ್ರೋಶಕ್ಕು ನಿತ್ಯ ಹೊಸ ಹೊಸ ಹೂರಣ ಸಿಕ್ಕೇ ಸಿಗುತ್ತ ಇದೆ.

ಮಠಾಧೀಶ ೩ : ಬಸವಣ್ಣ ಗೆಲ್ಲುವುದು ಸೋಲುವುದು ಮುಖ್ಯವಲ್ಲ. ಬಿಜ್ಜಳನ ಹವಣು ಫಲಿಸುವುದೊ ಇಲ್ಲವೋ ನೋಡುವುದೇ ಮುಖ್ಯ ವಿಷಯ.

ಮಠಾಧೀಶ ೧ : ಈ ಪಗಡೇ ಆಟದಲ್ಲಿ ಬಿಜ್ಜಳ ಯಾವ ಕಾಲಕ್ಕೆ ಯಾವ ದಾಳ ಆಡುವನೋ ನೋಡಬೇಕು.

ಮಠಾಧೀಶ ೨ : ಮನೆಯ ಒಳಜಗಳವೂ ಇಲ್ಲದಿಲ್ಲ.

ಮಠಾಧೀಶ ೩ : ಬಿಜ್ಜಳನಿಗೆ ಬಸವನ ಕಾರ್ಯಗಳೆಲ್ಲ ತೃಪ್ತಿಯನ್ನೇನೂ ತಂದಿಲ್ಲ. ಆದರೆ ಈಗಲೇ ಬಸವನನ್ನು ಬಿಡಲೂ ಅವನಿಗೆ ಧೈರ್ಯವಿಲ್ಲ. ಇತ್ತ ತನ್ನ ರಾಜಕೀಯ ವಲಯದವರನ್ನೂ ಹೊರಹಾಕಲು ಮನಸ್ಸಿಲ್ಲ.

ಮಠಾಧೀಶ ೧ : ಅನುಭವಿಗಳನ್ನು ಬಿಟ್ಟರೆ ಆಡಳಿತ ನಡೀಬೇಕಲ್ಲ.

ಮಠಾಧೀಶ ೨ : ಮಗ ಸೋವಿದೇವನನ್ನು ತನ್ನ ಯುವರಾಜನಾಗುವಂತೆ ಸಿದ್ಧ ಪಡಿಸುತ್ತಿದ್ದಾನಂತೆ.

ಮಠಾಧೀಶ ೩ : ನಾಲ್ಕು ಮಂದಿ ಮಕ್ಕಳು, ತಮ್ಮ ; ಹೀಗೆ ಅಲ್ಲಿಯೂ ಅನೇಕರು ಆಸೆ ಮಾಡಿಕೊಂಡವರಿದ್ದಾರೆ. ಸಪ್ತಾಶ್ವರಥವನ್ನು ಕುಂಟ ಸಾರಥಿಯ ಸಹಾಯದಿಂದ ಸೂರ್ಯದೇವನು ನಡೆಸಲು ಸಮರ್ಥನಾಗಿರುವಂತೆ ಈಗ ಹತ್ತೆಡೆ ಹತ್ತು ಶಕ್ತಿಗಳ ನಡುವೆ ಜಗ್ಗಾಟಕ್ಕೆ ಸಿಕ್ಕು ನುಗ್ಗಾಗುತ್ತಿರುವ ರಾಜ್ಯಲಕ್ಷ್ಮಿಯನ್ನು,

ಏಕಾಧಿಪತ್ಯವನ್ನು ಬಿಜ್ಜಳ ಹೇಗೆ ಸ್ಥಿರಗೊಳಿಸುವನೋ ನೋಡಬೇಕಾಗಿದೆ. ಸಮ್ರಾಟನೆಂದು ಘೋಷಿಸುವುದಕ್ಕಿಂತ ಸಾಮ್ರಾಜ್ಯವನ್ನು ಕಾಪಾಡಿಕೊಂಡು ಹೋಗೋದು ಬಿಜ್ಜಳನ ಮುಂದೆ ದೊಡ್ಡ ಪ್ರಶ್ನೆಯಾಗಿದೆ.

ಮಠಾಧೀಶ ೧ : ಓಲಗದ ಸಮಯವಾಯಿತಲ್ಲ ?

ಮಠಾಧೀಶ ೨ : ಹೌದು.

ಮಠಾಧೀಶ ೩ : ನಡೆಯಿರಿ.

(ಹೊರಡುವರು)

(ಕತ್ತಲೆ)

(ಮರೆಯಿಂದ)

ವಿಧ ವಿಧ ಬಹುರೂಪ । ಧರೀಸೂತ ಚರಿಸೂವ ॥
ಬಹುರೂಪಿ ಚೌಡಯ್ಯ । ಬಂದಿಹನು ನೋಡಯ್ಯ ॥

(ಮಧ್ಯಂತರ)

# ಅಂಕ - ೪

(ಮರೆಯಿಂದ)

ಇಷ್ಟಲಿಂಗವಂತರಾಗಿ । ಕಷ್ಟವಿಲ್ಲವೆಂದು ಬಗೆದು ॥
ತುಷ್ಟರಾಗಿ ಹೃಷ್ಟರಾಗಿ । ಅಷ್ಟಾವರಣ ಷಟ್ಸ್ಥಲವಡೆದು ॥
ಬಯಲು ದಾರಿ ತೋರಿಸಿದ ॥

ಶರಣರ ಮಂಟಪ
ಅನುಭವ ಮಂಟಪ

(ಬೆಳಕು ಚೆಲ್ಲಿದಾಗ ಕಕ್ಕಯ್ಯನ ಮನೆ)

(ಕಕ್ಕಯ್ಯ ರಾಪಾದಿಂದ ಚರ್ಮವನ್ನು ಛಿಲಾಯಿಸುತ್ತಿದ್ದಾನೆ. ಪಕ್ಕದಲ್ಲಿ ಮಡಿಕೆ ಹಾಕಿಟ್ಟ ಚರ್ಮದ ರಾಶಿ ಇದೆ)

ಕಕ್ಕಯ್ಯ : ಸುಳ್ಳು.

ಸಂಬೋಳಿ : ಬೇನೆ ಬೇಸರಿಕೆ, ಕಷ್ಟ ದಾರಿದ್ರ್ಯ ಒದಗಿದಾಗೆಲ್ಲ ನಾವು ಈ ದೇವರಿಗೆ ಬೇಡಿಕೊಳ್ಳೋದು ತಪ್ಪೆ ?

ಕಕ್ಕಯ್ಯ : ತಪ್ಪು.

ಸಂಬೋಳಿ : ಹಾಗಾದರೆ ನಮ್ಮ ಕುಲದ ಹಿಂದಿನ ಹಿರಿಯರೆಲ್ಲ ತಿಳಿಗೇಡಿಗಳೆ ?

ಕಕ್ಕಯ್ಯ : ಅವರ ತಿಳಿವಳಿಕೆ ಈಗಿನವರಷ್ಟು ಮುಂದುವರಿದಿಲ್ಲ. ಅಲ್ಲಲ್ಲಿ ದೇವರೆಂದು ಕಲ್ಲುಗಳನ್ನಿಟ್ಟು, ಕಲ್ಲುಗಳನ್ನೇ ದೈವವೆಂದು ಭಾವಿಸಿ ಹರಕೆ ಹೊತ್ತು ಬಲಿ ತೆತ್ತು ಬೇಡಿಕೊಂಡು ಮನಸ್ಸಿನ ಭಾರ ಕಡಿಮೆ ಮಾಡಿಕೋತಿದ್ದರು.

ಸಂಬೋಳಿ : ನನಗ ನಿನ್ನ ಮಾತೂ ಸುಳ್ಳು ಅನಸೂದಿಲ್ಲ, ಹೀರ್‍ಯಾರ ನಂಬ್ಕೀನೂ ಬಿಡಾಕ ಆಗೂದಿಲ್ಲ.

ಕಕ್ಕಯ್ಯ : ಈಗ ನಾ ಛಿಲಾಯಿಸ್ತಿರ್ರೋ ಚರ್ಮ ನೋಡ್ತೀಯಲ್ಲ ? ಇದರ ಹಂಗ ನಿನ್ನ ಮನಸ ಐತಿ, ಇದನ್ನ ಹಿಂಗs ಒಯ್ದು ಮೆಟ್ಟೋ ಮುಟ್ಟೇನೊ ಮಾಡಿದರ ಹ್ಯಾಂಗಾದೀತು ?

ಸಂಬೋಳಿ : ಸೀಮಿ ಸೀಮಿಗೆ ಅಷ್ಟಷ್ಟ ದೇವರಾ ಪೂಜಿ ಮಾಡ್ಕೊಂತ ಹೊಂಟೇವಿ. ಅದೂ ಅಷ್ಟೆ ಸರೀ ಇರಲಿಕ್ಕಿಲ್ಲ ಅನೂದು ಏನ ಸುಳ್ಳಲ್ಲ.

ಕಕ್ಕಯ್ಯ : ಅದಕ ಬಸವಣ್ಣೋರ ಹೇಳ್ತಾರ. ಇವು ಎಷ್ಟ ದಟ್ಟವಾಗಿ ತುಂಬಿಕೊಂಡಾವ ಅಂದರ ಕಾಲಿಡಾಕೂ ಜಾಗಾ ಉಳಿದಿಲ್ಲ ಅಂತಾರ।

ಸಂಬೋಳಿ : ಅದನ್ನ ನೆನದರ ನಗೀನೂ ಬರತತಿ. ಆದರೂ ಹಿರ್ಯಾರ ನಂಬ್ಕಿ ಬಿಡಾಕೂ ಮನಸಿಲ್ಲ.

ಕಕ್ಕಯ್ಯ : ಹಿಂಗs ವಿಚಾರ ಮಾಡಕೊಂತ ಇರು. ಒಮದ ದಿನ ಆ ಧೈರ್ಯಾ ಬರತತಿ. (ವೆಂಕಣ್ಣನೆಂಬ ಬ್ರಾಹ್ಮಣ ತನ್ನಷ್ಟಕ್ಕೆ ಹಾಡುತ್ತ ಬರುವನು.)

ವೆಂಕಣ್ಣ : ಕಂತು ಪಿತನ
ನಂತ ಶಯನನೆ
ನನ್ನಂತರದಲಿ
ನಿಂತು ನಡೆಸೆಲೊ । ನೀನನ್ನ ॥
ಸಂತಸದಲಿ
ನಿನ್ನ ಗುಣವನು
ಹಾಡುವೆ ಹರಿ
ಸಂತವಿಡುತಲಿ । ಕಾಯಲೊ ॥

ಕಕ್ಕಯ್ಯ : ಆ ಹಾರೂಗ ಇಲ್ಲಿ ಕೂಡಲ ಸಂಗಮನ ಬಿಟ್ಟು ಬ್ಯಾರೆ ದೇವರ ಹಾಡ ಹಾಡಬಾರದು ಅಂತ ಹೇಳು.

ಸಂಬೋಳಿ : ಅವರು ದೊಡ್ಡ ಕುಲದವರು, ಅವರಿಗೆ ನಾ ಹ್ಯಾಂಗ ಹೇಳಲಿ ?

ಕಕ್ಕಯ್ಯ : ನೀ ಬ್ಯಾಡಾ, ನಾನs ಹೇಳ್ತೀನಿ ತಡೀ. ರೀ ಹಾರೂವಣ್ಣಾ, ಇದು ಕಕ್ಕಯ್ಯನ ಮನಿ. ಇಲ್ಲಿ ಕೂಡಲ ಸಂಗಮನ ಧ್ಯಾನಾ ಮಾಡ್ತೀನಿ. ನನ್ನ ಕಿವ್ಯಾಗ ನಿಮ್ಮ ಬ್ಯಾರೆ ದೇವರ ಹಾಡ ತುಂಬ ಬ್ಯಾಡರಿ.

ವೆಂಕಣ್ಣ : ನೀ ನೋಡಿದರ ಡೋಹರ, ನಾ ಬ್ರಾಹ್ಮಣ, ನನಗ ಹಂಗ ಹಿಂಗ ಅಂತ ಅಪ್ಪಣೀ ಮಾಡ್ತೀ ? ಎಷ್ಟ ಸೊಕ್ಕು ಇರಬೇಕ ನಿನಗ ? ಮೂರು ಲೋಕದ ಗಂಡ, ಶ್ರೀ ಕೃಷ್ಣ ಪರಮಾತ್ಮನ ಸ್ತುತಿಸಿದರ

ನಿನಗ ಸಹನ ಆಗವಲ್ಲದು. ಏನೋ ಪೂರ್ವಜನ್ಮದ ಪುಣ್ಯ ಅಂತ ನಿನ್ನ ಕಿವೀಮ್ಯಾಗ ದೇವರ ನಾಮಾ ಬಿತ್ತು. ನಿನ್ನ ಪೂರ್ವಜನ್ಮದ ಪಾಪದ ರಾಶೀಯೊಳಗಿನ ಒಂದು ಮೂಲಿ ಕಡಿಮಿ ಆಯ್ತು ಅಂತ ತಿಳಿ. ಅದನ್ನ ಬಿಟ್ಟು ನನಗ ಹಾಡಬ್ಯಾಡ ಅಂತೀದಿ ?

ಕಕ್ಕಯ್ಯ : ನನ್ನ ಕಿವ್ಯಾಗ ನಿಮ್ಮ ದೇವರ ನಾಮ ಬಿದ್ದರ ಇಷ್ಟೊತ್ತು ನಾ ಹಾಡಿ ಗಳಿಸಿದ ಭಕ್ತಿ ಕಡಿಮೆ ಆಗತತಿ. ಯಾಕಂದರ ಕೂಡಲಸಂಗಮನ ಬಿಟ್ಟ ಬ್ಯಾರೆ ದೇವರ ಸ್ತುತಿ ಅಂದರ ಗರತಿಗೆ ಬ್ಯಾರೆ ಗಂಡನ್ನ ಸೇವಾ ಮಾಡಿಧಾಂಗ ನನ್ನ ಪಾಲಿಗೆ ಪಾಪ ! ಇಷ್ಟ ತಿಳಕೋರಿ, ಮತ್ತ ಮೂಕಾಟಲೆ ಹೋಗ್ರಿ.

ವೆಂಕಣ್ಣ : ಈ ಬಸವಣ್ಣ ನಿಮನ್ನೆಲ್ಲ ಏರಿಸಿ ಬಿಟ್ಟಾನ ; ಸೊಕ್ಕಿಗಿ ಬಂದೀರಿ.

ಕಕ್ಕಯ್ಯ : ಏಯ್ ಹಾರೂವಣ್ಣಾ, ನಮ್ಮ ಬಸವಣ್ಣಗ ಏನಾರ ಅನಬ್ಯಾಡ.

ವೆಂಕಣ್ಣ : ಏನು ಮಾಡ್ತೀ ?

ಕಕ್ಕಯ್ಯ : ಏನ ಮಾಡ್ತೀ ? ನೋಡಬೇಕೇನು ?

ವೆಂಕಣ್ಣ : ಹೊಡೀ ಬಡೀ ಅಂತಾನೂ ಹೇಳ್ಯಾನೇನ ಆವ ಬಸವಣ್ಣ ? ಮಂತ್ರಿ ಆದರೇನಾತು ? ಹಿಂಗ ಬೋಧನಾ ಮಾಡ್ತಾನ ?

ಕಕ್ಕಯ್ಯ : ಹಾರೂವಣ್ಣಾ, ಇನಾ ಅಣ್ಣಾ ಅಂತೀನಿ, ಅಷ್ಟರಾಗ ತಿಳಕೊ. ನಿನ್ನ ಮಾನಾ ನೀನಽ ಕಳಕೊಳಾಕ ಅವಸರ ಮಾಡಬ್ಯಾಡ.

ವೆಂಕಣ್ಣ : ಮೆಟ್ಟ ಹರದಿದ್ದವಂತ ಹೊಲಕೊಳ್ಳಾಕ ಸಮಗಾರ ಓಣಿಗೆ ಹೊಂಟರ ಇಲ್ಲಿ ಈ ದರಿದ್ರನ ದರ್ಪ. ಕಲಿಯುಗ ಕಲಿಯುಗ ಅಂತಾರ ಅದ ಇದಽ.

ಕಕ್ಕಯ್ಯ : ಸಮಗಾರು ಮೆಟ್ಟ ಬೇಕು. ಸಮಗಾರ ಬ್ಯಾಡ. ಮೆಟ್ಟಬೇಕು. ನಾವು ಬ್ಯಾಡ, ನಿಮ್ಮ ದೇವರ ನಿಮಗ ಇದನ್ನಽ ಕಲಸ್ಯಾನ ?

ವೆಂಕಣ್ಣ : ನಮ್ಮ ದೇವರ್‍ನ ಹೀಯಾಳ್ಸಿ ಮಾತಾಡ್ತೀ ಬಾಯಾಗ ಹುಳ ಬಿದ್ದಾವಲೆ ಉದ್ಧಟಾ !

(ಕಕ್ಕಯ್ಯ ಏಳುವನು. ಸಿಟ್ಟು ತುಂಬುತ್ತಿದೆ.)

ಸಂಬೋಳಿ : (ಕಕ್ಕಯ್ಯನನ್ನು ತಡೆಯಲು ಯತ್ನಿಸುತ್ತ) ಕಾಕಾ, ಸಿಟ್ಟ ತಡೀ ಕಾಕಾ. ಅವರು ಹಾರೋರು.

ಕಕ್ಕಯ್ಯ : ದುಡದ ತಿನ್ನಾವಗ ಯಾರದೇನ ಹಂಗು ಬಿಡಲಾ. (ಮುಂದೆ ಬರುವನು. ವೆಂಕಣ್ಣನಿಗೆ) ಹೋಗ್ತೀ ಇಲ್ಲಿ ನನ್ನ ಕಣ್ಣ ಮುಂದಿಂದ?

(ವೆಂಕಣ್ಣ ಸಿಟ್ಟಿನಿಂದ ಕಂಪಿಸುತ್ತಿದ್ದಾನೆ. ಜುಟ್ಟು ಬಿಚ್ಚಿ ಕಟ್ಟುವನು. ಸಂಬೋಳಿಯವನು ಗಾಬರಿಯಾಗಿ ಏನು ಮಾಡಬೇಕೊ ತೋಚದೆ ಕೈಗಳನ್ನು ನಿರರ್ಥಕವಾಗಿ ಬೀಸುತ್ತಿದ್ದಾನೆ)

ಕಕ್ಕಯ್ಯ : ಹೂಂ. ತಗೀ ಕಾಲು.

ವೆಂಕಣ್ಣ : (ಅವನ ಆಜ್ಞೆ ಪಾಲಿಸಲೊಪ್ಪದೆ, ವಿರೋಧಿಸಲು ಉಪಾಯ ತೋಚದೆ) ವಿಷ್ಣವೇ ನಮಃ ವಿಷ್ಣವೇ ನಮಃ ವಿಷ್ಣವೇ ನಮಃ...

(ಎಂದು ಜೋರಾಗಿ ಅನ್ನ ತೊಡಗುವನು, ಕಕ್ಕಯ್ಯ ಅವನ ಭಾವನೆಯಲ್ಲಿ ವ್ಯಕ್ತವಾಗುವ ವಿರೋಧವನ್ನು ತಿಳಿದುಕೊಂಡು ಅವನನ್ನು ಮುಟ್ಟಿ, ಅವನ ಬಾಯಿ ಹಿಡಿದು ಎಳೆದು ದಬ್ಬಲಾರಂಭಿಸುವನು. ಒಳಗಿನಿಂದ ಹೆಂಡತಿ ಬಂದು ಗಾಬರಿಯಾಗಿ ನಿಲ್ಲುವಳು.)

ಹೆಂಡತಿ : ಬರ್ರೀ ಯಾರಾರ ಬರ್ರಿ, ಇವರ್ನ ತಡೀರಿ (ಚೀರುವಳು.)
(ಬಸವಣ್ಣನ ಪ್ರವೇಶ.)

ಹೆಂಡತಿ : (ಬಸವಣ್ಣನಿಗೆ) ಯಪ್ಪಾ ದ್ಯಾವರ, ನನ್ನ ಮಸ್ಯಾವರ್ನ ತಡೀರಿ.
(ವಂದಿಸುವಳು.) ಯಾರೂವಣ್ಣಾನ ಹೊಡೀತಾರರಿ ಇನ್ನ ಅವರು.

ಬಸವಣ್ಣ : ಕಕ್ಕಯ್ಯನೋರೆ, (ಬಿಡದಿರಲು) ಕಕ್ಕಯ್ಯ, (ಇನ್ನು ಬಿಡನು.) ಕಕ್ಕಾ, (ಇನ್ನೂ ಬಿಡದಿರಲು) ಡೋಹರನೇ...
(ಈಗ ಕಕ್ಕಯ್ಯ ವೆಂಕಣ್ಣನನ್ನ ಬಿಡುವನು.)

ವೆಂಕಣ್ಣ : ಚರ್ಮ ಸುಲ್ಯೋ ಹೊಲಸ ಕೈಲೆ ಬಾಯ ಹಿಡ್ದ. ಥೂ ಥೂ ಅನಾಚಾರ. ಅನಾಚಾರ. ನೀರು ನೀರು. ಬಾಯಿ ಮುಕ್ಕಳಿಸಲಿಕ್ಕೆ ನೀರು. ಇಲ್ಲೆಲ್ಲಿ ನೀರು ? ಥೂ ಥೂ (ಎನ್ನುತ್ತ ಚಡಪಡಿಸುತ್ತ ಹೋಗುವನು.)

ಬಸವಣ್ಣ : ಕಕ್ಕಯ್ಯನೋರೆ, ಏನಿದು ?

ಕಕ್ಕಯ್ಯ : ಅಂತೂ ಕಡೀಕ್ಕ ನೀವೂ ನಿಮ್ಮ ಬಣ್ಣಾ ತೋರಿಸದs ಬಿಡಲಿಲ್ಲ.

ಬಸವ : ಏನು ಬಣ್ಣ ?

ಕಕ್ಕಯ್ಯ : ಡೋಹಾರನೇ ಅಂತಾರ ತೀಡಿದಿರಲ್ಲ !

ಬಸವ : ಅದು ಬೈಗುಳಲ್ಲ. ಅದನ್ನು ಅವಮಾನವೆಂದು ತಿಳಿಯಬಾರದು. ತಿಳಿಯದಿದ್ದರೆ ನಿಮ್ಮಲ್ಲಿ ಕೀಳುತನದ ಅರಿವು ಮೂಡಲಾರದು. ಆದರ ನೀವು ಈ ವೆಂಕಣ್ಣಚಾರಿನ್ನ ಹೊಡೀಲಿಕ್ಕೆ ಹೊರಟದ್ದು ಯಾಕೆ?

| | | |
|---|---|---|
| ಕಕ್ಕಯ್ಯ | : | ಒಳ್ಳೇ ಮಾತೀಲೇ ಹೇಳಿದೆ. ಅವ ಕೇಳಲಿಲ್ಲ. |
| ಬಸವ | : | ಏನ ಹೇಳಿದ್ರಿ ? |
| ಕಕ್ಕಯ್ಯ | : | ರೀ ಹಾರೂವಣ್ಣ, ಅಣ್ಣಾ ಅಂದೆ, ಮರ್ಯಾದೆ ಕೊಟ್ಟೆ, ಅಣ್ಣಾ ಅಂತ ಕರದೆ, ಆದರೂ ಆತ ಕೇಳಲಿಲ್ಲ. |
| ಬಸವ | : | ಏನು ಹೇಳಿದಿರಿ ? |
| ಕಕ್ಕಯ್ಯ | : | ಅಂವಾ ಮಾತ್ರ ನನ್ನ, 'ಬಸವಣ್ಣ ನಿಮ್ಮನ್ನ ಏರಿಸಿ ಬಿಟ್ಟಾನ, ಸೊಕ್ಕಿಗಿ ಬಂದೀರಿ' ಅಂದ. |
| ಬಸವ | : | ಅವ ನನ್ನ ಬೈಲಿ, ಆದರ ಅವನ್ನ ಹೊಡೀಲಿಕ್ಕೇಳುವಂಥಾದ್ದು ಅವ ನಿಮಗೇನು ಅಂದ ? |
| ಕಕ್ಕಯ್ಯ | : | 'ನೀ ನೋಡಿದರ ಡೋಹರ ; ನಾ ಬ್ರಾಹ್ಮಣ' ಅಂತಂದ. |
| ಬಸವ | : | ನಿಮಗ ಅಷ್ಟಕ್ಕs ಸಿಟ್ಟ ಬಂತು ? |
| ಕಕ್ಕಯ್ಯ | : | ಸಿಟ್ಟ ಮೊದಲs ಬಂದಿತ್ತು. |
| ಬಸವ | : | ಅದು ಯಾತಕ್ಕಾಗಿ ? |
| ಕಕ್ಕಯ್ಯ | : | ನೋಡಪ್ಪಾ, ಇದು ಶಿವಶರಣರ ಮನಿ. ಇಲ್ಲಿ ಕೂಡಲ ಸಂಗಮನ ಧ್ಯಾನಾ ಮಾಡ್ತೀನಿ. ನನ್ನ ಕಿವ್ಯಾಗ ನಿಮ್ಮ ಬ್ಯಾರೆ ದೇವರ ಹಾಡ ತುಂಬಬ್ಯಾಡ್ರಿ. ನಿಮ್ಮ ಮನೀಗಿ ಹೋಗಿ ಹಾಡ್ರಿ ಅಂದೆ. |
| ಬಸವ | : | ಯಾವ ದೇವರ ಹಾಡ ಹೇಳತಿದ್ದರವರು ? |
| ಕಕ್ಕಯ್ಯ | : | ವಿಷ್ಣು ! |
| ಬಸವ | : | ಅದು ನಿಮಗ ಸಹನ ಆಗಲಿಲ್ಲ ? |
| ಕಕ್ಕಯ್ಯ | : | ಹ್ಯಾಂಗಾಗಬೇಕು ? ನೀವs ಹೇಳಿಲ್ಲs ? |
| ಬಸವ | : | ಏನಂತ ? |
| ಕಕ್ಕಯ್ಯ | : | 'ಮಾರಿ ಮಸಣ ದೈವ ದೈವ ಎಂದು' ಅನ್ನೂ ವಚನದಾಗ ? ಪತಿವ್ರತಿಗೆ ಗಂಡನೊಬ್ಬ, ಮತ್ತೊಂದಕ್ಕೆಂದರೆ ಕಿವಿಮೂಗ ಕೊಯ್ವನು' ಅಂತ. |
| ಬಸವ | : | ನಾನು ಹಾಗೆ ಹೇಳಿಲ್ಲ. |
| ಕಕ್ಕಯ್ಯ | : | ಈಗ ನಿಮ್ಮ ಮಾತ ನೀವ ತಿರುವಬ್ಯಾಡ್ರಿ. |
| ಬಸವ | : | ಕೇಳ್ರಲ್ಲೆ. |

| | | |
|---|---|---|
| ಕಕ್ಕಯ್ಯ | : | ಹೇಳ್ರಿ. |
| ಬಸವ | : | ನೀವು ಲೋಕಕ್ಕೆಲ್ಲ ಮೂಲಾಧಾರ ಪರಶಿವನನ್ನು ಕೂಡಲಸಂಗಮ, ಅಭಿನವ ಮಲ್ಲಿಕಾರ್ಜುನ ಅಂತ ಪೂಜಿಸ್ತೀರಿ. ಅವರು ಅವನ್ನೇ ವಿಷ್ಣು ಅಂದರು. |
| ಕಕ್ಕಯ್ಯ | : | ಶಿವ ಬ್ಯಾರೆ, ವಿಷ್ಣು ಬ್ಯಾರೆ. |
| ಬಸವ | : | ಆದರೆ ಶಿವನ್ನ ಸ್ಮರಿಸಿ ನಾವು ನೀವು ಮಾಡೋದು ಭಕ್ತೀನೇ. ವಿಷ್ಣೂನ್ನ ಸ್ಮರಿಸಿ ಅವರು ಮಾಡೋದೂ ಭಕ್ತೀನೇ. ಈ ಭಕ್ತಿ ನಮ್ಮ ಮನಸ್ಸನ್ನು ಹಸನ ಮಾಡಿ ಆ ವಿಶ್ವಾತ್ಮಕ ಶಕ್ತೀನ್ನ ನಾವು ಮರೀದs ಇರೂ ಹಂಗ ಮಾಡತದೆ. ಹೌದಲ್ಲೊ ? |
| ಕಕ್ಕಯ್ಯ | : | ಹಂಗಾರ 'ಮಾರಿ ಮಸಣಿ' ಹಿಂತಾ ದೇವರನ್ಯಾಕ ಬಿಡಬೇಕು ? |
| ಬಸವ | : | ಮಾರಿ ಎಂದಾಗಲೂ ಯಾರಿಗಾದರೂ ಪರಮಾತ್ಮ ಶಕ್ತಿಯ ಅರಿವಾಗುತ್ತಿದ್ದರೆ ಅದೂ ಸರಿಯೆ, ಮಸಣಿ ಎಂದಾಗಲೂ ಅದೇ ಭಾವ ಮೂಡುತ್ತಿದ್ದರೆ ಅದೂ ಸರಿಯೆ. ಆದರೆ ಹಾಗಾಗುವುದಿಲ್ಲ. ಮಾರಿ ಮಸಣಿಯರನ್ನು ಇಂತಿಷ್ಟು ಜಾಗದ ಮ್ಯಾಲ ಗುಪ್ತವಾಗಿ ಅಧಿಕಾರ ನಡಿಸೊ ಶಕ್ತಿ ಅಂತ ನಾವು ತಿಳೀತೀವಿ. ಅದು ಅಲ್ಪ ವಿಚಾರ. ನಮ್ಮ ವಿಚಾರ ವಿಸ್ತಾರವಾಗಬೇಕಾದರ ಇವನ್ನ ಮೀರಿ ನಾವು ಹೋಗಬೇಕು. ಅಂತನಾ ಹೇಳಿದೆ ಹೌಲ್ಲೋ ? |
| ಕಕ್ಕಯ್ಯ | : | (ಅಂತರ್ಮುಖಿನಾಗಿ ವಿಚಾರ ಮಗ್ನನಾಗಿ) ಆಂ ? |
| ಬಸವ | : | ನಾ ಹೇಳಿದ್ದ ಸರಿಯಾಗಿ ತಿಳೀತೊ ಇಲ್ಲೊ ? |
| ಸಂಬೋಳಿ | : | ಯಪ್ಪಾ, ಈಗ ನನಗ ಸರಿಯಾಗಿ ತಿಳೀತು ನೋಡ್ರಿ. |
| ಬಸವ | : | ಏನು ? |
| ಸಂಬೋಳಿ | : | ಇದನ್ನs ನಾ ಇವರಿಗೆ ಕೇಳತಿದ್ದೆ. |
| ಬಸವ | : | ಏನಂತ ? |
| ಸಂಬೋಳಿ | : | ನೀವು ಹೇಳೋದೆಲ್ಲ ಕರೆ ಐತಿ. ಆದರ ಹಿರ್‍ಯಾರ ಕಾಲದಿಂದ ಮಾರೀ ಮಸಣೀ ಪೂಜಾ ಮಾಡೋದು, ಹರಕಿ ಹೊತ್ತ ಕುರಿ ಕೋಳಿ ಬಲಿ ಕೊಡೋದು, ಕಷ್ಟ ಕಾಲದಾಗ 'ಪಾರ ಮಾಡವ್ವಾ' ಅಂತ ಬೇಡಿಕೊಳ್ಳೋದು ಇದನ್ನೆಲ್ಲ ಬಿಡಾಕೂ ಮನಸ್ಸಿರಲಿಲ್ಲ, ಧೈರ್‍ಯಾನೂ ಇರಲಿಲ್ಲ. ಆದರ ಅವನ್ನ ನಾವು ಯಾಕ ಬಿಡಬೇಕು ? ಮತ್ತ ಬಿಡಬೇಕು ಅಂದರ ಏನು ಮಾಡಬೇಕು ಅನ್ನೋದು ತಿಳೀತಿದ್ದಿಲ್ಲ. ಅದು ಈಗ ತಿಳೀತು. |

ಬಸವ : ಏನ ತಿಳೀತು ?

ಸಂಬೋಳಿ : ನಮ್ಮ ಯಿಚಾರ ಯಿಸ್ತಾರ ಮಾಡಿಕೋಬೇಕು. ಹಿಗ್ಗಿಸಿಕೋಬೇಕು. ಇಡೀ ಲೋಕದ ವಿಚಾರ ಮಾಡಬೇಕು. ಅಂದರ ಅದರ ಹಿಂದಿನ ಶಕ್ತಿ ಎಷ್ಟ ದೊಡ್ಡ ದೇವರು ಅನ್ನೋದು ಅರಿವ ಆಗತತಿ. ಹೌದಿಲ್ಲರಿ?

ಬಸವ : ಹೌದು.

ಕಕ್ಕಯ್ಯ : ನನ್ನ ತಿದ್ದಾಕ ಬಂದರ ನೀನs ಶಾಣ್ಯಾ ಆಗಿ ಬಿಟ್ಟಿ ! ಅಂದರ ನಾ ದಡ್ಡ !
(ಶರಣ ಸಮೂಹ ಬರುವುದು)

ಬಸವ : ಕಕ್ಕಯ್ಯನೋರೆ, ನೀವು ಹಿರೇರು. ನೀವು ಈ ಅಹಂಕಾರ ಬಿಡಬೇಕು. ಸಿಟ್ಟು ಬಿಡಬೇಕು. ಮ್ಯಾಲಾಗಿ ಶರಣನಾದೋನು ಪಾಲಿಸಬೇಕಾದ ಈ ಆಚಾರಗಳನ್ನು ಮನನ ಮಾಡಿಕೋಬೇಕು. ಕಳಬೇಡ...!

ಕಕ್ಕಯ್ಯ : ಕದ್ದಿಲ್ಲ.

ಬಸವ : ಕೊಲಬೇಡ !

ಕಕ್ಕಯ್ಯ : ಯಾರ್ನೂ ಬ್ಯಾಟಿ ಆಡಿ ಸಂತೋಸ ಪಟ್ಟಿಲ್ಲ.

ಬಸವ : ಹುಸಿಯ ನುಡಿಯಲು ಬೇಡ !

ಕಕ್ಕಯ್ಯ : ನುಡಿದಿಲ್ಲ.

ಬಸವ : ಆದರೆ ಅನ್ಯರಿಗೆ ಅಸಹ್ಯ ಪಟ್ಟಿದ್ದೀರಿ !

ಕಕ್ಕಯ್ಯ : ತಪ್ಪಾತು.

ಬಸವ : ಇದಿರ ಹಳಿಯಲು ಬೇಡ, ಹಳಿದಿದ್ದೀರಿ !

ಕಕ್ಕಯ್ಯ : ತಪ್ಪಾತು.

ಬಸವ : ಈ ಎರಡು ಆಚಾರಗಳಲ್ಲಿ ನೀವು ತಪ್ಪಿದಿರಿ.

ಕಕ್ಕಯ್ಯ : ಇನ್ನ ಹಿಂಗ ಆಗಾಕ ಕೊಡಾಂಗಿಲ್ಲ.

ಬಸವ : ನನ್ನ ವಚನಗಳನ್ನು ಹಿಗ್ಗಾಮುಗ್ಗಾ ಅರ್ಥ ಮಾಡಿಕೊಬೇಡ್ರಿ.

ಕಕ್ಕಯ್ಯ : ತಿಳೀದಿದ್ದರ ಕೇಳತೇನಿ, ತಿಳಕೊಂಡದ್ದ ಸರಿನೊ ತಪ್ಪೋ ಅಂತ ಕೇಳಿ ತಿಳಕೋತೇನಿ.

ಬಸವ : ಒಳ್ಳೇದು, ಬರ್ತೇನೆ.
(ಪರಸ್ಪರ ವಂದನೆ)

ಶರಣರು : ಭಕ್ತಿಯ ಬೆಳೆಸಿದ ಬಸವಣ್ಣನವರಿಗೆ ನಮೋ ನಮಃ ಶರಣರೇಣ್ಯ ಕಕ್ಕಯನೋರಿಗೆ ನಮೋ ನಮಃ. ವೇಲೆ ಆಯ್ತು. ಅನುಭವ ಮಂಟಪ ಚರ್ಚೆಗೆ ಹೋಗೋಣವಲ್ಲ ?

ಬಸವ : ನಡೆಯಿರಿ.
(ಬಸವಣ್ಣ ಮತ್ತು ಉಳಿದ ಶರಣರು ಹೋಗುವರು.)

ಸಂಬೋಳಿ : ನೋಡ್ರಿ ಕಾಕಾ, ನಿಮ್ಮಿಂದ ನನಗ ಇಂದ ಎರಡನೇ ಸಾರೆ ಲಾಭ ಆತು. ಅಂದು ನಿಮ್ಮ ಮಾರಿ ನೋಡಿದ್ದಕ ಬಸವಣ್ಣೋರ ದರಸನ ಆತು. ಆಶೀರವಾದ ಸಿಕ್ಕಿತು. ಇಂದ ನಿಮ್ಮ ಹತ್ತಿರ ಇದ್ದದ್ಕ ತಿಳವಳಿಕೆ ಹಿಗ್ಗಿಸಿಕೋಬೇಕು, ಅನೋ ಮಾತು ತಿಳೀತು ಅದಕ್ಕ ಶರಣರ ಸಂಗಲೇಸು ಅಂತ ಹೇಳ್ತಾರ, ಬರ್‍ರೀನ್ರಿ. (ವಂದಿಸಿ ಹೋಗುವನು.)

(ಕಕ್ಕಯ್ಯ ವಿಚಾರಮಗ್ನನಾಗಿ ಕೂರುವನು)

(ಮರೆಯಿಂದ ಮುಂದಿನ ನುಡಿಗಳು ಹಾಡಿದ್ದು ಕೇಳಬರುವುದು)
ಡೋಹಾರ... ಡೋಹಾರ... ನಾವು ಡೋಹಾರ
ಶಿವನ ಉರಿವ ಕಣ್ಣಿನಿಂದ । ಕೂಡಿ ಬಂದ ಮೂಡಿ ಬಂದ ।
ಡೋಹಾರ... ಡೋಹಾರ... ನಾವು ಡೋಹಾರ.
ಚರ್ಮವನ್ನು ಹದವ ಮಾಡಿ । ಎದೆಯ ಜೀವ ಸುರಿದು ಕೊಟ್ಟ ।
ಡೋಹಾರ... ಡೋಹಾರ... ನಾವು ಡೋಹಾರ...
(ಚಾಲ)
ಮಾರಿ ಮಸಣಿ ದೈವ ದೈವ ಎಂದು
ಕಾಲಿಡಲಿಂಬಿಲ್ಲ
ದೈವನೊಬ್ಬನೆ ಕೂಡಲ - ಸಂಗಮ - ದೇವ ॥
(ಚಾಲ)
ಕಂತುಪಿತನ । ನಂತಶಯನ । ನನ್ನಂತರದಲಿ । ನಿಂತು ನಡೆಸೆಲೊ। ನೀ ನನ್ನ ॥
ಆಸೆಯಾಮಿಷವಳಿದು । ಹುಸಿ ವಿಷಯಂಗಳೆಲ್ಲ ಹಿಂಗಿ ।
ಸಂಶಯ ಸಂಬಂಧ । ನಿಸ್ಸಂಬಂಧವಾಯಿತ್ತಯ್ಯ ।
ಎನ್ನ ಮನದೊಳಗೆ । ಘನ ಪರಿಣಾಮವ ಕಂಡು ।
ಮನಮಗ್ನವಾಯಿತ್ತಯ್ಯ ।

ಅಭಿನವ ಮಲ್ಲಿಕಾರ್ಜುನಾ । ಪ್ರಭುದೇವರ ಕರುಣದಿಂದಾನು
ಬದುಕಿದೆನು ॥
(ಹೆಂಡತಿ ಬರುವಳು)

ಹೆಂಡತಿ : (ಹತ್ತಿರ ಬಂದು) ಏನರಿ

ಕಕ್ಕಯ್ಯ : (ತನ್ನಷ್ಟಕ್ಕೇ ಪರವಶನಾಗಿ ಹಾಡಲಾರಂಭಿಸುವನು)

ಎನ್ನ ಕಷ್ಟ ಕುಲದಲ್ಲಿ ಹುಟ್ಟಿಸಿದೆಯಯ್ಯ ।
ಎಲೆ ಲಿಂಗ ತಂದೆ ।
ಕೆಟ್ಟೆನಯ್ಯ । ನಿಮ್ಮನು ಮುಟ್ಟಿಯೂ ಮುಟ್ಟದಿಹೆನೆಂದು ।
ಎನ್ನ ಕೈ ಮುಟ್ಟದಿರ್ದಡೆ ।
ಮನಮುಟ್ಟಲಾರದೆ ?
ಅಭಿನವ ಮಲ್ಲಿಕಾರ್ಜುನಾ ॥
(ಶಾಂತನಾಗುವನು.)

ಹೆಂಡತಿ : ಏನರಿ (ಹತ್ತಿರ ಕುಳಿತುಕೊಳ್ಳುವಳು.)

ಕಕ್ಕಯ್ಯ : ಏನು ?

ಹೆಂಡತಿ : ನಿಮಗಾದರ ನಿಮ್ಮ ಶರಣರಾಯ್ತು, ನಿಮ್ಮ ಚರ್ಚೆಗಳಾಯ್ತು, ನಿಮ್ಮ ವಚನಗಳಾಯ್ತು, ನಿಮ್ಮ ಬಸವಣ್ಣ ಆಯ್ತು, ನಿಮ್ಮ ಬಳಗ ದೊಡ್ಡದು. ನನಗ ನಿಮ್ಮನ್ನು ಬಿಟ್ಟರ ಬ್ಯಾರೆ ಯಾರ ಅದಾರ ಹೇಳ್ರಿ.

ಕಕ್ಕಯ್ಯ : ನೀನೂ ಅನುಭವ ಮಂಟಪಕ್ಕ ಬಾ.

ಹೆಂಡತಿ : ಬಂದರ ನಿಮ್ಮ ಚರ್ಚೆ ನನಗೇನ ತಲಿಗಿ ಹತ್ತತತಿ ?

ಕಕ್ಕಯ್ಯ : ನಾ ಏನು ಮಾಡಬೇಕಂತಿ ?

ಹೆಂಡತಿ : ದ್ಯಾವರು ಒಂದ ಕೂಸ ಕೊಟ್ಟಿದ್ದ. ಎಂಥಾ ಛಂದ ಇತ್ತು. ಅದನೂ ಕಸಕೊಂಡ ಹ್ವಾದ.

ಕಕ್ಕಯ್ಯ : ಕೊಟ್ಟಾವ ಅವ, ಕೊಂಡಾವ ಅವ. ನಮಗೇನ ಮಾಡಾಕ ಆಗತೈತಿ?

ಹೆಂಡತಿ : ಮನ್ಯಾಗ ಒಂದ ಕೂಸರೆ ಇದ್ದಿದ್ದರ ನನ್ನ ಜೀವಕ್ಕ ಎಷ್ಟೋ ಆಧಾರ ಆಗತಿತ್ತು.

ಕಕ್ಕಯ್ಯ : ಅಂಥೇಳೇ ತುಕಾನ್ನ ಮಗನ ಹಂಗ ನೋಡಿಕೊಂಡಿದ್ದಿವಲ್ಲ.

ಹೆಂಡತಿ : ಅಲ್ಲೇ ಇದ್ದಿದ್ದರ ಆ ತುಕಾನ ಸಂಸಾರ ನೋಡ್ಯರೆ ಸುಖ ಪಡಬಹುದಿತ್ತು.

| | | |
|---|---|---|
| ಕಕ್ಕಯ್ಯ | : | ಯಾರ‍್ಯಾರ ಋಣಾನುಬಂಧ ಎಷ್ಟೆಷ್ಟ ಇರ್ತತಿ ಅಷ್ಟs ಅವರ ಸುಖ ಅಂತ ತಿಳಕೊಂಡು ದೇವರ ಇಟ್ಹಾಂಗ ಇರಬೇಕು. |
| ಹೆಂಡತಿ | : | ನಾ ನನ್ನ ಆಸರ್ಕಿ ಬ್ಯಾಸರಕಿ ಯಾರ ಆರೈಕ್ಯಾಗ ಕಳೀಬೇಕು ? |
| ಕಕ್ಕಯ್ಯ | : | ನಿನ್ನ ದೈವದಾಗ ಮಕ್ಕಳ ಸುಖ ಇಲ್ಲ. |
| ಹೆಂಡತಿ | : | ನೀವು ಸಿಗೂಗೊಡಲಿಲ್ಲ. |
| ಕಕ್ಕಯ್ಯ | : | ಆ ಮ್ಯಾಲ ನಿನಿಗ ಮಕ್ಕಳs ಆಗಲಿಲ್ಲ. |
| ಹೆಂಡತಿ | : | ನೀವು ತುಕಾನ್ನರೆ ಯಾಕ ಕರಕೊಂಡ ಬರಲಿಲ್ಲ ? |
| ಕಕ್ಕಯ್ಯ | : | ತುಕಾ ನಮ್ಮ ಮಗ ಅಲ್ಲ. |
| ಹೆಂಡತಿ | : | ಆದರೂ ಮನಗ ಹಂಗ ಇದ್ದನಲ್ಲ. |
| ಕಕ್ಕಯ್ಯ | : | ನಮಗ ಅವನ ಮ್ಯಾಲ ಹಕ್ಕ ಇರಲಿಲ್ಲ. |
| ಹೆಂಡತಿ | : | ಇಲ್ಲೇ ಇದ್ದಿದ್ದರ ಇಲಖ್ಲ ಒಂದ ಕನ್ಯಾ ನೋಡಿ ಮದವಿ ಮಾಡಿ ಅವನ ಸಂಸಾರ ಬೆಳದಿದ್ದನರೆ ನೋಡಿ ಸುಕಾ ಪಡಬಹುದಿತ್ತಲ್ಲ. |
| ಕಕ್ಕಯ್ಯ | : | ತುಕಾನೂ ಇಲ್ಲ, ಸುಖಾನೂ ಇಲ್ಲ. |
| ಹೆಂಡತಿ | : | ಒಮ್ಮೆ ಹೋಗಿ ಬರೋಣೇನ್ರಿ ? |
| ಕಕ್ಕಯ್ಯ | : | ಎಲ್ಲಿ ?<br>(ಆಲೋಚನೆ) |
| ಹೆಂಡತಿ | : | ಎಲ್ಲಿಂದ ಬಂದ್ವಿ ಅಲ್ಲಿಗೆ. ತುಕಾನ ಲಗ್ನಾ ಆಗಿರಬೇಕು. ಈಗ ಅಂವಗ ಮಕ್ಕಳೂ ಆಗಿರಬೇಕು. ನೋಡಬಹುದು. ಕೈಯಾರ ಆಡಿಸಬಹುದು. ಮನಸಾರ ಉಣಿಸಿ ತಿನಿಸಿ ಅವು ನಕ್ಕದ್ದು ಆಡಿದ್ದು ನೋಡಬೌದು. (ಗಂಡನಿಗೆ) ನನ್ನ ಸಲವಾಗಿ ನೀವೇನ ಮಾಡೀರಿ? ಅಷ್ಟೂ ಮಾಡಬಾರದೇನು ? |
| ಕಕ್ಕಯ್ಯ | : | ಅಲ್ಲಿಂದ ಇಲ್ಲ ಬಂದಿವಿ. ಇನ್ನ ಹೊಳ್ಳಿ ಅಲ್ಲಿ ಹೋಗೋದು ಆಗಲಾರದ ಮಾತು. |
| ಹೆಂಡತಿ | : | ನೀವು ಭಾಳ ಸ್ವಾರ್ಥಿ ಇದೀರಿ. ನಿಮ್ಮ ಮನಸಿಂದ ಅಷ್ಟ ವಿಚಾರ ಮಾಡ್ತೀರಿ. ನನ್ನ ಜೀವದ ಕೊರಗು ನಿಮಗ ತಿಳ್ಯಾಂಗಿಲ್ಲ. |
| ಕಕ್ಕಯ್ಯ | : | ಇಲ್ಲಿ ಸಂಭೋಳ್ಯಪ್ಪ ಆದಾನ. ಅವನೂ ಕಾಕ ಕಾಕಾ ಅಂತಾನ. ಅವನ್ನs ತುಕಾ ಅಂತ ತಿಳಕೊ. |

ಹೆಂಡತಿ : ಮಾರಿ ಮಸಣೀ ಕಲ್ಲನ್ನ ಲಿಂಗಾ ಅಂತ ನೀವು ತಿಳಕೋತೀರೇನು?

ಕಕ್ಕಯ್ಯ : ಏಯ್, ಮಾರಿ ಮಸಣೀ ಕಲ್ಲಿನ ಕೂಡ ಇಷ್ಟ ಲಿಂಗವನ್ನು ಹೋಲಿಸಬ್ಯಾಡ. ನನಗ ಸಿಟ್ಟ ಬರಸಬ್ಯಾಡ.

ಹೆಂಡತಿ : ಯಾಕ ಅಲ್ಲ ? ಅದೂ ಕಲ್ಲು, ಇದೂ ಕಲ್ಲು, ಕಲ್ಲ ಗಿಡದ ಬಡ್ಡ್ಯಾಗ ಇಟ್ಟ ಪೂಜಿದರೇನು ? ಎದೀಮ್ಯಾಲ ಕಟ್ಕೊಂಡ ಪೂಜಿದರೇನು ? ಕಲ್ಲು ಕಲ್ಲs !

ಕಕ್ಕಯ್ಯ : ನೀ ಹೆಣ್ಣಲ್ಲ, ಮಾರಿ.

ಹೆಂಡತಿ : ಮಾರಿ ಅನ್ನಿರಿ, ಬೇಕಾರ ಮಸಣಿ ಅನ್ನಿರಿ. ನಿಮಗ ಸಿಟ್ಟ ಯಾಕ ಬರ್ತ್ತಿ ?

ಕಕ್ಕಯ್ಯ : ಇದs ಈಗ ಬಸವಣ್ಣೋರ ಭೆಟ್ಟಿಯಾಗಿ ಹೋಗ್ಯಾರ. ಇಷ್ಟರಾಗ ಮತ್ತ ನನ್ನ ತಲೀ ಭಡಕಾಸ ಬ್ಯಾಡ. (ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು) ನಾ ಅನುಭವ ಮಂಟಪಕ್ಕ ಹೋಗ್ತೀನಿ.

ಹೆಂಡತಿ : ನನ್ನ ಕೊಂದ ಬಿಡ್ರಿ. ಆ ಮ್ಯಾಲ ಎಲ್ಲಿ ಬೇಕ ಅಲ್ಲಿ ಸುಡಗಾಡಕಾದರೂ ಹೋಗ್ರಿ.

ಕಕ್ಕಯ್ಯ : ನೀ ಏನ ನಿನ್ನ ಬಾಯಿ ಬಿಗಿ ಹಿಡೀತೀಯೊ ಏನು -

ಹೆಂಡತಿ : ಏನು ಮಾಡಾವರದೀರಿ ? ಹೊಡಿತೀರಿ ? ಹೊಡೀರಿ. ಕೊಲ್ಲ್ತೀರಿ ? ಕೊಲ್ಲರಿ.

ಕಕ್ಕಯ್ಯ : ಇಂದಿನಿಂದ ನೀ ನನ್ನ ಹೇಣ್ತಿ ಅಲ್ಲ. ಹೊರಬೀಳು. ಈ ಮನ್ಯಾಗ ನೀ ಇರಬೇಕಾಗಿಲ್ಲ.

ಹೆಂಡತಿ : ಹೋಗಾಂಗಿಲ್ಲ !

ಕಕ್ಕಯ್ಯ : ಎಳದ ಹೊರಗ ಹಾಕತೇನಿ.

ಹೆಂಡತಿ : ಹಾಕರಿ.

ಕಕ್ಕಯ್ಯ : ಇಷ್ಟ ಉದ್ಧಟತನ ಐತಿ ?

ಹೆಂಡತಿ : ಹೌದ, ಅಷ್ಟ ನಿಸ್ಸಂಗ ಆಗೇ ನಿಂತೀನಿ ಇವತ್ತ. ಒಂದು, ಹೊಳ್ಳಿ ನನ್ನ ನಮ್ಮೂರಿಗೆ ಒಯ್ದು ಬಿಡ್ರಿ. ಇಲ್ಲ, ಇಲ್ಲೇ ಕೊಂದ ಹೂಳಿಬಿಡ್ರಿ. ನನಗ ಇಂಥಾ ಪರಿ ಮಂದಿ ಇಲ್ಲ, ಮಕ್ಕಳಿಲ್ಲ, ಅಂತಃಕರಣದ ಒಂದ ಮನಷಾ ಇಲ್ಲ-ಅಂಥಲ್ಲಿ ಇನ್ನ ಇರಾಕ ಆಗೊದಿಲ್ಲ.

ಕಕ್ಕಯ್ಯ : ಹೋಗ ಹಂಗಾರ.

ಹೆಂಡತಿ : ಹ್ಯಾಂಗ ಹೋಗಲಿ ?

ಕಕ್ಕಯ್ಯ : ಬಂಧಾಂಗ.

ಹೆಂಡತಿ : ಕರತಂದೀರಿ ಹ್ಹಂಗ ಬಿಟ್ಟ ಬರ್‍ರಿ.

ಕಕ್ಕಯ್ಯ : ಏ ಏಯ್ ರಾಕ್ಷಸಿ, ನಡೀ ಹೊರಗ ಹೊರಬೀಳು. (ಎಳೆಯಲಾರಂಭಿಸುವನು.)

ಹೆಂಡತಿ : ಏನರಿ ಇದು, ಅಸಹ್ಯ ?

ಕಕ್ಕಯ್ಯ : ಯಾಕ ?

ಹೆಂಡತಿ : (ಅಳುತ್ತ) ಹಿಂಗ ನೀವು ಈ ಪರದೇಸದಾಗ ಎಳದ ಮನೀ ಹೊರಗ ಹಾಕಿ ಹೋಗು ಅಂದರ ನಾ ಎಲ್ಲಿ ಹೋಗಲಿ ? ಇಲ್ಲಿ ಏನ ನಿಮ್ಮ ಹ್ಹಂಗ ನನ್ನ ಗುರುತಿನ ಜನಾ ಅದಾರ ? ನನ್ನ ಬಳಗದವರು ಆದಾರ ? ನಾ ಏನು ಮಾಡಲಿ ಹೇಳ್ರಿ.

ಕಕ್ಕಯ್ಯ : ಅದರ ಚಿಂತಿ ಇದ್ದಿದ್ದರ ಇಷ್ಟ ಸೊಕ್ಕಿನಿಂದ ನೀ ಮಾತಾಡತಿದ್ದಿಲ್ಲ. ಏಳ ಮೊದಲು, ಏಳ ಇಲ್ಲಿಂದ. (ಪುನಃ ಎಳೆಯುವನು, ಪ್ರಾರಂಭದ ದೃಶ್ಯದೊಳಗಿನ ಯುವಕನ ಪ್ರವೇಶ.)

ಯುವಕ : ಕಾಕಾ, ಕಾಕಾ... (ಕಕ್ಕಯ್ಯ ತಡೆದು ನಿಲ್ಲುವನು)

ಹೆಂಡತಿ : (ಬಿಕ್ಕುತ್ತ) ಯಾರು ? ಯಾರಪಾ ನೀ ?

ಯುವಕ : ಕಾಕಾ, ನಾ ನಿಮ್ಮ ತುಕಾ, ನಿಮ್ಮ ತುಕಾ, (ಕಕ್ಕಯ್ಯನ ಹೆಂಡತಿಗೆ) ಆಯಿ, ನಿನ್ನ ಮಗಾ ತುಕಾ.

ಹೆಂಡತಿ : ಆಂ ? ನಮ್ಮ ತುಕಾ, ಇದೇನೋಪ್ಪಾ, ಭಗತರಿಗೆ ದೇವರ ಪರಸನ್ ಆಧಾಂಗ ನಿನ್ನ ನೆನಸೂ ತಡ ಇಲ್ಲದ ಬಂದಿ ?

ಯುವಕ : ಆಯಿ, ನೀವು ನನ್ನ ಬಿಟ್ಟು ಬಂದ ಮ್ಯಾಲ ಅಲ್ಲೇ ಇರಾಕ ರಗಡ ಪ್ರಯತ್ನ ಮಾಡಿದೆ. ಕಡೇಕ್ಕ ನಿಮ್ಮ ಸುದ್ದಿ ಹತ್ತುತ್ತಲೇ ಇತ್ತ ಬಂದ ಬಿಟ್ಟೆ

ಹೆಂಡತಿ : ಯಾರ ಹೇಳಿದರಪಾ ನಮ್ಮ ಸುದ್ದಿ ನಿನಗ ?

ಯುವಕ : ಶೆಟ್ಟಿ ಬಣಜಿಗ್ಯಾರು, ಭಣಂಗ ಸಂನ್ಯಾಸೇರ ಬಾಯಿಂದ ಕೇಳಿದ್ನ. ಹಿಂಗಿಂಗ ಒಬ್ಬ ಡೋಹರ ಇಲ್ಲಿ ಬಂದಾನ. ಈಗ ಅವ ದೊಡ್ಡ ಶಿವಭಕ್ತ ಆಗ್ಯಾನ ಅಂತ. ದಾ ಹಂಗಾರ ಅಂವ ನಮ್ಮ ಕಾಕಾನ

ಇರಬೇಕಂತ ಕಯಾಸ ಕಟ್ಟಿ ಇತ್ತ ಬಂದೆ. ಬರ್‍ತಾ ಬರ್‍ತಾ ಇಕಡೀ ಮಾತೂ ಕಲತೆ, ಆದರ ಇಲ್ಲಿ ಬಂದ ಮ್ಯಾಲ ನಿಮ್ಮನ್ನು ಹುಡಕಾಕ ಭಾಳ ತಡಾಹಿಡೀತು.

ಹೆಂಡತಿ : ಎಂದ ಬಂದಿ ನನ್ನ ಮಗನs ?

ಯುವಕ : ತಿಂಗ್ಳೊಪ್ಪತ್ತ ಆತು. ಯರ್‍ರ್‍ಯಾರ್‍ನ್ನೋ ಕೇಳಿದರೂ ಯಾರೊಬ್ಬರೂ ಸರಿಯಾಗಿ ಹೇಳಾಕs ತಯಾರಿಲ್ಲ.

ಹೆಂಡತಿ : ಕಡೆಕ್ಕ ಯಾರು ಹೇಳಿದರು ?

ಯುವಕ : ಓಣೀ ಓಣೀ ಹುಡುಕಾಕ ಸುರು ಮಾಡಿದ್ನಿ. ಇಂದ ಈ ಓಣಿಗಿ ಬಂದೆ ಕಾಕಾನ ದನಿ ಕೇಳಿಸ್ತು. ಓಡಿ ಬಂದೆ.

ಕಕ್ಕಯ್ಯ : (ಹೆಂಡತಿಗೆ) ಹೋಗ ಇನ್ನ ನಿನ್ನ ತುಕಾ ಬಂದಾನ. ಅವನ ಕೂಡ ಹೋಗಿ ಬಿಡು.

ಯುವಕ : ಎಲ್ಲಿ ಹೋಗೋದು ?

ಕಕ್ಕಯ್ಯ : ನಿಮ್ಮೂರಿಗೆ. ಆಕಿನ್ನ ಕರಕೊಂಡ ಹೋಗು.

ಹೆಂಡತಿ : (ಗಂಡನಿಗೆ) ಬರೂ ಪುರಸತ್ತಿಗಿ ಇಲ್ಲದs ಮಗನ್ನ ಹೋಗ ಅನಬ್ಯಾಡ್ರಿ. (ತುಕಾಗೆ) ಬಾ ನನ ಮಗನs (ಎದ್ದು ಒಳಗೆ ಹೋಗಲು ಸಿದ್ಧಳಾಗಿ ನಿಲ್ಲುವಳು.)

ಕಕ್ಕಯ್ಯ : ನಾ ಹೋಗ್ತೇನಿ. ಅನುಭವ ಮಂಟಪಕ (ಹೋಗುವನು.)

ಯುವಕ : ನಾನೂ ಬರ್‍ತೇನಿ. ಆಯಿ, ನೀನೂ ನಡಿ.

ಹೆಂಡತಿ : ಎಲ್ಲಿ ? ಮಂಟಪಕ ? ನನಗೇನ ತಿಳೀತತಿ ಅಲ್ಲಿ ?

ಯುವಕ : ಹೋಗೋಣ ನಡಿ. ಕಾಕಾನ್ನ ಮಂದಿ ಇಷ್ಟ ಉಧೋ ಉಧೋ ಮಡ್ತಾರಂದ ಮ್ಯಾಲ ಅಲ್ಲಿ ಏನ ನಡೀತತಿ ನೋಡಬೇಕು.

ಹೆಂಡತಿ : (ತುಕಾಗೆ) ಎಂದು ಉಂಡೀ ಯಾರಿಗ್ಗೊತ್ತು ! ಉಣಬಾ ಮೊದಲ. ನಾಳಿ ಹೋದೀ ಅಂತ.

ಯುವಕ : ಹೊಟ್ಟೀ ಹಸಿವಿನಕಿಂತ ಎದೀ ಹಸವ ಭಾಳ ದೊಡದು. ಆಯಿ, ನೀವು ಸಿಕ್ಕಿರಿ. ನಿನ್ನ ನೋಡ್ಯಕs ನನ್ನ ಹೊಟ್ಟಿ ತುಂಬ್ಯೆತಿ. ನಡಿ. (ರಟ್ಟೆಗೆ ಕೈ ಹಾಕಿ ಎಳೆಯುವನು.) (ದೂರ ನೋಡಿ ಏರುದನಿಯಲ್ಲಿ) ತಡಿ ಕಾಕಾ, ನಾವೂ ಬರ್‍ತೇವಿ. (ಹೋಗುವರು)

(ಕತ್ತಲೆ)

(ಪುನಃ ಮಂದ ಬೆಳಕು ಚೆಲ್ಲುವದು. ಸೈನಿಕರನ್ನು ಅಲ್ಲಲ್ಲಿ ಅಡಗಿಸಿ ನಿಲ್ಲಿಸುವದು, ಸೂಚನೆ ಕೊಡುವದು ನಡೆಯುವದು.)

('ಸಾವಧಾನ ಸಾವಧಾನ' ಎಂಬ ಸೂಚನೆ ಘೋಷ ಕೇಳಿಸುವುದು, ಸೈನಿಕರು ಕೈದಿಗಳನ್ನು ಹಿಡಿದುಕೊಂಡು ಹೊರಟಿರುವರು. ಮರೆಯಲ್ಲಿ ನಿಂತವರು ಮೇಲೆಬಿದ್ದು ಕಾದುವರು ಕೈದಿಗಳು ಬಿಡಿಸಿಕೊಂಡು ಓಡುವರು.)

(ಕತ್ತಲೆ)

# ಅಂಕ - ೫

(ಮರೆಯಿಂದ)

ಮೂರು ಮಲವ ಲಯವ ಮಾಡಿ ।
ನಾ ಎಂಬುದ ನಾಶ ಮಾಡಿ ॥
ಅಂಗ ಲಿಂಗ ಸಂಗವಾಗಿ ।
ಜಂಗಮದ ಜಾತಿ ಬಿಡಿಸಿ ।
ಕೈಲಾಸವ ಕೈಗೆಟುಕಿಸಿದ ।
ಅನುಭವ ಮಂಟಪ ।
ಶರಣರ ಮಂಟಪ ॥

(ಬೆಳಕು ಚೆಲ್ಲಿದಾಗ ಕಾಣುವದು ಅನುಭವ ಮಂಟಪದ ದೃಶ್ಯ. ಎದುರಿಗೆ ಮಧ್ಯದಲ್ಲಿ ತುಸು ಎತ್ತರದಲ್ಲಿ ಅಲ್ಲಮ ಪ್ರಭು. ಎರಡೂ ಪಾರ್ಶ್ವದಲ್ಲಿ ಉಳಿದ ಶರಣ ಶರಣೆಯರು ಇರುವರು)

ಕಕ್ಕಯ್ಯ : ಎನ್ನ ಕಷ್ಟ ಕುಲದ ಸೂತಕ
ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತ್ತು.
ಶುಕ್ಲ ಶೋಣಿದಿಂದಲಾದ ಸೂತಕ
ನಿಮ್ಮ ಮುಟ್ಟಲೊಡನೆ ಬಯಲಾಯಿತ್ತು.
ತಟ್ಟಿದ ಮುಟ್ಟಿದ ಸುಖಂಗಳೆಲ್ಲವ
ಲಿಂಗ ಮುಖಕ್ಕೆ ಅರ್ಪಿಸಿದೆನಾಗಿ
ಎನ್ನ ಪಂಚೇಂದ್ರಿಯಂಗಳು ಬಯಲಾದವು
ಎನ್ನ ಅಂತರಗದಲ್ಲಿ ಜ್ಞಾನ ಜ್ಯೋತಿ ಎಡೆಗೊಂಡುದಾಗಿ
ಒಳಗೂ ಬಯಲಾಯಿತ್ತು
ಸಂಸಾರ ಸಂಗದ ಅವಸ್ಥೆಯ ಕ್ರೀಯಲ್ಲಿ
ತರಹರವಾಯಿತ್ತಾಗಿ
ಬಹಿರಂಗ ಬಯಲಾಯಿತ್ತು

ಅಭಿನವ ಮಲ್ಲಿಕಾರ್ಜುನಾ
ನಿಮ್ಮ ಮುಟ್ಟಿದ ಕಾರಣ
ನಾನೂ ಬಯಲಾದೆ

ಬಸವಣ್ಣ : ಇದು ಅಂಗಲಿಂಗ ಸಂಗದ ಪರಿ, ಇದು ಕಾರ್ಮಿಕ ಮಲ ಅಡಗಿಸುವ ಪರಿ. ಅದಕ್ಕೆ ಮೂಲವಾದ ಮಾಯಾ ಮಲ ಅಳಿಸುವ ಪರಿ, ಬಯಲಾದಾವಂಗೆ, ಅಹಂಕಾರವಳಿದವಂಗೆ, ತ್ರಿಮಲ ಲಯವಾಗಿ ಐಕ್ಯಾನುಭವ ಸಿದ್ಧಿ ! ಹೀಗಿರುವಾಗ ಈ ಶರಣರಿಗೆ ಕೀಳೆನ್ನಬಹುದೆ ?

ಹಸುವ ಕೊಂದಾತನು ತಮ್ಮ ಮಾದಾರ ಚೆನ್ನಯ್ಯ
ಶಿಶುವಧೆಗಾನು ನಮ್ಮ ಡೋಹಾರ ಕಕ್ಕಯ್ಯ
ಪಾಪ ಕರ್ಮಿ ಮಡಿವಾಳ ಮಾಚಯ್ಯ
ಇವರಿಬ್ಬರ ಮೂವರ ಕೂಡಿಕೊಂಡಿಪ್ಪ
ಕೊಟ್ಟುದ ಬೇಡನು ನಮ್ಮ ಕೂಡಲ ಸಂಗಯ್ಯ

ಇವರೆಲ್ಲ ಕಾರ್ಮಿಕ ಮಲ ಅಳಿದವರು. ಮಾಯಾ ಮಲ ಕಳೆದವರು.

ದಾಸಿಮಯ್ಯ : ಕೀಲು ಡೋಹರ ಕಕ್ಕಯ್ಯ
ಕೀಳು ಮಾದರ ಚೆನ್ನಯ್ಯ
ಕೀಳು ಓಹಿಲ ದೇವರು
ಕೀಳು ಉದ್ಭಟಯ್ಯನು
ಕೀಳಿಂಗಲ್ಲದೆ ಹಯನು ಕರೆಯದು
ಮೇಲಾಗಿ
ಕರ್ಮದೊಳೋಲಾಡಲಾರದೆ

ನಿಮ್ಮ ಶರಣರಿಗೆ ಕೀಳಾಗಿ ಬದುಕಿದೆನಯ್ಯಾ ರಾಮನಾಥಾ ಸದ್ಗತಿಯ ಮಾರ್ಗ ಎಲ್ಲರಿಗೂ ಮುಕ್ತ. ಯಾವ ನಿಮಿಷಕ್ಕೂ ಬದುಕಿನ ಕೊನೆಗೂ ಮನುಷ್ಯ. ಈ ಹಾದಿ ಹಿಡಿದು ಆತ್ಮೋದ್ಧಾರ ಮಾಡಿಕೊಳ್ಳಬಹುದು. ಅದಕ್ಕೆ ಸಾಧಕನಿಗೆ ಶರಣ ಸಂಗವು ಆದ್ಯ ಸಾಧನ.

ನೀಲಮ್ಮ : ಹಿರಿಯರಾದ ಜೇಡರ ದಾಸಿಮಯ್ಯನವರ ಮಾತು ಸತ್ಯವಾದುದು
ಅಲ್ಲಮನ ಸಂಗ
ಅಜಗಣ್ಣನ ಸಂಗ
ಕಕ್ಕಯ್ಯನ ಸಂಗ
ಚಿಕ್ಕಯ್ಯನ ಸಂಗ
ಎಲ್ಲರ ಸಂಗ

ಯತಿಗಳ ಸಂಗ । ಜತಿಗಳ ಸಂಗ
ಮಾನ್ಯರ ಸಂಗ । ಮುಖ್ಯರ ಸಂಗ
ಸಂಗಯ್ಯಾ
ಎನ್ನ ಸಂಗ ಎನ್ನ ಬಸವಯ್ಯನ ಸಂಗ

ಪ್ರಭುದೇವ : ಸುಂದರ, ನೀಲಮ್ಮನ ಈ ವಚನದಲ್ಲಿ 'ಸಂಗ' ಶಬ್ದ ಸ್ಫಟಿಕದ ಶಲಾಕೆಯಂತೆ ಬಂದಿದೆ. ಸಂಗ ಸಹವಾಸವೂ ಹೌದು. ಸಂಗ ಸಂಗಮನಾಥನೂ ಹೌದು. ಸಂಗ ಸಂಗಡಿಗನೂ ಹೌದು. ಶರಣರೊಂದಿಗೆ ಬೆರೆತು. ಐಕ್ಯ ಸಂಧಾನ ಪಡೆದು ಅನುಭಾವ ಇಲ್ಲಿದೆ.

ಬಸವಣ್ಣ : ಅದಕ್ಕೇ ಹೇಳುವದು - ಇವರೆಲ್ಲ ನಮಗೆ ಪರಮ ಪೂಜ್ಯರೆಂದು
ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು (ಕಕ್ಕಯ್ಯನತ್ತ ನೋಡಿ) ಮಾಯ್ ಬಾಪ್
(ಕಕ್ಕಯ್ಯ ನಗುವನು)
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯನು ಕಾಣಯ್ಯ
ಅಣ್ಣನು ನಮ್ಮ ಕಿನ್ನರ ಬೊಮಣ್ಣ
(ಇಂಥವರ ಪ್ರಸಾದ ಉಂಡು ಬೆಳೆದವನು ನಾನು ಪರಶಿವನೇ,)
ಎನ್ನ ನೇತಕ್ಕರಿಯದಿರಿ ಕೂಡಲ ಸಂಗಮದೇವಾ.
ಅದಕ್ಕೆ ಇದು ನನ್ನ ನಿತ್ಯ ಪ್ರಾತಃ ಸ್ಮರಣೆ
ಹಿರಿಯಯ್ಯ ಶ್ವಪಚಯ್ಯ
ಕಿರಿಯಯ್ಯ ಡೋಹರ ಕಕ್ಕಯ್ಯ
ಅಯ್ಯಗಳಯ್ಯ ಮಾದಾರ ಚೆನ್ನಯ್ಯನು
ಕೂಡಲ ಸಂಗಮದೇವಾ
ನಿಮ್ಮ ಶರಣರೆನ್ನ ಸಲಹುವರಾಗಿ
(ಅವರೆಲ್ಲರೂ ಹಿರಿಯರು ಪೂಜ್ಯರು ಅವರಿಗೆ ನಮೋ ಎಂದೆ)
ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು
ನಿಮಗೆರಗದ ಕಾರಣ ಕೊರಳಲ್ಲಿ ನೇಣು
ಹಿಂಡಲೇಕೊ, ತೊಳೆಯಲೇಕೋ
ಕೂಡಲ ಸಂಗನ ಶರಣರಲ್ಲಿ ಡೋಹರ ಕಕ್ಕಯ್ಯ
ನಾವ ತೊರೆಯ ಮಿಂದ ?

ಬಾಹ್ಯಾಡಂಬರ ಮುಖ್ಯವಲ್ಲ ಅಂತರಂಗ ನೈರ್ಮಲ್ಯ ಮುಖ್ಯ. ಗಂಗೆಯಲ್ಲಿ ಮಿಂದ ಮಾತ್ರಕ್ಕೆ ಪಾಪಿ ಪವಿತ್ರನಾಗುವುದಿಲ್ಲ. ಮನಸ್ಸಿನ ಮಲ ಅಳಿಸಬೇಕು. ಅದನ್ನು ಸಾಧಿಸಿದವರು ಈ ಶರಣರು.

ಅಮುಗಿ ದೇವ : ಕಕ್ಕಯ್ಯನ ಪ್ರಸಾದವ ಕೊಂಡೆನ್ನ ಕುಲ ಸೂತಕ ಹೋಯಿತ್ತಯ್ಯ,
ಚೆನ್ನಯ್ಯನ ಪ್ರಸಾದವ ಕೊಂಡೆನ್ನ ತನು ಸೂತಕ ಹೋಯಿತ್ತಯ್ಯ
ದಾಸಯ್ಯನ ಪ್ರಸಾದವ ಕೊಂಡೆನ್ನ ತನು ಸೂತಕ ಹೋಯಿತ್ತಯ್ಯ
ಚಂದಯ್ಯನ ಪ್ರಸಾದವ ಕೊಂಡೆನ್ನ ಮನ ಸೂತಕ ಹೋಯಿತ್ತಯ್ಯ
ತೆಲುಗ ಜೊಮ್ಮಯ್ಯನ ಪ್ರಸಾದ ಕೊಂಡೆನ್ನ ನೆನಹು ಸೂತಕ ಹೋಯಿತ್ತಯ್ಯ
ಬಿಬ್ಬ ಬಾಚಯ್ಯನ ಪ್ರಸಾದವ ಕೊಂಡೆನ್ನ ಭಾವ ಸೂತಕ ಹೋಯಿತ್ತಯ್ಯ
ಮೊಳಗಯ್ಯನ ಪ್ರಸಾದವ ಕೊಂಡೆನ್ನ ಜನನ ಸೂತಕ ಹೋಯಿತ್ತಯ್ಯ
ಕೋಲಶಾಂತಯ್ಯನ ಪ್ರಸಾದವ ಕೊಂಡೆನ್ನ ಅಂತರಂಗದ ಸೂತಕ ಹೋಯಿತ್ತಯ್ಯ
ಮೇದಾರ ಕೇತಯ್ಯನ ಪ್ರಸಾದವ ಕೊಂಡೆನ್ನ ಅಂತರದ ಸೂತಕ ಹೋಯಿತ್ತಯ್ಯ
ಘಟ್ಟಿವಾಳಯ್ಯನ ಪ್ರಸಾದವ ಕೊಂಡೆನ್ನ ಸರ್ವಾಂಗದ ಸೂತಕ ಹೋಯಿತ್ತಯ್ಯ
ಬಸವಣ್ಣ ಚೆನ್ನ ಬಸವಣ್ಣ ಪ್ರಭುದೇವರು, ಮಡಿವಾಳಯ್ಯ, ಸಿದ್ಧರಾಮಯ್ಯ, ಸೊಡ್ಡಳ ಬಾಚರಸರು, ಹಡಪದ ಅಪ್ಪಣ್ಣ , ಶಂಕರ, ದಾಸಿಮಯ್ಯ, ಹೆಂಡದ ಮಾದಯ್ಯ, ಗಾಣದ ಕಣ್ಣಪ್ಪಯ್ಯ, ಕೈಕೂಲಿ ಚಾಮಯ್ಯ, ಬಹುರೂಪಿ ಚೌಡಯ್ಯ, ಕಲಕೇತ ಬ್ರಹ್ಮಯ್ಯ, ಮೊದಲಾದ ಶಿವಗಣಂಗಳ ಪರಮ ಪ್ರಸಾದವ ಕೊಂಡು ಬದುಕಿದೆನಯ್ಯಾ.

ಶರಣರು : ಅಮುಗಿ ದೇವರೇ ನಿಮ್ಮ ಅನುಭವಕ್ಕೆ ಮಣಿದು ನಮೋ ನಮೋ ಎಂಬೆವು.

ವೈದ್ಯ ಸಂಗಣ್ಣ : ಕಕ್ಕಯ್ಯನನೆನಗೆ ಕಾಮಧೇನುವಯ್ಯ
ಚೆನ್ನಯ್ಯನೆನಗೆ ಕಲ್ಪವೃಕ್ಷವಯ್ಯ
ಹಳ್ಳಯ್ಯನೆನಗೆ ಚಿಂತಾಮಣಿಯಯ್ಯ
ಕೆಂಭಾವಿಯ ಭೋಗಯ್ಯನೆನಗೆ ಸುಧಾಬ್ಧಿಯಯ್ಯ
ಶಿವನಾಗಮಯ್ಯನೆನಗೆ ಪುರುಷದ ಗಿರಿಯಯ್ಯ
ಇಂತೀ ಐವರ ಕಾರುಣ್ಯ ಪ್ರಸಾದ ಕೊಂಡು ಬದುಕಿದೆನಯ್ಯ
ಮರುಳಶಂಕರ ಪ್ರಿಯ ಸಿದ್ಧ ರಾಮೇಶ್ವರಯ್ಯ

ಶರಣರು : ವೈದ್ಯ ನಾಗಣ್ಣನವರೆ, ನಿಮ್ಮ ದರ್ಶನಕ್ಕೆ ಮಣಿದು ನಮೋ ಎಂಬೆವು.

ಚಂದಿಮರಸ : ದಾಸಯ್ಯನೆನಗೆ ಸಾಲೋಕ್ಯನಯ್ಯ
ಚೆನ್ನಯ್ಯನೆನಗೆ ಸಾಮೀಪ್ಯನಯ್ಯ
ಕಕ್ಕಯ್ಯನೆನಗೆ ಸಾರೂಪ್ಯನಯ್ಯ
ಮಾಚಯ್ಯನೆನಗೆ ಸಾಯೂಜ್ಯನಯ್ಯ
ದಾಸಯ್ಯ ಒಕ್ಕುದ ಕೊಂಡೆನು
ಚೆನ್ನಯ್ಯನ ಮಿಕ್ಕುದ ಕೊಂಡೆನು
ಕಕ್ಕಯ್ಯನುಂಡು ಮಿಕ್ಕದ ಕಾದು ಕೊಂಡೆನು
ಮಾಚಯ್ಯನ ಜ್ಞಾನ ಪ್ರಸಾದವ ಕೊಂಡೆನು
ಪುರಾತರೊಳಗಾಗಿ ಬಸವಣ್ಣನ ಡಿಂಗರಿಗ
ಚೆನ್ನಬಸವಣ್ಣನ ಹಳೆಯನೆಂದು
ತಮ್ಮೊಕ್ಕುದನಿಕ್ಕಿ ಸಲಹಿದನು ಕಾಣಾ ಸಿಮ್ಮಲಿಗೆಯ ಚೆನ್ನರಾಮ

ಸೊಡ್ಡಳ ಬಾಚರಸ: ಚಂದಿಮರಸ ಇಂತಿಂಥ ಶರಣರಿಂದ ಇಂತಿಂಥ ಮುಕ್ತಿ ಎಂದು ನೀವು ವಿವರಿಸಿದಿರಿ. ಈ ಶರಣರೆಲ್ಲ ವೇದಂಗಳನೋದಿಹರೆ ? ಆಗಮಂಗಳ ತೇದಿಹರೆ ? ಶಾಸ್ತ್ರಂಗಳ ತೀಡಿಹರೆ ? ಇವರೆಲ್ಲರು ಅನುಭಾವಜ್ಞಾನ.

ವೇದಂಗಳು ನಿಜವ ಬಲ್ಲೊಡೆ ವೇದಜ್ಞರ ಮರೆಯಲೊಲ್ಲದೆ ।
ಚೆನ್ನಯ್ಯಗಳ ಕಕ್ಕಯ್ಯಗಳ ಮರೆಯಲೇಕೆ ?
ಶಾಸ್ತ್ರಂಗಳು ಸತ್ಯವ ನುಡಿದರೆ । ಶಾಸ್ತ್ರಂಗಳ ಮಾತಿಂಗೆ ಹೇಸಿ ।
ಕಿರಾತ ಬೊಮ್ಮಣ್ಣನ ಕಣ್ಣಪ್ಪಗಳ ಮರೆಯಲೇಕೆ ?
ಆಗಮವೆ ಆಚಾರವನರಿವಡೆ । ಆಗಮವರಿಯಲಿಕೆ ।
ಕೆಂಭಾವಿ ಭೋಗಣ್ಣಗಳ ಬೆನ್ನಲುರುಳುತ್ತ ಹೋಗಲೇಕೆ ?
ವೇದ ಶಾಸ್ತ್ರ ಪುರಾಣ ಆಗಮಂಗಳು। ಶಿವನಾದಿಯಂತುವನರಿವಡೆ।
ಸಾಮವೇದಿಗಳು ಶ್ವಪಚಯ್ಯಂಗೆ ಶಿಷ್ಯನಾಗಬೇಕೆ ?
ವಾದಿಸದಿರು ಪ್ರತಿವಾದಿ - ಎಂದು ಹೇಳಿರಿ
ನಿನ್ನಂತರವನರಿಯದೆ ಅಭೇದ್ಯರು ಘನಕ್ಕೆ ಘನ ಶಂಭು ಸೊಡ್ಡಳ.
ಬರಿಯ ಪಠಣದಿಂದ ಅನುಭಾವದ ಸಂಸ್ಕಾರವಾಗದು. ಸಂಸ್ಕಾರವಿಲ್ಲದೆ ಚಿತ್ತ ಶುದ್ಧಿಯಾಗದು.

ಪುರದ ನಾಗಣ್ಣ : ಹಿರಿಯರಾದ ಸೊಡ್ಡಳ ಬಾಚರಸರ ಮಾತು ನಮಗೆ ಶಿರಸಾವಂದ್ಯ ಅಂತೆಯೇ ಶರಣರ ಸನ್ನಿದಿಯಿಂದಲ್ಲದೆ ಸಂಸ್ಕಾರವಿಲ್ಲ. ನಿಮ್ಮ ಅಸಂಖ್ಯಾತ ಶರಣರ ಸನ್ನಿಧಿಯಲ್ಲಿ ಅನುಭಾವದ ಅನುಭವವಾಯಿತ್ತು.

ಎನ್ನ ಪ್ರಾಣದಲ್ಲಿ ಆಚಾರಲಿಂಗವಾಗಿ ಬಂದು ।

ಗಂಧ ಪದಾರ್ಥವ ಕೈಕೊಂಡನಯ್ಯ ಬಸವಣ್ಣನು ॥
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದು ।
ರುಚಿ ಪದಾರ್ಥವ ಕೈಕೊಂಡನಯ್ಯ ಚೆನ್ನ ಬಸವಣ್ಣನು ॥
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದು ।
ರೂಪ ಪದಾರ್ಥವ ಕೈಗೊಂಡನಯ್ಯ ಘಟ್ಟಿವಾಳ ಮುದ್ದಯ್ಯನು॥
ಎನ್ನತ್ವಕ್ಕಿನಲ್ಲಿ ಜಂಗಮ ಲಿಂಗವಾಗಿ ಬಂದು ।
ಸ್ಪರುಶನ ಪದಾರ್ಥವ ಕೈಗೊಂಡನಯ್ಯ ಸಿದ್ಧರಾಮಯ್ಯನು ॥
ಎನ್ನ ಶ್ರೋತೃಗಳಲ್ಲಿ ಪ್ರಸಾದಲಿಂಗವಾಗಿ ಬಂದು ।
ಶಬ್ಧ ಪದಾರ್ಥವ ಕೆಕೊಂಡನಯ್ಯ ಮರುಳಶಂಕರ ದೇವರು ॥
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದು ।
ಸಕಲ ಪದಾರ್ಥವ ಕೈಕೊಂಡನಯ್ಯ ಪ್ರಭುದೇವರು ॥
ನೋಟದಲ್ಲಿ ಅನುಮಿಷ
ಕೂಟದಲ್ಲಿ ಅಜಗಣ್ಣ
ಭಾವದಲ್ಲಿ ಬಾಚಿರಾಜಯ್ಯ
ಮನದೃಢವೆ
ಮೋಳಿಗೆ ಮಾರಯ್ಯ, ಡೋಹರ ಕಕ್ಕಯ್ಯ, ಕಿನ್ನರ ಬ್ರಹ್ಮಯ್ಯ,
ಸೊಡ್ಡಳ ಬಾಚರಸಯ್ಯ, ಹಡಪದಪ್ಪಣ್ಣ, ಮಡಿವಾಳ ಮಾಚಯ್ಯ
ಮುಖ್ಯವಾದ ಅಸಂಖ್ಯಾತ ಮಹಾ ಪ್ರಮಥ ಗಣಂಗಳ
ಶ್ರೀಪಾದವರ್ಚಿಸಿ ಪೂಜಿಸಿ, ಸುಖಿಯಾದೆನಯ್ಯಾ !
ಅಮರಗುಂಡದ ಮಲ್ಲಿಕಾರ್ಜುನಾ

ಬಸವ : (ತಲೆತೂಗಿ) ಅಹುದಹುದು ಪುರದ ನಾಗಣ್ಣನವರ ಮಾತು,
ಅನುಭವ ಹೃದ್ಯ.

ಸಂಗಮೇಶ್ವರ ಅಪ್ಪಣ್ಣ : ವೇದವ ನಾಲ್ಕನೋದಿದರೇನು ?
ಶಾಸ್ತ್ರವನೆರೆ ಕೇಳಿದರೇನು ?
ಶಿವಜ್ಞಾನ ಹೀನರು ಬಲ್ಲರೆ ಮುಕ್ತಿಯ ಪಥವನು ?
ಅಲೋಧ್ಯಂಚ ಚತುರ್ವೇದೀ ಸರ್ವಶಾಸ್ತ್ರ ವಿಶಾರದಃ ॥
ಶಿವಜ್ಞಾನ ನ ಜಾನಾತಿ । ದರ್ವೀ ಪಾಕರಸಂಯಥಾ ॥
ಎಂದುದಾಗಿ
ಕ್ಷೀರದೊಳಗಣ ಸಟ್ಟುಗ ಬಲ್ಲುದೆ ಸವಿ ಸ್ವಾದವನು ?
ಓದಿದ. ನಿರ್ಣಯವ
ನಮ್ಮ ಮಾದಾರ ಚೆನ್ನಯ್ಯ ಮಡಿವಾಳ ಮಾಚಯ್ಯ ಡೋಹಾರ
ಕಕ್ಕಯ್ಯ ಬಲ್ಲರು ।
ಬಸವ ಪ್ರಿಯ ಕೂಡಲ ಚೆನ್ನ ಸಂಗಮದೇವಾ ॥

ಚೆನ್ನಬಸವಣ್ಣ : ನಿಮ್ಮ ದೃಷ್ಟಾಂತ ಮೆಚ್ಚ ತಕ್ಕದ್ದು ಸಂಗಮೇಶ್ವರ ಅಪ್ಪಣ್ಣೋರೆ. ಅಧ್ಯಾತ್ಮ ಅನುಭವಿಸಿಯೆ ಅರಿಯಬಹುದು ಎನ್ನುವ ನಿಮ್ಮ ಆಶಯ ಸುತ್ತ್ಯ.

ಮರುಳು ಶಂಕರ ದೇವ : ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮಡಿವಾಳ ಮಾಚಯ್ಯ, ಸಿದ್ಧರಾಮಯ್ಯ, ಸೊಡ್ಡಳ ಬಾಚರಸರು, ಹಡಪದ ಅಪ್ಪಣ್ಣ, ಪಡಿಹಾರಿ ಉತ್ತಣ್ಣ, ಅವ್ವೆ ನಾಗಾಯಿ, ಕೋಲ ಶಾಂತಯ್ಯ, ಡೋಹರ ಕಕ್ಕಯ್ಯ, ಮೊಗವಾಡದ ಕೇಶಿರಾಜದೇವರು, ಖಂಡಣೆಯ ಬೊಮ್ಮಣ್ಣ, ಮೊದಲಾದ ಅಸಂಖ್ಯಾತ ಮಹಾ ಪ್ರಮಥಗಣಂಗಳ ಪರಮ ಪ್ರಸಾದವ ಕೊಂಡು ಬದುಕಿದೆನಯ್ಯಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನ ಮಲ್ಲಿಕಾರ್ಜುನ ದೇವಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ,

ಕಕ್ಕಯ್ಯ : ಮರುಳ ಶಂಕರ ದೇವ ಶರಣರೆ, ನಿಮ್ಮ ಭಾವವೇ ನನ್ನದೂ ಆಗಿದೆ.

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ
ಕರ್ಮವ ಕಳೆದು ಮುಟ್ಟಿ ಪಾವನವ ಮಾಡಿ
ಕೊಟ್ಟನಯ್ಯ ಎನ್ನ ಕರ ಸ್ಥಲಕ್ಕೆ ಲಿಂಗವ
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯ
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ ।
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ ।
ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ ।
ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿ
ಚತುರ್ವಿಧ ಸಾರಾಯ ಸ್ಥಲವ । ಸಂಬಂಧ ಮಾಡಿದ ।
ಸಂಗನ ಬಸವಣ್ಣನ ಕರುಣದಿಂದ । ಪ್ರಭುದೇವರ ಶ್ರೀಪಾದವ ಕಂಡು ।
ಬದುಕಿದೆನು ಕಾಣಾ ಅಬಿನವ ಮಲ್ಲಿಕಾರ್ಜುನಾ
(ಶರಣರು ಅಹುದಹುದೆಂದು ತಲೆಯಾಡಿಸುವರು)

ಪ್ರಭುದೇವರು : ತಾಯಿ ಇಲ್ಲದ ಶಿಶುವಿಂಗೆ
ಶಿಶುವಿಲ್ಲದ ತಾಯಿ ಮೊಲೆಯನೂಡಿದಳು
ಮೊಲೆವಾಲನುಂಡ ಶಿಶು
ತಾಯ ತರ್ಕೈಸಿದೊಡೆ
ತಾನು ಶಿಶುವಿಂಗೆ ಸತಿಯಾದಳಲ್ಲಾ
ಸತಿಸಂಗದ ಸುಖವ ಪತಿಯಿಲ್ಲದರಿದಲ್ಲಿ

ಸತಿಪತಿ ಎಂಬೆರಡೂ ಅಳಿಯಿತ್ತು ನೋಡಾ
ಈ ನಿಜವ ನಿರ್ಣಯವ ತೋರಿದನೆನಗೆ
ಗುಹೇಶ್ವರನ ಶರಣರ ಮಡಿವಾಳ ತಂದೆಗಳ ಪಾದಕ್ಕೆ
ನಮೋ ನಮೋ ಎನುತಿರ್ದೆನು

ಜ್ಞಾನಾನುಭವದಿಂದ ಕಾಯಕದ ಸಂಬಂಧ ಬಿಡದು, ಜ್ಞಾನಾನುಭವದ ನಂತರ ಕರ್ಮವು ನಿರ್ಮಲವಾಗಿ ಕಾಯಕವೆನಿಸುವದು. ಅದು ಕಾಣ ಕಾಯಕದ ಮಹತ್ವ ಅಷ್ಟಿಷ್ಟಲ್ಲ.
(ಅಯ್ದಕ್ಕಿ ಮಾರಯ್ಯ ಏಳುವನು)
ಹೇಳಿ ಆಯ್ದಕ್ಕಿ ಮಾರಯ್ಯನವರೇ ನಿಮ್ಮ ವಚನ...

ಮಾರಯ್ಯ : ಕಾಯಕದಲಿ ನಿರತನಾದರೆ
ಗುರುದರುಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾದರೂ ಕಾಯಕದೊಳಗು
(ಶರಣರು ತಲೆದೂಗುವರು, ನುಲಿಯ ಚೆಂದಯ್ಯ ಏಳುವನು)

ಪ್ರಭುದೇವ : ಹೇಳಿ ನುಲಿಯ ಚೆಂದಯ್ಯನವರೇ, ಹೇಳಿ ನಿಮ್ಮ ವಚನ.

ಚೆಂದಯ್ಯ : ಗುರುವಾದರೂ ಕಾಯಕದಿಂದಲೆ ಜೀವನ್ಮುಕ್ತಿ. ಲಿಂಗವಾದರೂ ಕಾಯಕದಿಂದಲೆ ಶಿಲೆಯ ಕುರುಹು ಹರಿವುದು. ಜಂಗಮವಾದರೂ ಕಾಯಕದಿಂದಲೆ ತನ್ನ ವೇಶದ ಪಾಶ ಹರಿವುದು.
(ಶರಣರು ತಲೆದೂಗುವರು)

ಚೆನ್ನಬಸವಣ್ಣ : ಕಾಯಕವೆಂದರೆ ಕಾಯ ಬಳಲಬೇಕು. ಅದಿಲ್ಲದೆ ಕಾಯಕ ಶುದ್ಧವಲ್ಲ
ತನು ಮನ ಬಳಲದೆ ಉದ್ದಂಡ ವೃತ್ತಿಯಲ್ಲಿ
ಧನವ ಗಳಿಸಿ
ಗುರುಲಿಂಗ ಜಂಗಮಕ್ಕೆ
ವೆಚ್ಚಿಸಿ ದಾಸೋಹವ ಮಾಡಿ
ಭಕ್ತರಾದೆವೆಂಬವರ (ಕೊಂಚ ತಡೆದು)
ಮುಖವ ನೋಡದಿರಯ್ಯ
ಎನಗೆ,
ಅವ ಪರಧನ ಚೋರ, ಅವ ಪಾಪಿ, ಕೋಪಿ, ಪರಿಭ್ರಷ್ಟ
ಅವನ ಕಾಯಕವ ವಿಚಾರಿಸದೆ
ಉಪದೇಶವ ಕೊಟ್ಟ

ಗುರಿವಿಂಗೆ ರೌರವ ನರಕ
(ಅಹುದಹುದು ಎಂದು ಶರಣರೆಲ್ಲ ತಲೆದೂಗುವರು)

ಕಕ್ಕಯ್ಯ : ಚೆನ್ನಬಸವಣ್ಣನವರೆ ನೀವು ತಿಳಿವಂತೆ ಕಷ್ಟದ ಮಹಿಮೆ
ಮಂಡಿತವಾದರೆ ಕಷ್ಟಕುಲವು ಶ್ರೇಷ್ಠ ಕುಲವೆನಿಸುವುದು.

ಎನಗೆ ಗುರು ಸ್ಥಲವ ತೋರಿದಾತ ಸಂಗನ ಬಸವಣ್ಣನು
ಎನಗೆ ಲಿಂಗ ಸ್ಥಲವ ತೋರಿದಾತ ಚೆನ್ನಬಸವಣ್ಣನು
ಎನಗೆ ಜಂಗಮ ಸ್ಥಲವ ತೋರಿದಾತ ಸಿದ್ಧರಾಮಯ್ಯನು
ಎನಗೆ ಪ್ರಸಾದಿ ಸ್ಥಲವ ತೋರಿದಾತ ಬಿಬ್ಬ ಬಾಚಯ್ಯನು
ಎನಗೆ ಪ್ರಾಣಲಿಂಗಿ ಸ್ಥಲವ ತೋರಿದಾತ ಚಂದಯ್ಯನು
ಎನಗೆ ಶರಣ ಸ್ಥಲವ ತೋರಿದಾತ ಸೊಡ್ಡಳ ಬಾಚರಸನು
ಎನಗೆ ಐಕ್ಯ ಸ್ಥಲವ ತೋರಿದಾತ ಅಜಗಣ್ಣನು
ನಿಜ ಸ್ಥಲಗಳಂ ಕಂಡು ಏಳ್ನೂರೆಪ್ಪತ್ತು
ಅಮರ ಗಣಂಗಳ ಶ್ರೀಪಾದಕ್ಕೆ ಶರಣೆಂದು
ಬದುಕಿದೆನು ಕಾಣಾ ಅಭಿನವ ಮಲ್ಲಿಕಾರ್ಜುನಾ ।
(ಶರಣರು ತಲೆದೂಗುವರು)

ಚೆನ್ನಬಸವಣ್ಣ : ಇನ್ನು ನಾಮ ಘೋಷದೊಂದಿಗೆ ಇಂದಿನ ಸಭೆಯನ್ನು ಮುಗಿಸಲು
ಅಲ್ಲಮ ಪ್ರಭುಗಳು ಅಪ್ಪಣೆ ಕೊಡಬೇಕೆಂದು ವಿನಂತಿಸುವೆ.

ಪ್ರಭುದೇವ : ಆಗಲಿ.

ಎಲ್ಲರೂ : (ಎದ್ದು ನಿಂತು) ಶಂಭೋ ಹರ ಹರ ಮಹಾದೇವ
ಶಂಭೋ ಹರಹರ ಮಹಾದೇವ...

(ಶಂಖ ಗಂಟೆಗಳ ಧ್ವನಿ ಮೊಳಗುವುದು)

(ಕತ್ತಲೆ)

(ಬೆಳಕು ಚೆಲ್ಲಿದಾಗ ಮೂವರು ಓಲಗದವರು ಕಟ್ಟೆಯ ಮೇಲೆ ಕುಳಿತು ಮದಿರೆಯನ್ನು ಕುಡಿಯುತ್ತಿರುವ ದೃಶ್ಯ ಕಾಣುವುದು, ಎದುರಿಗೆ ಮಧ್ಯದಲ್ಲಿ ಹೂಜೆ ಇದೆ. ಎಲ್ಲರ ಕೈಗಳಲ್ಲಿ ಗೋಲಾಕಾರದ ಪ್ರಾಶನ ಪಾತ್ರೆಗಳು ಇವೆ)

ಓಲಗದವ ೧ : ಒಟ್ಟು ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹೊಣೆಗೇಡಿತನ
ಹೆಡೆಯಾಡ್ತಾ ಇವೆ.

ಓಲಗದವ ೨ : ಹೌದು, ಆಡಳಿತ ಶಿಥಿಲವಾಗಿದೆ.

ಓಲಗದವ ೩ : ಕಾಲಾಳುಗಳ ಕೈಯಿಂದ ಸೆರೆಯಾಳುಗಳು ತಪ್ಪಿಸಿಕೊಂಡು ಹೋದರಂತೆ.

ಓಲಗದವ ೧ : ಕಾರಾಗೃಹದ ಗೋಡೆ ಬಾಗಿಲುಗಳು ಇದ್ದೂ ಇಲ್ಲದಂತಾಗಿದೆ.

ಓಲಗದವ ೨ : ಈ ಪಾರಾದ ಅಪರಾಧಿಗಳು ಹೋಗೋದೆಲ್ಲಿ ?

ಓಲಗದವ ೩ : ಅವರು ಹೋಗುವದಿಲ್ಲ. ನಮ್ಮಲ್ಲಿಯೆ ಬೆರೆತು ಬಿಡುತ್ತಾರೆ.

ಓಲಗದವ ೧ : ಅದಕ್ಕೇ ಕೊಲೆ, ಸುಲಿಗೆಯ ಸಮಾಚಾರಗಳು ದಿನೇ ದಿನೇ ಹೆಚ್ಚುತ್ತಾ ಇವೆ.

ಓಲಗದವ ೨ : ಆಡಳಿತ ನಿಯಂತ್ರಿಸಲು ದಂಡನಾಯಕರಿಗೆ ಆಗ್ತಾ ಇಲ್ಲ.

ಓಲಗದವ ೩ : ದಂಡನಾಯಕರಿಗೆ ಆಡಳಿತದಲ್ಲಿ ಆಸಕ್ತಿಯೆ ಇಲ್ಲ.

ಓಲಗದವ ೧ : ಪಾಪ ಅವರ ಯೋಗ್ಯತೆಗೆ ಮೀರಿದ ಕೆಲಸ ಇದು.

ಓಲಗದವ ೨ : ಆದರೆ ರಾಜರೂ ಯಾಕೆ ಸುಮ್ಮನೇ ಕೂಡಬೇಕು ?

ಓಲಗದವ ೩ : ಅವರಿಗೂ ಪರಿಸ್ಥಿತಿ ಕೈಮೀರಿ ನಿಂತಿದೆ ಅಂತ ಅನ್ನಿಸಿರಬೇಕು.

ಓಲಗದವ ೧ : ಹೀಗಾದರೆ ಮುಂದೆ ಏನಾಗಬಹುದು ?

ಓಲಗದವ ೨ : ಆಗುವದೇನು ? ಗದ್ದುಗೆಯಲ್ಲಿ ಅಧಿಕಾರದಲ್ಲಿ ಬೇರೆ ಮುಖ ಕಾಣಿಸುವುದು ಅಷ್ಟೆ.

ಓಲಗದವ ೩ : ಅವರಿಗಾದರೂ ಪರಿಸ್ಥಿತಿ ಹತೋಟಿಗೆ ತರಲಿಕ್ಕಾದೀತೆ ?

ಓಲಗದವ ೧ : ಶಿಥಿಲಗೊಳಿಸಬಲ್ಲವರಿಗೆ ಬಿಗಿಗೊಳಿಸುವದು ಗೊತ್ತಿರುವುದಿಲ್ಲವೆ ?

ಓಲಗದವ ೨ : ಆಗ ಪರಿಸ್ಥಿತಿ ಅವರ ಹಿಡಿತದಲ್ಲಿ ಉಳಿದೀತು ಅನ್ನುವುದಕ್ಕೇನು ಭರವಸೆ ?

ಓಲಗದವ ೩ : ಇದು ರಾಜಕಾರಣ !

ಓಲಗದವ ೧ : ಒಟ್ಟು ಬಸವಣ್ಣನೋರನ್ನ ದಂಡನಾಯಕರಾಗಿ ನೇಮಿಸುವ ಹಿಂದೆ ರಾಜರಿಗಿದ್ದ ಎಣಿಕೆ ತಲೆಕೆಳಗಾಗಿದೆ ಎನ್ನೋದು ಸುಳ್ಳಲ್ಲ.

ಓಲಗದವ ೨ : ಈ ಸಜ್ಜನ ಸತ್ಪುರುಷ ಸದ್ಭಕ್ತ ಶಿರೋಮಣಿ ಬಸವಣ್ಣೋರಿಂದ ಜನಾನುರಾಗ ಸ್ಥಾಪನೆ ಯಾಗ್ತದೆ. ಅದು ತನ್ನ ಅರಸೊತ್ತಿಗೆಗೆ ಅಡಿಪಾಯವಾಗ್ತದೆ ಅಂತ ಬಿಜ್ಜಳ ಮಹಾರಾಜರು ಲೆಕ್ಕ ಹಾಕಿದ್ದರು.

ಓಲಗದವ ೩ : ಆದರೆ ಇಂಥ ಸಜ್ಜನ ಶಿರೋಮಣಿ ನಿರುಪದ್ರವಿ ಪ್ರಾಣಿ ದಂಡ ನಾಯಕನಾಗಿರವದರಿಂದೇ ಯಾರ್‍ಯಾರಿಗೂ ಅಂಜಿಕೆ ಉಳಿದಿಲ್ಲ.

ಎಲ್ಲಾರೂ ತಮ್ಮ ತಮ್ಮ ಅಧಿಕಾರ ಮೀರಿ ಅದರ ಪ್ರಯೋಜನ ಪಡೆಯಲು ನೋಡ್ತಾ ಇದ್ದಾರೆ.

ಓಲಗದವ ೧ : ಬಸವಣ್ಣೋರ ಹೋದರ ಆ ಸ್ಥಾನಕ್ಕೆ ತಾವು ಬರಬೇಕೆಂದು ಕಾದು ಕೂತವರ ತಂತ್ರ ಒಂದು ಕಡೆ ಹೊಸೀತಾ ಇದೆ.

ಓಲಗದವ ೨ : ಅವರಲ್ಲೂ ಮತ್ತೆ ಸ್ಪರ್ಧೆ.

ಓಲಗದವ ೩ : ಅಂತೂ ಮೇಲುನೋಟಕ್ಕಾದರೂ ಅವರಿಗೆಲ್ಲ ಒಂದೇ ಗುರಿ ಅಂತ ತೋರಿಸ್ತಾರೆ. ಅದಂದರೆ ಬಸವಣ್ಣ ಹೋಗಬೇಕು. ಮನೀಗ್ಯರೆ ಹೋಗಲಿ, ಎಲ್ಲರೆ ಹೋಗಲಿ. ಒಟ್ಟ, ಅಧಿಕಾರ ಬಿಡಲಿ ಅಂತ ಹವಣಿಕೆ.

ಓಲಗದವ ೧ : ಈ ತಂತ್ರಗಳು ಆಡಳಿತದಲ್ಲಿ ಇದ್ದುಕೊಂಡೇ ಆಡಳಿತ ಶಿಥಿಲಗೊಳಿಸುತ್ತಿರುವ ಹುಳಗಳು.

ಓಲಗದವ ೩ : ಇದರ ಪರಿಣಾಮವಾಗಿ ಸಾಮಾನ್ಯ ಜನಜೀವನವೂ ಶಿಥಿಲವಾಗಿದೆ.

ಓಲಗದವ ೧ : ಮೇಲ್ನೋಟಕ್ಕೆ ಎಲ್ಲಾರೂ ನೀತಿ, ನೇಮ, ಧರ್ಮ, ಸದಾಚಾರ ಅಂತ ಬಾಯಿಂದ ಅನ್ನುವುದು ಒಳಗೊಳಗೇ ಸ್ವಾರ್ಥಸಾಧನೆಗೆ ಪ್ರಯತ್ನಿಸುವುದು ನಡೆದಿದೆ.

ಓಲಗದವ ೨ : ಇದನ್ನು ನೋಡಿಯೂ ರಾಜ ಏನು ಮಡ್ತಾ ಇಲ್ಲ. ಇದಕ್ಕೇನನ್ನಬೇಕು ?

ಓಲಗದವ ೩ : ಈಗೀಗ ಮಗ ಸೋವಿದೇವರನ್ನು ಆಡಳಿತ ವಿಚಾರದಲ್ಲಿ ರಾಜ ತನ್ನ ಹತ್ತಿರಕ್ಕೆ ತಗೋಳ್ತಿರೋದು ಕಂಡು ಬರ್ತಾ ಇದೆ.

ಓಲಗದವ ೧ : ಬಹುಶಃ ಅವನ್ನೇ ಯುವರಾಜನೆಂದು ನೇಮಿಸುವ ವಿಚಾರ ಇರಬೇಕು.

ಓಲಗದವ ೨ : ಉಳಿದ ಸ್ಪರ್ಧಿಗಳು ?

ಓಲಗದವ ೩ : ಒಂದೊಂದು ಕಡೆ ಸಾಮಂತರನ್ನಾಗಿ ಮಾಡೂದು. ಇದ್ದೇ ಇದೆಯಲ್ಲ ಪರಂಪರೆ !

ಓಲಗದವ ೩ : ಅಲ್ಲಿ ರಾಜನ ಕೇಂದ್ರಿಕೃತ ಆಡಳಿತ ಸೂತ್ರಗಳು ರಾಜ ಯುವರಾಜ ಎಂಬ ರೂಪದಲ್ಲಿ ಟಿಸಲೊಡೆಯುತ್ತಿದ್ದಂತೆ ಈ ದಂಡನಾಯಕರ ವಿಚಾರದಲ್ಲೂ ಆಗುತ್ತಿರುವಂತಿದೆ.

ಓಲಗದವ ೨ : ಹೌದು, ಅಂದ ಹಾಗೆ ಈಗ ಚೆನ್ನಬಸವಣ್ಣನ ಮಹತ್ವ ಹೆಚ್ಚ ತೊಡಗಿದೆ. ಅವರ ಶರಣರ ಪ್ರಪಂಚದಲ್ಲಿ ಅವನ ಮಹತ್ವ ಹೆಚ್ಚುತ್ತಿದ್ದಂತೆ ಅತನೇ ಚಿಕ್ಕ ದಣ್ಣಾಯಕನಾಗಿ ಸಿದ್ಧವಾಗುತ್ತಿದ್ದು

ಬಸವಣ್ಣನ ಕೈ ಬಲ ಪಡಿಸಲಿಕ್ಕೋ ಉತ್ತರಾಧಿಕಾರಿ ಯಾಗಲಿಕ್ಕೋ ಕಾದಿರುವಂತಿದೆ.

ಓಲಗದವ ೩ : ಇದನ್ನ ತಪ್ಪಿಸಬೇಕೆನ್ನುವವರು ಈ ಹೊಂಚುಗಳನ್ನು ಕೆಡಿಸಲು ಆಡಳಿತದಲ್ಲೇ ಇದ್ದುಕೊಂಡು ಪ್ರತಿರೋಧವನ್ನು ನಿರ್ಮಿಸುತ್ತಿದ್ದಾರೆ.

ಓಲಗದವ ೧ : ಆದರೆ ಇದಕ್ಕಾಗಿ ಅವರು ಕೊಲೆ ಪಾತಕಿಗಳನ್ನು ಅಪರಾಧಿಗಳನ್ನು ಹತ್ತಿರ ಮಾಡಿಕೊಳ್ಳಲಿಕ್ಕೆ ಹೇಸದಿರೋದು ಒಳ್ಳೇ ಬೆಳವಣಿಗೆ ಏನಲ್ಲ.

ಓಲಗದವ ೨ : ಹತೋಟಿ ತಪ್ಪಿದ ರಾಕ್ಷಸ ತನ್ನನ್ನು ಬಿಡುಗಡೆ ಮಾಡಿದವನನ್ನೇ ಮೊದಲು ಮುಗಿಸುವನು.

ಓಲಗದವ ೩ : ಈ ಸ್ಥಿತಿಯಲ್ಲಿ ನಮ್ಮ ಪಾಲಿಗೆ ಬರೆ ಕಾದು ನೋಡೋದನ್ನು ಬಿಟ್ಟರೆ ಬೇರೇನೂ ಕೆಲಸವೇ ಇಲ್ಲ.

ಓಲಗದವ ೧ : ಕೆಲಸವಿಲ್ಲ ಯಾಕೆ ? ನೀವೂ ಬೇಕಾದರೆ ಯಾವದಾದರೂ ಗುಂಪಿಗೆ ಸೇರಿಕೊಳ್ಳಿ. ನಿಮಗೆ ಕೆಲಸ ಇರ್ತದೆ.

ಓಲಗದವ ೨ : ಮಹತ್ವಾಕಾಂಕ್ಷೆಯವರ ಹಾರಾಟ ಮೊದಲು ಮುಗೀಲಿ. ಆ ಮೇಲೆ ಗುಂಪು ಸೇರೋ ವಿಚಾರ ಮಾಡೋಣ.

ಓಲಗದವ ೩ : ಗೆದ್ದೆತ್ತಿನ ಬಾಲ ಹಿಡಿಯೋದು.

ಓಲಗದವ ೧ : ಅತ್ತ ಧಾರ್ಮಿಕ (ಎಲ್ಲರೂ ನಗುವರು) ದಲ್ಲೂ ಅಶಾಂತಿ ಬೇಳೀತಾನೇ ಇದೆ.

ಓಲಗದವ ೨ : ಧಾರ್ಮಿಕದವರ ಅಸಂತೋಷ ಏನಿದ್ದರೂ ಹೆಂಗಸರು ಬೆಟ್ಟು ಮುರಿದಂತೆ ಶಾಪ ಹಾಕುತ್ತ ಕೂಡುವಷ್ಟಕ್ಕೆ ಮಾತ್ರ ಬೆಳೆಯುವುದು.

ಓಲಗದವ ೩ : ಹೌದು, ಅವರು ಬರೆ ಮಾತಿನವರು, ಕರ್ಮ ಮಾಡುವವರಲ್ಲ, ಕೃತಿಗಿಳಿಯುವವರಲ್ಲ.

ಓಲಗದವ ೧ : ಹಂಗೇನೂ ನೀವು ತಿಳೀಬ್ಯಾಡ್ರಿ.

ಓಲಗದವ ೨ : ಬ್ರಾಹ್ಮಣರೂ ಶೈವಮಠಾಧೀಶರೂ ಸೇರಿಕೊಂಡು ಮೊನ್ನೆ ರಾಜರನ್ನು ಕಂಡು ಬಂದಿದ್ದಾರಂತೆ.

ಓಲಗದವ ೩ : ಆದರೆ ರಾಜರು ನಿಶ್ಚಿತ ಭರವಸೆಯನ್ನೇನೂ ಕೊಟ್ಟಿಲ್ಲ.

ಓಲಗದವ ೧ : ಈಗ ರಾಜರನ್ನು ಮೊದಲುಮಾಡಿಕೊಂಡು ಕಲ್ಯಾಣದ ಎಲ್ಲ ರಾಜಕಾರಣಿಗಳು ಎಂಥಾ ಕೃತಿಯನ್ನು ಮಾಡಲಿಕ್ಕೆ ಯೋಚಿಸುತ್ತಿದ್ದಾರೆಂದರೆ -

ಓಲಗದವ ೨ : ಆದರಿಂದ ಬಸವಣ್ಣೋರ ನೈತಿಕ ಆಂದೋಲನಕ್ಕೂ ಸುರಂಗ ಹತ್ತಬೇಕು. ಅರಸೋತ್ತಿಗೆಯಲ್ಲೂ ಬದಲಾವಣೆಯಾಗಬೇಕು.

ಓಲಗದವ ೩ : ಹೌದು ಅಷ್ಟೇ ಅಲ್ಲ ಆ ಕೃತಿಯಲ್ಲಿ ತಮ್ಮ ವಿರೋಧಿಗಳೆಲ್ಲ ಸಿಕ್ಕಹಾಕ್ಕೊಳ್ಳಬೇಕು. ತಾ ಮಾತ್ರ ಸುರಕ್ಷಿತವಾಗಿರಬೇಕು.

ಓಲಗದವ ೧ : ಅಂತ ಕೆಲಸ ಯಾವದು ?

ಓಲಗದವ ೨ : ಅದನ್ನೇ ಹುಡುಕ್ತಾ ಇದ್ದಾರೆ.

ಓಲಗದವ ೩ : ಇನ್ನು ಹೋಗೋಣ, ಬಹಳ ಸಮಯವಾಯಿತು.

(ಏಳುತ್ತಿರುವರು)

(ಕತ್ತಲೆ)

# ಅಂಕ - ೬

(ಮರೆಯಿಂದ)

ಹೀಗೊಂದು ಸುಂದರ ಕನಸು
ಕಲ್ಯಾಣದ ಪಟ್ಟಣದಲ್ಲಿ
ಹೂವಾಗಿ ಅರಳುತ್ತಿರಲು
ದುಂಬಿದಂಡು ಸುತ್ತುವರಿದು
ಭಂಗಪಡಿಸಿತಯ್ಯೊ ಅಕಟಾ
ಮುರಿಯಿತು ಮಂಟಪ
ಒಡೆಯಿತು ಕನಸು ॥

(ಬೆಳಕು ಚೆಲ್ಲಿದಾಗ ಜನರು ಗಾಬರಿಯಾಗಿ ಚೀರಾಡುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದಾರೆ)

(ಮರೆಯಿಂದ)

ವಿಪ್ಲವ ವಿಪ್ಲವ ವಿಪ್ಲವ ।
ವಿಪ್ಲವ ವಿಪ್ಲವ ವಿಪ್ಲವ ॥
ಅರಸನ ಮನೆಯೊಳು ವಿಪ್ಲವ ।
ಶರಣ ಸಮೂಹದಿ ವಿಪ್ಲವ ।
ಜನ ಜಂಗುಳಿಯಲಿ ವಿಪ್ಲವ ।
ಎಲ್ಲ ನೆಲೆಯಲಿ ವಿಪ್ಲವ ॥
ಕಲ್ಯಾಣ ನಗರದಿ ವಿಪ್ಲವ ।
ಭುಗಿಲೆಂದು ಎದ್ದಿದೆ ವಿಪ್ಲವ ।
ವಿಪ್ಲವ ವಿಪ್ಲವ ವಿಪ್ಲವ ॥

(ಹಲಗೆಯವನು ಹಲಗೆ ಬಾರಿಸುತ್ತ ಬರುವವನು. ಅವನ ಹಿಂದಿನಿಂದ ಡಂಗುರದವನು ಬರುವನು. ಜನರು ಅವರ ಸುತ್ತ ಬಂದು ನಿಲ್ಲುವರು)

ಡಂಗುರದವ : ಕೇಳ್ರಿಪೊ ಕೇಳ್ರಿ, ಕಲಚೂರ್ಯ ಕುಲಸೂರ್ಯ ಮಹಾಭುಜಬಲ ಚಕ್ರವರ್ತಿ ರಾಯ ಸಮುದ್ಧರಣ ಬಿಜ್ಜಳ ನೃಪರು ತಮ್ಮ ಸುಪುತ್ರ ಶ್ರೀ ಶ್ರೀ ಸೋವಿದೇವ ಅವರನ್ನು ಯುವರಾಜರೆಂದು ನೇಮಿಸಿದ್ದಾರೆ. ಇತ್ತೀಚೆಗೆ ರಾಜ್ಯದಲ್ಲಿ ತಲೆದೋರಿರುವ ಶಿಥಿಲತೆಯನ್ನು ಅಡಗಿಸಲು ಯುವರಾಜ ಸೋವಿದೇವರು, ರಾಜದ್ರೋಹಿಗಳೆಂದು ತಿಳಿದು ಬಂದ ಹಳ್ಳಯ್ಯ, ಮಧುವಯ್ಯರ ಕಣ್ಣು ಕೀಳಿಸಿ ಆನೆಯ ಕಾಲಿಗೆ ಕಟ್ಟಿ ಎಳಹೂಟೆ ಮಾಡಿಸಲು ಆಜ್ಞಾಪಿಸಿದ್ದಾರೆ. ಇವರಿಬ್ಬರೂ ಶಿವಶರಣರಿದ್ದರಂತೆ, ಅದಕ್ಕಾಗಿ ಬಸವಣ್ಣನವರು ಪದತ್ಯಾಗ ಮಾಡಿದ್ದಾರೆ. ಆದರು ಅವರ ಸ್ಥಳದಲ್ಲಿ ಅವರ ಅಳಿಯಂದಿರೇ ಆದ ಚೆನ್ನಬಸವಣ್ಣನವರನ್ನು ನಿಯಮಿಸಲಾಗಿದೆ. ಬಸವಣ್ಣನವರ ಮೇಲೆ ಯಾವುದೇ ಆರೋಪಗಳಿಲ್ಲ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ನ್ಯಾಯವನ್ನು ಪ್ರತಿಷ್ಠಾಪಿಸಲು, ಪ್ರಜೆಗಳಲ್ಲಿ ನೆಮ್ಮದಿಯ ಭಾವನೆ ಮೂಡಿಸಲು ಹಾಗೂ ಪರಿಸ್ಥಿತಿಯನ್ನು ನಿಯಂತ್ರಿಸಲು ರಾಜದ್ರೋಹಿಗಳನ್ನು ದಂಡಿಸುವ ಉಗ್ರಕ್ರಮವನ್ನು ನಿಷ್ಠುರವಾಗಿ ಕೈಗೊಳ್ಳಲಾಗಿದೆ. ಆದ್ದರಿಂದ ಪ್ರಜೆಗಳು ಈ ಕುರಿತು ತಮ್ಮ ತಮ್ಮಲ್ಲೇ ತರ್ಕಕುತರ್ಕಗಳನ್ನು ಮಂಡಿಸಿ ಅಪಾರ್ಥಕ್ಕೆ ಎಡೆಕೊಡಬಾರದು. ವದಂತಿಗಳಿಗೆ ಕಿವಿಗೊಡಬಾರದು, ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದು ರಾಜಾಜ್ಞೆಯಾಗಿದೆ. ರಾಜಾಜ್ಞೆಯನ್ನು ಉಲ್ಲಂಘಿಸಲು ಯಾರಾದರೂ ಪ್ರಯತ್ನಿಸಿದರೆ ಅವರ ವಿರುದ್ಧ ನಿರ್ದಾಕ್ಷಿಣ್ಯದ ಕ್ರಮಕೈಗೊಳ್ಳಲಾಗುವುದು. ಇದನ್ನು ತಿಳಿದುಕೊಂಡು ಪ್ರಜೆಗಳು ಶಾಂತಿಯಿಂದ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡು ಇರಬೇಕ್ರಪೊ. (ಹಲಗೆ ಬಾರಿಸುತ್ತ ಡಂಗುರದವರು ಹೋಗುವರು ಜನರೂ ತಮ್ಮ ಎಡೆಗಳಿಗೆ ಹೋಗುವರು.)

(ಕತ್ತಲೆ)

ಮರೆಯಿಂದ)

ಭುಗಿಲೆಂದೆದ್ದಿದೆ ವಿಪ್ಲವ ।
ವಿಪ್ಲವ ವಿಪ್ಲವ ವಿಪ್ಲವ ॥

(ಬೆಳಕು ಚೆಲ್ಲಿದಾಗ ಶರಣ ಸಮೂಹ ಕಾಣವದು. ಚೆನ್ನಬಸವಣ್ಣ ಮಧ್ಯದಲ್ಲಿ ಕೂತಿದ್ದಾನೆ. ಅವನ ಹಿಂದೆ ಅಕ್ಕ ನಾಗಮ್ಮ, ನೀಲಮ್ಮ ಮತ್ತಿತರ ಶರಣೆಯರು ನಿಂತಿದ್ದು, ಮುಂದೆ ಶ್ವಪಚಯ್ಯ, ಕಕ್ಕಯ್ಯ, ಚೆನ್ನಯ್ಯ ಮೊದಲಾದ ಶರಣರು ನೆರೆದಿದ್ದಾರೆ. ಎಲ್ಲರೂ ಚಿಂಗಾಮಗ್ನರಾಗಿದ್ದಾರೆ.)

ಕಕ್ಕಯ್ಯ : ಚಿಕ್ಕದಣ್ಣಾಯಕರೆ, ನಾವು ಈಗ ಏನು ಮಾಡೋಣ ?

ಚೆನ್ನಯ್ಯ : ಅಲ್ಲಮ ಪ್ರಭುಗಳು ಶ್ರೀಶೈಲದತ್ತ ಹೋದರು.

ನಾಗಮ್ಮ : ಅಣ್ಣ ಬಸವಣ್ಣೋರು ಸಂಗಮಕ್ಕೆ ಹೋದರು.

ನೀಲಮ್ಮ : ಹಿರಿಯರಾರೂ ಉಳಿದಿಲ್ಲ. ಆದರಿಂದ ಈಗ ಚಿಕ್ಕದಣ್ಣಾಯಕ ಚೆನ್ನ ಬಸವಣ್ಣನವರೇ ಶರಣರಿಗೆ ಮಾರ್ಗದರ್ಶನ ಮಾಡಬೇಕು.

ಚೆನ್ನಬಸವಣ್ಣ : ಇಂಥ ವಿಪ್ಲವ ಸ್ಥಿತಿಯಲ್ಲಿ ಪ್ರಾಣ ರಕ್ಷಣೆಗಿಂತ, ಪ್ರಾಣಕ್ಕಿಂತ ಮಿಗಿಲಾದ ವಚನರಾಶಿಯನ್ನು, ಸಾಹಿತ್ಯವನ್ನು, ಜ್ಞಾನನಿಧಿಯನ್ನು ಸುರಕ್ಷಿತವಾಗಿ ಕಾಪಾಡುವುದು ಬಲು ಮುಖ್ಯವಾದುದು.

ಕಕ್ಕಯ್ಯ : ನೀವು ಆಜ್ಞೆ ಮಾಡಿ, ಪ್ರಾಣ ಕೊಟ್ಟಾದರೂ ಗ್ರಂಥ ಸಂರಕ್ಷಣೆ ನಾವು ಮಾಡುವೆವು. ಖಡ್ಗ ಧರಿಸುವದನ್ನು ನಾವೇನೂ ಮರೆತಿಲ್ಲ. ಮತ್ತೆ ಟೊಂಕ ಕಟ್ಟಿ ಖಡ್ಗ ಓಡಿದುಕೊಂಡು ವೀರಗಾಸೆ ಹಾಕಿ ಯುದ್ಧ ಮಾಡಲಿಕ್ಕೂ ಬೇಕಾದರೆ ನಾವು ಸಿದ್ಧರು.

ತುಕಾ : ತಾವು ದಣ್ಣಾಯಕರೇ ಇರೋದರಿಂದ ಆಜ್ಞಾಪಿಸೋ ಹಕ್ಕು ತಮಗಿದೆ.
(ಎಲ್ಲ ಶರಣರು ಹೌದೆಂದು ಎನ್ನುವರು)

ಚೆನ್ನಬಸವಣ್ಣ : ಖಡ್ಗ ಯಾರ ವಿರುದ್ಧ ಎತ್ತುವಿರಿ ?

ಕಕ್ಕಯ್ಯ : ವಚನ ಸಾಹಿತ್ಯ ರಾಶಿಗೆ ಕೈ ಹಚ್ಚಲಿಕ್ಕೆ ಬರುವವರ ವಿರುದ್ಧ.

ಚೆನ್ನಬಸವಣ್ಣ : (ನಸುನಕ್ಕು) ಅವರು ಹಾಗೆ ಬರುವುದಿಲ್ಲ. ಮೊದಲು ನಿಮ್ಮನ್ನು ಒಬ್ಬಬ್ಬರನ್ನು ದಂಡಿಸಿ ಸಂಹರಿಸಿ ಆಮೇಲೆ ಗ್ರಂಥಾಲಯಕ್ಕೆ ಬೆಂಕಿ ಇಡ್ತಾರೆ. ಇತಿಹಾಸದುದ್ದಕ್ಕೂ ನಡೆದದ್ದು ಹೀಗೆ.

ಕಕ್ಕಯ್ಯ : ಹಾಗಾದರೆ ನಾವು ಏನು ಮಾಡಬೇಕು ?

ಚೆನ್ನಬಸವಣ್ಣ : ಎಲ್ಲ ಶರಣರು ಕೂಡಲೆ ಸಾಧ್ಯವಿದ್ದಷ್ಟು ವಚನಗ್ರಂಥಗಳನ್ನು ಗಂಟು ಕಟ್ಟಿಕೊಂಡು ಒಬ್ಬಬ್ಬರು ಒಂದೊಂದು ದಿಕ್ಕಿಗೆ ಹೋಗಬೇಕು.

ಕಕ್ಕಯ್ಯ : ನನ್ನ ಪಾಲಿನ ರಾಶಿ ನನಗೆ ಕೊಡ್ರಿ, ನಮ್ಮ ತುಕಾನಿಗೂ ಒಂದಿಷ್ಟು ಗಂಟು ಕಟ್ಟಿಕೊಡ್ರಿ. ನಮ್ಮಾಕೆಗೂ ಒಂದು ಗಂಟು ಕೊಡ್ರಿ, ನಾವು ಎಲ್ಲಿ ಒಯ್ದು ಇವನ್ನು ಇಟ್ಕೊಂಡು ಇರಬೇಕು ಹೇಳ್ರಿ. ನೀವು ಬರೋವರೆಗೆ ಅಲ್ಲಿ ಅವನ್ನು ಕಾಪಾಡಿಕೊಂಡು ಇರೋದು ನಮ್ಮ ಭಾರ. ಜಟಾಯುವಿನಂತಾದರೂ ನಾವು ಪ್ರಾಣ ಇಟ್ಟುಕೊಂಡು ನೀವು ಬಂದು ಅವನ್ನು ತೆಗೆದುಕೊಳ್ಳೋವರೆಗೆ ಕಾಪಾಡ್ತೇವೆ.

ಚೆನ್ನಬಸವಣ್ಣ : ಕಕ್ಕಯ್ಯನೋರೆ, ಒಂದೊಂದು ದಿಕ್ಕಿಗೆ ಅಂದರೆ ನಾವು ಎಲ್ಲಾರೂ ದಿಕ್ಕೋಪಾಲಾಗಿ ಓಡಬೇಕೆಂದಲ್ಲ. ನನ್ನ ಮುಂದೆ ಒಂದು ವಿಚಾರವಿದೆ. ನಿಮಗೆಲ್ಲ ಒಪ್ಪಿಗೆಯಾ ನೋಡ್ರಿ.

ಚೆನ್ನಯ್ಯ : ಹೇಳ್ರಿ.

ಚೆನ್ನಬಸವಣ್ಣ : ನಾವು ಕೆಲವರು ಉಳಿವಿಯ ಕಡೆ ಹೋಗೋಣ. ಇನ್ನು ಕೆಲವರು ಶ್ರೀಶೈಲಕ್ಕೆ ಹೋಗಲಿ.

ಚೆನ್ನಯ್ಯ : ಉಳಿವಿಯ ಕಡೆ ರಕ್ಷಣೆ ಸಿಗುವದೆ ?

ಚೆನ್ನಬಸವಣ್ಣ : ಕದಂಬರಾಜರು ಆಶ್ರಯ ಕೊಡಬಹುದು. ಅತ್ತ ಕಾಕತೀಯರ ರಾಜರೂ ಆಶ್ರಯ ಕೊಡಬಹುದು. ಅಂತೂ ಇನ್ನು ಈ ಸ್ಥಳ ನಾವು ಬಿಡಬೇಕೆಂಬುದು ಸುನಿಶ್ಚಿತ. ಯೋಚಿಸಲು ಸಮಯವಿಲ್ಲ. ಹೊರಡೋಣ. ಸಿದ್ಧತೆಗೆ ತೊಡಗೋಣ. ಎಲ್ಲರೂ ವೀರ ಶರಣರಾಗಿರಿ. ಶಸ್ತ್ರ ಸನ್ನದ್ಧರಾಗಿರಿ. ಶರಣರ ಶಸ್ತ್ರ ಧಾರಣೆ ಆಕ್ರಮಣಕ್ಕಾಗಿ ಅಲ್ಲ. ವಚನರಾಶಿ ರಕ್ಷಣೆಗಾಗಿ, ನಮ್ಮೋರ ರಕ್ಷಣೆಗಾಗಿ ಎಂಬುದನ್ನು ಮರೆಯದಿರಿ.

(ಎಲ್ಲ ಶರಣರು ಆಗಲಿ ಆಗಲಿ ಎನ್ನುತ್ತ ಅತ್ತಿತ್ತ ಹೊರಡುವರು. ಮತ್ತೆ ಬರುವರು.)

ಚೆನ್ನಬಸವಣ್ಣ : ಮತ್ತೇನು ಚಿಂತೆ ?

ಕಕ್ಕಯ್ಯ : ಯಾರಾರು ಯಾವ ಕಡೆ ಹೋಗಬೇಕೆಂಬುದನ್ನು ಹೇಳಿಯೇ ಬಿಡ್ರಿ.

ಚೆನ್ನಬಸವಣ್ಣ : ನಾನು ನಮ್ಮಮ್ಮ ನಾಗಾಯಿ, ಮಡಿವಾಳ ಮಾಚಿದೇವ, ಹಡಪದ ರೇಚಣ್ಣ, ನುಲಿಯ ಚೆಂದಯ್ಯ, ಡೋಹರ ಕಕ್ಕಯ್ಯ, ಕೂಗಿನ ಮಾರಿ ತಂದೆ, ಸೊಡ್ಡಳ ಬಾಚರಸರು, ಕಿನ್ನರಿ ಬೊಮ್ಮಯ್ಯ, ರುದ್ರಮುನಿ ಇಷ್ಟು ಜನ ಉಳವಿಯತ್ತ ಹೋಗೋಣ. ಉಳಿದವರಲ್ಲಿ ನಮ್ಮೊಂದಿಗೆ ಬರಬೇಕೆನ್ನಿಸುವವರು ನಮ್ಮೊಂದಿಗೆ ಬರಲಿ, ಬಾಕೀಯವರು ಶ್ರೀಶೈಲದತ್ತ ಹೋಗುವ ಗಂಪನ್ನು ಸೇರಲಿ.

(ಶರಣರು ಹೋಗುವರು.) ತಾಯಂದಿರೆ, ನೀವೂ ಸಿದ್ಧರಾಗಿರಿ. (ಎಲ್ಲರೂ ಅತ್ತಿತ್ತ ಹೋಗುವದು.)

(ಡಂಗುರದವರು ಬರುವರು. ಜನರು ಬಂದು ಅವರ ಸುತ್ತ ನಿಲ್ಲುವರು.)

ಡಂಗುರದವ : (ಹಲಗೆಯನ್ನು ನಿಲ್ಲಿಸಿ ಕೇಳ್ರಪೊ ಕೇಳ್ರಿ, ಬಿಜ್ಜಳ ನೃಪರು ಅರಸೊತ್ತಿಗೆಯ ಭಾರ ಶ್ರೀ ಶ್ರೀ ಸೋವಿದೇವರಿಗೆ ಒಪ್ಪಿಸಿ ವಿಶ್ರಾಂತಿ ಪಡೆಯಲಿರುವದಾಗಿ ತಿಳಿಸಿ ಆಜ್ಞೆ ಹೊರಡಿಸಿರುವರು. ಆದರೆ ಅಷ್ಟರಲ್ಲಿ ಅರಮನೆಯಲ್ಲೇ ಅವರ ಕೊಲೆಯಾಗಿದೆ. ಅಪರಾಧಿಗಳನ್ನು ಕಂಡು ಹಿಡಿಯುವ ಕಾರ್ಯ ನಡೆದಿದೆ. ಇನ್ನೂ ನಿಶ್ಚಿತ ಸುಳಿವು ಸಿಕ್ಕಿಲ್ಲ. ಇಂಥ ದುಃಖದಲ್ಲೂ ಶ್ರೀ ಶ್ರೀ ಸೋವಿದೇವರು ಸುಮ್ಮನಿರಲಾಗದೆಂದು ಪಟ್ಟಾಭಿಷಿಕ್ತರಾಗಿ ರಾಜ್ಯಭಾರನ್ನು ಸ್ವೀಕರಿಸಿದ್ದಾರೆ. ಆದರೆ ಚೆನ್ನಬಸವಣ್ಣನವರೂ ದಂಡನಾಯಕ ಪದವಿಯನ್ನು ತ್ಯಾಗ ಮಾಡಿರುವುದಾಗಿ ತಿಳಿಸಿ, ರಾಜ ಭಟರೊಂದಿಗೆ ತ್ಯಾಗ ಪತ್ರವನ್ನು ಕಳಿಸಿದ್ದಾರೆ. ಪ್ರತ್ಯಕ್ಷ ಭೆಟ್ಟಿಯಾಗಿ, ಮಾತಾಡಿ ತಮ್ಮ ಆತಂಕವೇನಿದ್ದರೂ ವಿವರಿಸಿ ಚೆನ್ನಬಸವಣ್ಣನವರು ಪದತ್ಯಾಗ ಮಾಡಬೇಕಿತ್ತು. ಹಾಗೆ ಮಾಡದೆ ರಾಜಸಿಂಹಾಸನ್ಕೆ ಅಪಮಾನ ಮಾಡಿದ್ದಾರೆ. ಭಟರೊಂದಿಗೆ ತ್ಯಾಗಪತ್ರ ಕಳಿಸಿರುವದು ಸರಿಯಲ್ಲ. ಆದ್ದರಿಂದ ಅವರು ಎಲ್ಲಿದ್ದರೂ ಬಂದು ಮಹಾರಾಜ ಸೋವಿದೇವರೊಂದಿಗೆ ಮಾತಾಡಬೇಕೆಂದು ಈ ಮೂಲಕ ಆದೇಶ ನೀಡಲಾಗಿದೆ. ಶರಣರ ಮೇಲಾಗಲಿ, ದಂಡನಾಯಕರ ಮೇಲಾಗಲಿ ನಮಗೆ ಯಾವದೇ ದ್ವೇಷವಿಲ್ಲ. ಹೀಗಿದ್ದರೂ ಈ ರೀತಿ ಅವರು ಗುಪ್ತವಾಗಿ ಪಲಾಯನ ಗೈದಿರುವದು ವಿನಾಕಾರಣ ಸಂಶಯಕ್ಕೆ ಆಸ್ಪದ ನೀಡಿದೆ. ಆದ್ದರಿಂದ ಇನ್ನೂ ಈ ಮೂಲಕ ಪ್ರಕಟವಾಗಿ ಅವರಿಗೆ ಸೂಚನೆ ನೀಡಲಾಗಿದೆ. ಅವರು ಮಹಾರಾಜರನ್ನು ಭೆಟ್ಟಿಯಾಗಿ ಮಾತನಾಡಿ ವಿಷಯವನ್ನು ತೀರ್ಮಾನಿಸಬೇಕೆಂದೂ ಕೇಳಿಕೊಳ್ಳಲಾಗಿದೆ. ಪ್ರಜೆಗಳೂ ಈ ಅನಿರೀಕ್ಷಿತ ಆಘಾತಗಳಿಂದ ಗಾಬರಿಯಾಗದೆ ಶಾಂತಿಯನ್ನು ಕಾಪಾಡಿಕೊಂಡು ಬರಬೇಕು. ರಾಜ್ಯದ ಗಡಿ ದಾಟಲು ಯಾರೂ ಪ್ರಯತ್ನಿಸಬಾರದು. ಶಿವಶರಣರ ಸುಳಿವು ತಿಳಿದವರು ಅರಮನೆಗೆ ಆ ವಿಷಯವನ್ನು ತಿಳಿಸಬೇಕು. ಅವರನ್ನು ಸೂಕ್ತವಾಗಿ ಬಹುಮಾನಿಸಿ, ಗೌರವಿಸಲಾಗುವುದು. ಶರಣರು ಸ್ವತಃ ಬಂದು ಅರಮನೆಗೆ ತಮ್ಮನ್ನು ಒಪ್ಪಿಸಿದರೆ ಅವರನ್ನು ಕ್ಷಮಿಸಲಾಗುವುದು. ನಗರದ ಪ್ರವೇಶವನ್ನು ನಿಯಂತ್ರಿಸಿದ್ದರೂ ಸುಳಿವು ನೀಡುವವರಿಗೆ ಭಟರ ರಕ್ಷಣೆಯಲ್ಲಿ ಅರಮನೆಗೆ ಕರೆತರಲಾಗುವದು. ಯಾರಿಗೂ ನಗರದ ಹೊರಗೆ ಹೋಗಬೇಕಾದರೆ ಅವರು ಅರಮನೆಯಿಂದ ಪೂರ್ವಾನುಮತಿ ಪಡೆಯಬೇಕು. ರಾಜ್ಯದ ಗಡಿಗಳನ್ನು ಕಟ್ಟಾಳುಗಳು ಕಾಯುತ್ತಿರುವುದರಿಂದ ಅಲ್ಲಿ ಹೊರಗಿನವರು ಪ್ರವೇಶಿಸಿ ರಾಜ್ಯದ

ಶಾಂತಿಯನ್ನು ಕದಡುವ ಸಾಧ್ಯತೆ ಇಲ್ಲ. ಮಹಾರಾಜ ಶ್ರೀ ಶ್ರೀ ಸೊವಿ ನೃಪಲಾರು, ಪರಿಸ್ಥಿತಿಯನ್ನು ನಿಷ್ಠುರವಾಗಿ ನಿಭಾಯಿಸುತ್ತಾರೆ. ಆದ್ದರಿಂದ ಜನರು ಗಾಬರಿಯಾಗದೆ ಶಾಂತಿಯಿಂದ ಇರಬೇಕು. ಹಾಗೂ ನ್ಯಾಯ ಸುವ್ಯವಸ್ಥೆ ಕಾಪಾಡುವಲ್ಲಿ ಆಡಳಿತಕ್ಕೆ ನೆರವಾಗಬೇಕೆಂದು ಈ ಮೂಲಕ ಆದೇಶ ನೀಡಲಾಗಿದ್ರಪ್ಪೊ, ಕೇಳಿರಿ.

(ಹಲಗೆಯವನೊಂದಿಗೆ ಡಂಗುರದವನ ನಿಷ್ಕ್ರಮಣ, ಜನರು ಚೆದುರುವರು.)

(ಮರೆಯಿಂದ)

ವಿಪ್ಲವ ವಿಪ್ಲವ ವಿಪ್ಲವ ।
ಭುಗಿಲೆಂದೆದ್ದಿದೆ ವಿಪ್ಲವ ॥

(ವೀರಗಾಸೆಯ ಶಸ್ತ್ರಧಾರಿ ಶಿವಶರಣರ ಪ್ರವೇಶ. ಎಲ್ಲ ಶರಣ ಶರಣೆಯರ ತಲೆಗಳ ಮೇಲೂ ಗ್ರಂಥಗಳ ಗಂಟುಗಳಿವೆ.)

ನಾಗಮ್ಮ : ಚೆನ್ನಬಸವಣ್ಣ, ಈ ಸ್ಥಳ ಶಾಂತವಾಗಿ ಕಾಣ್ತದೆ. ಇಲ್ಲಿ ತಂಗಿ ರಾತ್ರಿ ಕಳೆದು ಬೆಳಗಿನ ಜಾವ ಮುಂದೆ ಹೋಗೋಣ.

ಕಕ್ಕಯ್ಯನ ಹೆಂಡತಿ : ಮಲಪ್ರಭಾ ನದಿಗೆ ಬರೋವರೆಗೆ ಯುದ್ಧಗಳೇನೂ ಆಗಲಿಲ್ಲ.

ತುಕಾ : ಭೀತಿ ಏನೊ ಇತ್ತು.

ಚೆನ್ನಬಸವಣ್ಣ : ಅಲ್ಲಿ ಬಿಜ್ಜಳ ರಾಜ್ಯದ ಗಡಿ. ಗಡಿ ದಾಡುವಾಗಲೇ ಅವರಿಗೇ ನಾವು ಸಿಕ್ಕಿದ್ದು, ಅಲ್ಲಿಯವರೆಗೆ ನಮ್ಮ ಸುಳಿವು ನೀಡುವ ಪ್ರಜೆಗಳಾರೂ ಇರಲಿಲ್ಲ. ಯಾಕೆಂದರೆ ಶರಣರ ಕೇಡನ್ನು ಬಗೆಯುವ ಪ್ರಜೆಗಳು ಈ ರಾಜ್ಯದಲ್ಲಿಲ್ಲ. ಅದಕ್ಕೆ ಗಡಿಯಿಂದೇ ಬೆನ್ನಟ್ಟೋದು ಸುರುವಾಯಿತು.

ಕಕ್ಕಯ್ಯ : ದಣ್ಣಾಯಕರೆ, ಏನೊ ಗುಸು ಗುಸು ಸಪ್ಪಳ ಕೇಳಿ ಬರ್ತದೆ.
(ಎಲ್ಲರೂ ಗಾಬರಿಯಾಗಿರಲು ನಾಲ್ಕಾರು ಜನ ಸೈನಿಕರು ತಾವು ಅವಿತು ಕೊಂಡಿದ್ದ ಸ್ಥಳಗಳಿಂದ ಮುಂದೆ ಬರುವರು)

ಸೈನಿಕ ೧ : ಇಲ್ಲಿದ್ದಾರೆ.

ಸೈನಿಕ ೨ : ಯಾರು ನೀವು ?

ಚನ್ನಬಸವಣ್ಣ : ದಾರಿಹೋಕರು.

ಸೈನಿಕ ೩ : ಎಲ್ಲಿ ಹೊರಟಿದ್ದೀರಿ ?

ಚನ್ನಬಸವಣ್ಣ : ದಕ್ಷಿಣಕ್ಕೆ.

ಸೈನಿಕ ೪ : ಎಲ್ಲಿಂದ ಬಂದಿರಿ ?

ಕಕ್ಕಯ್ಯ : ನಾವೂ ದೇಶಾಂತರಿಗಳು. ಭಣಂಗ ಜೋಗಿಗಳು.

ಸೈನಿಕ ೫ : ಈ ಮುದುಕ ಬಹಳ ಮಾತಾಡ್ತಾನೆ. ಇವರ ಹತ್ತಿರ ಗಂಟು ಬಿಚ್ಚಿ ನೋಡ್ರಿ.

ಕಕ್ಕಯ್ಯ : ಒಂದು ಹೆಜ್ಜೆ ಮುಂದೆ ಇಟ್ಟರ ನಿಮಗ ಕೂಡಲ ಸಂಗನ ಆಣೆಯಾಗಿದೆ.

ಸೈನಿಕ ೬ : ಇವರು ಶರಣರೇ, ರಾಜಾಜ್ಞೆಯಂತೆ ನಮಗೆ ಬೇಕಾದವರೇ. ಇವರ್ನ ಹಿಡೀರಿ.

(ಶರಣರು ಶಸ್ತ್ರ ಹಿಡಿದು ನಿಲ್ಲುವರು, ಸ್ತ್ರೀಯರು ಗಾಬರಿಯಾಗಿ ಒಂದು ಕಡೆಗೆ ನಿಲ್ಲುವರು ಸೈನಿಕರೊಂದಿಗೆ ಶರಣರ ಯುದ್ಧ ಖಡ್ಗವಾಡಿಸುತ್ತ ಒಮ್ಮೆ ಶರಣರು ಸೈನಿಕರನ್ನು ಮರೆಗೆ ಒಯ್ಯುವರು, ಇನ್ನೊಮ್ಮೆ ಸೈನಿಕರು ಮೇಲುಗೈಯಾಗಿ ಶರಣರನ್ನು ಹಿಂದೊತ್ತಿ ಮರೆಗೆ ಒಯ್ಯುವರು. ಹೀಗಿರಲು ಮತ್ತಷ್ಟು ಶರಣರು ಬರುವರು. ಶಂಭೋ ಹರಹರ ಮಹಾದೇವ ಘೋಷಣೆಯಿಂದ ಯುದ್ಧ ಮುಂದುವರಿಯುವುದು. ಒಬ್ಬಬ್ಬನೇ ಸೈನಿಕರು ಉರುಳುವರು. ಮತ್ತೆ ಕೆಲ ಸೈನಿಕರು ಬರುವರು. ಸತ್ತವರನ್ನು ಕಂಡು ಹಿಂಜರಿಯುವರು. ಕಕ್ಕಯ್ಯನಿಗೆ ಹೆಗಲಿಗೆ ಮತ್ತು ತೊಡೆಗೆ ಗಾಯವಾಗಿರುವುದು.)

ಚೆನ್ನಬಸವಣ್ಣ : ಕಕ್ಕಯ್ಯನವರಿಗೆ ಹೆಚ್ಚು ಗಾಯವಾಗಿದೆ.

(ಶರಣರು ಪ್ರಥಮೋಚಾರ ಮಾಡಿ ಕಕ್ಕಯ್ಯನಿಗೆ ಪಟ್ಟಿ ಕಟ್ಟುವರು.)

ಕಕ್ಕಯ್ಯ : ಇರಲಿ, ಈ ಗಾಯಕ್ಕಾಗಿ ಮನಸ್ಸು ನೋಯೋ ಬದಲು ಹೆಮ್ಮೆ ಪಡ್ತದೆ.

ಚೆನ್ನಬಸವಣ್ಣ : ಶರಣರೆ, ಈ ಸ್ಥಳ ಮುಂದೆ ಕಾದಿದ ಹಳ್ಳಿ ಅಥವಾ ಕಾದಿದವರ ಹಳ್ಳಿ, ಕಾದರೊಳ್ಳಿ ಎಂದು ಪ್ರಖ್ಯಾತವಾಗುವದು. ಮತ್ತು ಇತಿಹಾಸದ ಈ ಪುಟವನ್ನು ಅಜರಾಮರಗೊಳಿಸುವದು.

(ನಿಷ್ಕ್ರಮಣ)

(ಮರೆಯಿಂದ)

ವಿಪ್ಲವ ವಿಪ್ಲವ ವಿಪ್ಲವ ।<br>
ಭುಗಿಲೆಂದೆದ್ದಿಹ ವಿಪ್ಲವ ॥

(ಬೆಳಕು ಚೆಲ್ಲಿದಾಗ ಮತ್ತೆ ಶರಣರ ಪ್ರವೇಶ. ಹಿಂದಿನ ದೃಶ್ಯದಲ್ಲಿ ಬಂದಂತೆ)

ಕಕ್ಕಯ್ಯ : ಬನ್ನಿ ಇಲ್ಲಿ ಕೆರೆ ಇದೆ. ವಿಶಾಲವಾದ ಬಯಲಿದೆ. ಇಲ್ಲೇನೂ ಭಯ ಇಲ್ಲ. ಈ ದೊಡ್ಡ ಮರದ ಕೆಳಗೆ ವಿಶ್ರಾಂತಿ ತಗೊಳ್ಳೋಣ. ಆಮೇಲೆ ಮುಂದೆ ಹೋಗೋಣ.

(ಎಲ್ಲರೂ ಕುಳಿತುಕೊಳ್ಳುವರು. ಗಂಟುಗಳನ್ನು ಇಳಿಸುವರು. ಕೆರೆಗೆ ಹೋಗಿ ಕೈ ತೊಳೆದುಕೊಂಡು ಬರುವರು.)

ನಾಗಮ್ಮ : ಕಾದಿದವರ ಹಳ್ಳಿ ದಾಟಿ ಬರುವಾಗ ನಿನ್ನೆ ಒಂದು ಗುಂಪು ನಂದಿಹಳ್ಳಿ ಕಡೆಯಿಂದ ಕಿತ್ತೂರು ಕಡೆ ಹೋಯ್ತು. ನಾವು ಈ ಕಡೆ ಬಂದ್ವಿ. ಬರುವಾಗ ಹಾದಿಯಲ್ಲಿ ರೈತರು ಕೊಟ್ಟಿರುವ ರೊಟ್ಟಿಗಳಿವೆ. ನಿಮಗೆಲ್ಲ ಕೊಡ್ತೀನಿ. ಊಟ ಮಾಡ್ರಿ.

ತುಕಾ : ಎನಗೆ ಹಾಲೂಟವನಿಕ್ಕುವ ತಾಯೆ
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಳಿಪ್ಪ ತಾಯೆ
ಪರವಸ್ತುವ ನಂಬಿದ ತಾಯೆ.

ನಾಗಮ್ಮ : (ಬಿಕ್ಕುತ್ತ) ಅದೆಲ್ಲ ಹೋಯ್ತಪ್ಪಾ. ಈಗ ಈ ರೀತಿ ಅಡವಿ ಪಾಲಾಗಿ ದಿಕ್ಕೆಟ್ಟು ಹೋಗೋದು ದೈವಕ್ಕೆ ಬಂದಿದೆ.

ತುಕಾ : ಬಸವನ ಗುರು ತಾಯೆ ! ಅಕ್ಕ ನಾಗಾಯಿ ತಾಯೆ ॥

(ದುಃಖಿಸುತ್ತ ಎಲ್ಲರಿಗೆ ರೊಟ್ಟಿ ಕೊಡುವಳು. ಎಲ್ಲರೂ ಕೈ ಮುಗಿದು ರೊಟ್ಟಿ ಮುರಿಯಬೇಕು ಎನ್ನುವಷ್ಟರಲ್ಲಿ ಸೈನಿಕರು ಬರುವರು)

ಸೈನಿಕ ೧ : ಇಲ್ಲಿದಾರೆ ಬರ್ರಿ, (ಎಲ್ಲ ಸೈನಿಕರು ಬರುವರು)
(ಶರಣರು ರೊಟ್ಟಿಗಳನ್ನು ಅರಿವೆಯ ಮೇಲಿಟ್ಟು ಖಡ್ಗ ಧರಿಸಿ ಸಜ್ಜಾಗುವರು)

ಚೆನ್ನಬಸವಣ್ಣ : ಕಕ್ಕಯ್ಯನವರೆ, ನೀವು ಬಹಳ ಗಾಯಗೊಂಡಿದ್ದೀರಿ. ನೀವು ವಿಶ್ರಾಂತಿ ತಗೊಳ್ರಿ.

ಕಕ್ಕಯ್ಯ : ತುಕಾ, ಅಮ್ಮನ್ನ ಅಣ್ಣನ್ನ ಮೊದಲು ಪಾರು ಮಾಡು.

(ತುಕಾ ಒಲ್ಲದ ಅವರನ್ನ ಒತ್ತಾಯದಿಂದ ಮರೆಗೆ ಒಯ್ಯುವನು)

(ಕಕ್ಕಯ್ಯ ಹೋರಾಡಿ ಇಬ್ಬರನ್ನು ಉರುಳಿಸುವನು. ತನ್ನ ಗಾಯ ನೋಡಿಕೊಳ್ಳುತ್ತಿರಲು ಮೂರನೆಯವನು ಏರಿ ಬರುವನು. ಪುನಃ ಯುದ್ಧ. ಇಬ್ಬರೂ ಗಾಯಗೊಂಡು ಉರುಳುವರು. ಸೈನಿಕ ಮೊದಲು ಸಾಯುವನು.

(ಮರೆಯಿಂದ ತಾಯಿಯನ್ನು ತುಕಾನ್ನು ತಳ್ಳಿ ಚೆನ್ನಬಸವಣ್ಣ ಮುಂದೆ ಬರುವನು. ತುಕಾ, ನಾಗಾಯಿ, ಕಕ್ಕಯ್ಯನ ಹೆಂಡತಿ ಎಲ್ಲ ಶರಣರು ಕಕ್ಕಯ್ಯನ ಹತ್ತಿರ ಬರುವರು)

ಚೆನ್ನಬಸವಣ್ಣ : ಕಕ್ಕಯ್ಯನೋರೆ, ನಮ್ಮ ಮೇಲಿನ ಕಂಟಕವನ್ನು ನೀವು ನಿಮ್ಮ ಮೇಲೆ ತಗೊಂಡಿರಿ, ನಮ್ಮನ್ನು ರಕ್ಷಿಸಿದಿರಿ. ನಿಮ್ಮ ಉಪಕಾರಕ್ಕೆ ಎಣೆಯಿಲ್ಲ. ನಿಮ್ಮನ್ನು ಒಬ್ಬರನ್ನೇ ಬಿಟ್ಟು ಇರುವಂತೆ ನನ್ನನ್ನೂ ಯಾಕೆ ಹಿಡಿದಿಡ ಹಚ್ಚಿದಿರಿ ? ನಿಮ್ಮೊಂದಿಗೆ ನಾನೂ ಕಾದಬಹುದಿತ್ತಲ್ಲ.

ಕಕ್ಕಯ್ಯ : ಚೆನ್ನಪ್ಪಾ, ನಮ್ಮಂಥೋರ ಸಾವಿರ ದಂಡಾಳು ಹುಟ್ಟಬಹುದು, ಸಾಯಬಹುದು, ಆದರೆ ನಿನ್ನಂಥಾ ಒಬ್ಬ ದಂಡನಾಯಕ ಮಾತ್ರ ಬೇಕೆಂದರೆ ಸಿಗ್ತಾನೆಯೇ ? ನೀನು ಉಳೀಬೇಕಪ್ಪಾ, ಭೂಮಿ ಭಾಗ್ಯ ನೀನು ! ಭೂಮಿಗೆ ಭಾರ ನಾವು !

ಚೆನ್ನಬಸವಣ್ಣ : ಇಲ್ಲ ಕಕ್ಕಯ್ಯನೋರೆ, ನೀವು ಭೂಮಿಯ ಭಾಗ್ಯ, ಭುವನದ ಭಾಗ್ಯ. ನಿಮ್ಮನ್ನು ಕಳಕೊಂಡು ಜೀವಿಸುವ ನಾವು ಭೂಮಿಗೆ ಭಾರ ಹುಳ.

ಕಕ್ಕಯ್ಯನ ಹೆಂಡತಿ : (ಕಕ್ಕಯ್ಯನ ಮೇಲೆ ಬಿದ್ದು ಅಳುವಳು) ಧಣೀ... ಇನ್ನ ನನ್ನ ಯಾರ ಉಡಿದಾಗ ಹಾಕಿ ಹೊಂಟೀರಿ ?

ಕಕ್ಕಯ್ಯ : ದಂಡನಾಯಕರೆ, ಎಂಥಾ ಕನಸಿನ ಹಿಂದ ಬೆನ್ನ ಹತ್ತಿ ನಾ ಈ ದೇಶಕ್ಕ ಬಂದೆ. ನನ್ನವರು ಅಂತ ಯಾರೂ ಇಲ್ಲದಲ್ಲಿ ನಿಮ್ಮೆಲ್ಲರ ಪ್ರೀತಿ ಗಳಿಸಿದೆ. ಆದರೂ ಇಂಥ ನಾ ಹಿಂಗ ಇಲ್ಲಿ ಈ ಅಡವೀ ಬೈಲಾಗ ಬಿದ್ದ ಸಾಯೂ ಹಂಗ ಆಯ್ತಲ್ಲ.

ಚೆನ್ನಬಸವಣ್ಣ : ಕಕ್ಕಯ್ಯನೋರೆ, ನೀವು ಮಹಾಂತರು, ಸಂತರು, ನೀವು ಪ್ರಾಣ ಬಿಡುವ ಈ ಸ್ಥಳ ನಿಮ್ಮ ಹೆಸರಿನಿಂದೇ ಪ್ರಸಿದ್ಧವಾಗುವುದು. ಇಲ್ಲಿ ಹತ್ತಿರದ ಹಳ್ಳಿ ಕಕ್ಕೇರಿ ಎಂದೇ ನಿಮ್ಮನ್ನು ಅಜರಾಮರಗೊಳಿಸುತ್ತ ಪ್ರಸಿದ್ಧವಾಗುವದು. ಈ ಕೆರೆ ಕಕ್ಕಯ್ಯನ ಕೆರೆ ಎಂದೇ ಹೆಸರು ಪಡೆಯುವುದು. ನೀವು ಜನಾಂಗದ ಉದ್ಧಾರಕ್ಕಾಗಿ ಜೀವ ತೆರುತ್ತಿರುವವರು. ಜನಾಂಗವಿರುವರೆಗು ನಿಮ್ಮ ಹೆಸರು ಅಜರಾಮರವಾಗುವುದು.

ಕಕ್ಕಯ್ಯ : ಇಲ್ಲಿ ನನ್ನ ಸಮಾಜದವರು. ನಮ್ಮ ವಂಶದವರು ಯಾರೂ ಇಲ್ಲ. ಇಲ್ಲಿ ಯಾರ ಅದಾರ ನನ್ನ ನೆನಸಾಕ ? ನನ್ನ ನಂಬಿದ ಈ ಜೀವ ಸಾಕಾಕ ?

ಚೆನ್ನಬಸವಣ್ಣ : ನೀವು ಜಾತೀ ಮೀರಿ ಬೆಳೆದವರು. ನಿಮ್ಮ

ಜಾತ್ಯಾವರು ಯಾರೂ ಇಲ್ಲದಿದ್ದರೂ ಈ ಊರ ಜನ ನಿಮ್ಮ ಹೆಸರಿನಲ್ಲಿ ವರ್ಷಾ ನಿಮ್ಮನ್ನ ಸ್ಮರಿಸಿಕೊಂಡು ಜಾತ್ರಿ ಮಾಡ್ತಾರು.

ಕಕ್ಕಯ್ಯ : ನಾ ಹೊಂಟೆ. ಅಕಿನ್ನ ನಿಮ್ಮ ಉಡಿದಾಗ ಹಾಕೀನಿ.

ನಾಗಮ್ಮ : (ಕಕ್ಕಯ್ಯನ ಹೆಂಡತಿಗೆ ಸಂತೈಸುತ್ತಾ) ಅಕ್ಕಾ, ನಾ ಜೀವಂತ ಇರೂವರೆಗೂ ನಿಮ್ಮನ್ನ ನನ್ನ ನೆಳ್ಳಿನ್ಹಾಂಗ ಸಾಕತೇನಿ

ಕಕ್ಕಯ್ಯ : ತುಕಾ...

ತುಕಾ : ಕಕಾ, ನೀವು ಇಷ್ಟ ದೊಡ್ಡ ಕೆಲಸ ಮಾಡೀರಿ. ಅಂದಾಗ ನಮ್ಮ ಜನ ಎಲ್ಲೆಲ್ಲಿ ಅದಾರ ಅಲ್ಲಲ್ಲೆಲ್ಲ ಹೋಗಿ ನಾನು ನಿಮ್ಮ ಕಥೀ ಅವರಿಗೆ ಹೇಳ್ತೀನಿ. ಕಕ್ಕಯ್ಯನ ಸಮಾಜ ಬೆಳಸ್ತೀನಿ.

ಕಕ್ಕಯ್ಯನ ಹೆಂಡತಿ: (ಅಳುತ್ತಾ) ನಾ ಪರದೇಸಿಯಾದೆ.

ನಾಗಮ್ಮ : ಅಕ್ಕಾ, ಹಂಗ ಅನಬ್ಯಾಡ್ರಿ, ನಾ ಅದೀನಿ, ಚೆನ್ನಬಸವಣ್ಣ ಅದಾನ, ತುಕಾ ಅದಾನ.

ಕಕ್ಕಯ್ಯ : ತುಕಾ, ನೀ ಮೊದಲ ಈ ಯಮ್ಮನ್ನ, ಚೆನ್ನಬಸವಣ್ಣೋರ್ನ ಉಳ್ವಿಗಿ ಮುಟ್ಟಿಸು, ಅವರು ಸುರಕ್ಷಿತ ಉಳಿವಿಗಿ ತಲುಪಿದ್ರು, ಅಂತ ನೀ ಹೊಳ್ಳಿ ಬಂದ ಹೇಳೂಮಟಾ ಜೀವ ಹಿಡಕೊಂಡ ಇರತಕನಿ, ಅವಸರ ಮಾಡು.

ಚೆನ್ನಬಸವಣ್ಣ : ಕಕ್ಕಯ್ಯನೋರೆ, ಇಂಥಾ ಸ್ಥಿತಿಯಲ್ಲಿ ನಿಮ್ಮನ್ನು ಬಿಟ್ಟು ನಾವು ಹ್ಯಾಂಗ ಹೋಗೋಣ ?

ಕಕ್ಕಯ್ಯ : ಇನ್ನ ನನ್ನ ಶಕ್ತೀ ಪರೀಕ್ಷಾ ಮಾಡಬ್ಯಾಡ್ರಿ, ದ್ಯಾವರು. ಬ್ಯಾಗ ನೀವು ಉಳಿವಿ ತಲುಪಿ ನನಗ ಸುದ್ದಿ ಕಳಿಸಿರಿ. ಅಂದರ ನಿಶ್ಚಿಂತಲೆ ಪ್ರಾಣಾ ಬಿಡ್ತೀನಿ. ನಡೀರಿ ಹು... ಬ್ಯಾಗ.

(ಕಕ್ಕಯ್ಯನ ಒತ್ತಾಯಕ್ಕೆ ಕಕ್ಕಯ್ಯನ ಹೆಂಡತಿ, ನಾಗಮ್ಮ, ತುಕಾ ಚೆನ್ನಬಸವಣ್ಣ ಹೋಗುವರು)

ಕಕ್ಕಯ್ಯನ ಹೆಂಡತಿ: (ಮತ್ತೆ ಓಡುತ್ತ ಬಂದು) ಧಣೀ (ಬಂದು ಬೀಳುವಳು.)

ಕಕ್ಕಯ್ಯ : (ಸಿಟ್ಟಿನಿಂದ ನೋಡತೊಡಗುವನು.) ನೀ ಅವರ ಕೂಡ ಹೋಗು...

(ಎಲ್ಲರೂ ಮತ್ತೆ ಬಂದು ದುಃಖಿಸುತ್ತಲೇ ಅವಳನ್ನು ಕರೆದೊಯ್ಯುವರು.)

ಶರಣರು : ಕಕ್ಕಯ್ಯನವರ ಆರೈಕಿಗಿ ನಾವು ಇರ್ತಿವಿ. ನಡೀರ ದಣ್ಣಾಯಕರೆ...

(ದುಃಖಿಸುವರು)

(ಕತ್ತಲೆ)

(ಬೆಳಕು ಚೆಲ್ಲಿದಾಗ ಏಕತಾರಿ ಬಾರಿಸುತ್ತಾ ದಾಸಯ್ಯನೊಬ್ಬ ಬರ್‍ತಾನೆ)

ದಾಸಯ್ಯ : ಹೀಂಗ ಹಿಂದಕ ಕಕ್ಕಯ್ಯ ಅಂತಾ ಒಬ್ಬ ದೊಡ್ಡ ಸಂತ ಆಗಿ ಹ್ವಾದ. ಅಂವ ಕಾದಿ ಪ್ರಾಣ ಬಿಟ್ಟ ಸ್ಥಳ ಕಕ್ಕೇರಿ ಅಂತ ಪ್ರಸಿದ್ಧ ಅದ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನಾಗ ಅಳ್ನಾವರಕ್ಕ ಹೋಗೊ ಹೆದ್ದಾರಿ ಮ್ಯಾಲ ಈ ಊರ ಐತಿ. ಊರ ಬಯಲಲ್ಲಿ ಕಕ್ಕಯ್ಯನ ಕೆರಿ. ಕಕ್ಕಯ್ಯನವರ ಜೀವಂತ ಸಮಾಧಿ ಇವೆ. ಚೆನ್ನಬಸವಣ್ಣನವರು ಉಳಿವಿಗೆ ಸುರಕ್ಷಿತವಾಗಿ ಮುಟ್ಟಿದ ಸುದ್ದಿ ಬರೂತನಾನೂ ಅವರು ಜೀವ ಹಿಡಕೊಂಡಿದ್ದು ಜೀವಂತವಾಗಿ ಸಮಾಧಿ ಸೇರಿ ಐಕ್ಯರಾದರು ಅಂತ ಹೇಳ್ತಾರೆ. ಈ ಕಕ್ಕೆರ್‍ಯಾಗ ಕಕ್ಕಯ್ಯನವರ ಸಮಾಜದವರು ಒಬ್ಬರೂ ಇಲ್ಲ. ಆದರೂ ಪ್ರತಿ ವರ್ಷ ಶಿವರಾತ್ರಿಯಂದು ಅವರ ಹೆಸರಿನಲ್ಲಿ ಜಾತ್ರೆ ನಡೀತದೆ. ಅನ್ನ ಸಂತರ್ಪಣೆ ಯಾಗ್ತದೆ. ಇಂಥ ಶರಣರ ಆತ್ಮ ಇನ್ನೂ ಆ ಸ್ಥಳದಲ್ಲಿ ಇದ್ದು, ಜಗತ್ತಿನ ಹಿತಕ್ಕಾಗಿ ತಪಸ್ಸ ಮಾಡ್ತಿರ್‍ತದ ಅಂತಾರ.

(ಏಕತಾರಿ ಬಾರಿಸುತ್ತಾ ಹೋಗುವನು.

(ಕತ್ತಲೆ.)

# ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರು

ಅಧ್ಯಕ್ಷರು :

ಶ್ರೀ ಸಿ. ಜಿ. ಕೃಷ್ಣಸ್ವಾಮಿ

ಸದಸ್ಯರು :

ಡಾ|| ಸಿದ್ಧಲಿಂಗ ಪಟ್ಟಣಶೆಟ್ಟಿ
ಶ್ರೀ ಚೆನ್ನವೀರ ಝುಳಕಿ
ಶ್ರೀ ಪಿ. ಮುನಿರೆಡ್ಡಿ
ಶ್ರೀಮತಿ ಕೆ. ನಾಗರತ್ನಮ್ಮ
ಶ್ರೀ ಶಿವರಾಂ
ಶ್ರೀ ಸಿ. ಎಂ. ನರಸಿಂಹಮೂರ್ತಿ
ಶ್ರೀ ಶಂಕ್ರಯ್ಯ ಘಂಟಿ
ಶ್ರೀ ಎಸ್. ವಿ. ಪಾಟೀಲ್
ಶ್ರೀಮತಿ ವಿಶ್ವೇಶ್ವರಿ ಹಿರೇಮಠ
ಶ್ರೀ ಚಿಂದೋಡಿ ಶಂಭುಲಿಂಗಪ್ಪ
ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್
ಶ್ರೀ ಕೆ. ವಿ. ನಾಗರಾಜಮೂರ್ತಿ
ಶ್ರೀ ಕಾಸರಗೋಡು ಚಿನ್ನ
ಶ್ರೀ ಟಿ. ರಘು
ಶ್ರೀ ಎಂ. ಸಂಪಂಗಿ
ಶ್ರೀ ಎಚ್. ಎಸ್. ನೀಲಕಂಠ
ಶ್ರೀಮತಿ ಎಸ್. ಮಾಲತಿ
ಶ್ರೀ ಸಿ. ಕೆ. ಗುಂಡಣ್ಣ
ಶ್ರೀಮತಿ ಪಂಕಜ ರವಿಶಂಕರ್
ಶ್ರೀ ಕಾಗೋಡು ಅಣ್ಣಪ್ಪ
ಶ್ರೀ ಎಚ್. ಎಸ್. ಉಮೇಶ್
ಶ್ರೀ ಮಾ. ನರಸಿಂಹಮೂರ್ತಿ
ಶ್ರೀ ಐ. ಕೆ. ಬೋಳುವಾರ
ಶ್ರೀ ಹೂಲಿಶೇಖರ್

ಅರ್ಥ ಸದಸ್ಯರು :

ಶ್ರೀ ಕೆ. ಮಧುಸೂಧನ್

ರಿಜಿಸ್ಟ್ರಾರ್ :

ಶ್ರೀ ಬಿ. ಟಿ. ಮುನಿರಾಜಯ್ಯ